23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 253 | ನವದೆಹಲಿ | ಬೆಲೆ ₹10 | ಮಾರ್ಚ್ 19 2026, ಗುರುವಾರ




**ನಾಡಿನ ಸಮಸ್ತ ಜನತೆಗೆ, ಓದುಗರಿಗೆ ಹಿತೈಷಿಗಳಿಗೆ ಯುಗಾದಿ ಹಬ್ಬದ ಶುಭಾಶಯಗಳು**

ಹಬ್ಬದ ಪ್ರಯುಕ್ತ 19–3–2026 ರಂದು ಕಚೇರಿಗೆ ಬಿಡುವು ಇರುವುದರಿಂದ ಮಾ.20ರ ಸಂಚಿಕೆ ಪ್ರಕಟವಾಗುವುದಿಲ್ಲ

- ಸಂಪಾದಕರು

## ಒಳಪುಟಗಳಲ್ಲಿ

**ಕೆಪಿಎಸ್‌ಸಿ ಮೋಸ ಎಂದು ಪ್ರಪಂಚಕ್ಕೇ ತಿಳಿದಿದೆ: ಅಶೋಕ್ - ಪು.4**

# ವಿಮಾನ ನಿಲ್ದಾಣದ ಸುತ್ತಲ ಕಟ್ಟಡ ಎತ್ತರದ ಮಿತಿಯಿಂದ ಅಭಿವೃದ್ಧಿಗೆ ತೊಡಕು

**ನವದೆಹಲಿ, ಮಾ.18:** ಬೆಂಗಳೂರಿನಲ್ಲಿರುವ ಎಚ್‌ಎಎಲ್, ಜಕ್ಕೂರು, ವಾಯುನೆಲೆ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಕಟ್ಟಡ ಎತ್ತರದ ಮಿತಿಯಿಂದ ಅಭಿವೃದ್ಧಿ ಕಾಮಗಾರಿಗೆ ತೊಡಕಾಗಿದ್ದು, ಈ ಮಿತಿಯ ಬಗ್ಗೆ ಪರಿಶೀಲನೆ ನಡೆಸುವಂತೆ ಕೇಂದ್ರ ನಾಗರಿಕ ವಿಮಾನಯಾನ ಸಚಿವರಿಗೆ ಮನವಿ ಮಾಡಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಾಹಿತಿ ನೀಡಿದರು.

**■ ಹೈದರಾಬಾದ್, ಮುಂಬೈನಂತೆ ಬೆಂಗಳೂರಿನಲ್ಲೂ ನಿಗದಿ ಪಡಿಸುವಂತೆ ಕೇಂದ್ರ ಸಚಿವರಿಗೆ ಮನವಿ: ಡಿ.ಕೆ.ಶಿವಕುಮಾರ್**

ಕೇಂದ್ರ ವಿಮಾನಯಾನ ಸಚಿವ ರಾಮಮೋಹನ್ ರೆಡ್ಡಿ ಅವರನ್ನು ಬುಧವಾರ ಭೇಟಿಮಾಡಿದ ಬಳಿಕ ಶಿವಕುಮಾರ್ ಅವರು ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿ, ಹೈದರಾಬಾದ್, ಮುಂಬೈ ಸೇರಿದಂತೆ ಬೇರೆ ಕಡೆಗಳಲ್ಲಿ ಮಿತಿ ಕಡಿಮೆ ಇದೆ. ಅದರಂತೆ ಬೆಂಗಳೂರಿನಲ್ಲೂ ಎತ್ತರದ ಮಿತಿ ಇರಬೇಕು ಎಂದು ಮನವಿ ಮಾಡಿದ್ದೇವೆ. ಕಟ್ಟಡ ಎತ್ತರದ ಮಿತಿಯಿಂದಾಗಿ ಬೆಂಗಳೂರಿನಲ್ಲಿ ನಾಗರಿಕರು ಪ್ರೀಮಿಯಂ ಎಫ್‌ಎಆರ್ ತೆಗೆದುಕೊಳ್ಳಲು ಹಿಂಜರಿಯುತ್ತಿದ್ದಾರೆ. ಇದರಿಂದ ಸರ್ಕಾರಕ್ಕೂ ಹಣ ಬರುತ್ತಿಲ್ಲ. ಕೇಂದ್ರ ಸರ್ಕಾರವೇ ಎಫ್‌ಎಆರ್ ಕಡಿಮೆ ಮಾಡಿ ಪ್ರೀಮಿಯಂ ಎಫ್‌ಐಆರ್ ಹೆಚ್ಚಿಸಿ ಎಂದು ಹೇಳುತ್ತದೆ. ಹೀಗಾಗಿ ನಾವು ಅನೇಕ ತೀರ್ಮಾನ ಮಾಡಬೇಕಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚಿಸಲಾಗಿದೆ. ಅವರು ರಕ್ಷಣಾ ಸಚಿವರ ಜತೆ ಮಾತನಾಡುವುದಾಗಿ ತಿಳಿಸಿದ್ದಾರೆ. ನಮ್ಮ ಅಧಿಕಾರಿಗಳು ಎಚ್‌ಎಎಲ್ ಜತೆ ಚರ್ಚೆ ಮಾಡಿದ್ದಾರೆ. ನಾನು ಕೂಡ ರಕ್ಷಣಾ ಸಚಿವರ ಭೇಟಿಗೆ ಸಮಯ ತೆಗೆದುಕೊಂಡು ನಮ್ಮ ಈ ಸಮಸ್ಯೆಗಳನ್ನು ಅವರಿಗೆ ವಿವರಿಸುತ್ತೇನೆ. ಬೆಂಗಳೂರಿನ ಅಭಿವೃದ್ಧಿಗಾಗಿ ನಾವು ಒಂದು ಪರಿಹಾರ ಕಂಡುಕೊಳ್ಳುತ್ತೇವೆ ಎಂದು ತಿಳಿಸಿದರು.



### ವಿಮಾನ ನಿಲ್ದಾಣ ಅಭಿವೃದ್ಧಿ ಮತ್ತು ಪ್ರಾದೇಶಿಕ ಸಂಪರ್ಕಕ್ಕೆ ಒತ್ತು

ಕರ್ನಾಟಕದ ಪ್ರಮುಖ ವಿಮಾನಯಾನ ಮೂಲಸೌಕರ್ಯ ಯೋಜನೆಗಳ ಕುರಿತು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಅವರೊಂದಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಬೋಸರಾಜು ಚರ್ಚೆ ನಡೆಸಿದರು. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವ ನಿರೀಕ್ಷೆಯಿರುವ ನಿರ್ಣಾಯಕ ಯೋಜನೆಯಾದ ರಾಯಚೂರು ವಿಮಾನ ನಿಲ್ದಾಣದ ಅಭಿವೃದ್ಧಿ ಮತ್ತು ಉಡಾನ್ ಯೋಜನೆಯಡಿಯಲ್ಲಿ ಕಲಬುರಗಿಗೆ ವಿಮಾನ ಕಾರ್ಯಾಚರಣೆಯನ್ನು ಪುನರುಜ್ಜೀವನ ಗೊಳಿಸುವ ಕುರಿತು ಮಾತುಕತೆಗಳು ಗಮನಹರಿಸಿದವು. ಕೇಂದ್ರ ಸಚಿವರು ಪ್ರಸ್ತಾವನೆಗಳಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು ಮತ್ತು ಕಲಬುರಗಿಗೆ ವಿಮಾನಗಳ ಪುನರಾರಂಭಕ್ಕೆ ಅನುಕೂಲವಾಗುವಂತೆ ವಿಮಾನಯಾನ ಸಂಸ್ಥೆಗಳೊಂದಿಗೆ ಚರ್ಚೆಗಳನ್ನು ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿದರು.

### ಸರ್ಕಾರಕ್ಕೆ ಸಹಕಾರ ನೀಡದ ನೈಸ್‌ಗೆ ತಕ್ಕ ಉತ್ತರ

ಎರಡೂವರೆ ವರ್ಷಗಳ ಪ್ರಯತ್ನದ ನಂತರ ಈಗ ಕೆಂಪೇಗೌಡ ಲೇಔಟ್‌ನಲ್ಲಿ ಸ್ಕೈಡೆಕ್ ನಿರ್ಮಿಸಲು ಮುಂದಾಗಿದ್ದೇವೆ. ವಿಮಾನ ನಿಲ್ದಾಣ ಸುತ್ತಮುತ್ತ 20 ಕಿ.ಮೀ ದೂರದಲ್ಲಿ ಇದನ್ನು ಮಾಡಲು ಸಾಧ್ಯವಿಲ್ಲ. ಎನ್‌ಜಿಇಎಫ್ ಬಳಿ ಸ್ಕೈಡೆಕ್ ಮಾಡಲು ಜಾಗ ಉತ್ತಮವಾಗಿತ್ತು. ಮೆಟ್ರೋ ಸೌಲಭ್ಯವಿತ್ತು. ಜತೆಗೆ ನೈಸ್ ರಸ್ತೆ ಬಳಿ ಸೋಂಪುರ ವೃತ್ತದ ಬಳಿ ನಿರ್ಮಾಣಕ್ಕೆ ಸಲಹೆ ನೀಡಿದ್ದರು. ಆದರೆ ನೈಸ್ ಸಂಸ್ಥೆಯವರು ಸಹಕಾರ ನೀಡಲಿಲ್ಲ. ನೈಸ್ ಸಂಸ್ಥೆ ವಿಚಾರವಾಗಿ ಏನು ಮಾಡಬೇಕು ಎಂದು ಮುಂದೆ ತೀರ್ಮಾನ ಮಾಡುತ್ತೇವೆ. ಅವರು ನಿರಾಕ್ಷೇಪಣಾ ಪತ್ರವನ್ನು ನೀಡಲಿಲ್ಲ. ಸರ್ಕಾರಕ್ಕೆ ಸಹಕಾರ ನೀಡದವರಿಗೆ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

### 2ನೇ ವಿಮಾನ ನಿಲ್ದಾಣ: ಚರ್ಚಿಸಿ ತೀರ್ಮಾನ


ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ವಿಚಾರವಾಗಿ ಕೇಂದ್ರ ಸರ್ಕಾರ ಅಭಿಪ್ರಾಯ ತಿಳಿಸಿದ್ದು, ನೀವೇ ಜಾಗ ನಿಗದಿ ಮಾಡಿ ಎಂದು ಹೇಳಿದೆ. ರಾಜ್ಯ ಸರ್ಕಾರದ ಬಳಿ ಎರಡು ಮೂರು ಆಯ್ಕೆಗಳಿದ್ದು, ಸಾಧಕ ಬಾಧಕಗಳನ್ನು ಚರ್ಚೆಮಾಡಿ ತೀರ್ಮಾನ ಮಾಡಲಾಗುವುದು. ಬೆಂಗಳೂರಿಗೆ ವಾಪಸಾದ ಬಳಿಕ ಕೇಂದ್ರದ ಅಭಿಪ್ರಾಯ ಪರಿಶೀಲನೆ ಮಾಡುತ್ತೇನೆ. ವಿಮಾನ ನಿಲ್ದಾಣ ನಿರ್ಮಾಣದ ಜವಾಬ್ದಾರಿ ಸಚಿವ ಎಂ.ಬಿ. ಪಾಟೀಲ್ ಅವರು ನೋಡಿಕೊಳ್ಳುತ್ತಾರೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

# ಕೇಂದ್ರ ಪ್ರಾಯೋಜಿತ ಯೋಜನೆಯಡಿ ರಾಜ್ಯದ ನೀರಾವರಿ ಯೋಜನೆಗಳಿಗೆ 3 ಸಾವಿರ ಕೋಟಿ

### ಆರಂಭಿಕ ಅನುಮೋದನೆ ಕೋರಿದ ರಾಜ್ಯದ ಮನವಿಗೆ ಕೇಂದ್ರದಿಂದ ಸಕಾರಾತ್ಮಕ ಸ್ಪಂದನೆ: ಸಚಿವ ಬೋಸರಾಜು ಪ್ರಶಂಸೆ

**ನವದೆಹಲಿ, ಮಾ.18:** ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY) ಮತ್ತು ದುರಸ್ತಿ, ನವೀಕರಣ ಮತ್ತು ಪುನಃಸ್ಥಾಪನೆ (RRR) ಯೋಜನೆಗಳ ಅಡಿಯಲ್ಲಿ 3,052 ಕೋಟಿ ಮೌಲ್ಯದ ನೀರಾವರಿ ಯೋಜನೆಗಳಿಗೆ ಕರ್ನಾಟಕವು ತ್ವರಿತ ಅನುಮೋದನೆಯನ್ನು ಕೋರಿದೆ, ಇದಕ್ಕೆ ಕೇಂದ್ರ ಸರ್ಕಾರ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು ಹೇಳಿದರು.

ನವದೆಹಲಿಗೆ ಭೇಟಿನೀಡಿದ ಸಂದರ್ಭದಲ್ಲಿ, ಸಚಿವರು ಕೇಂದ್ರ ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಜ್ಞಾಪಕಪತ್ರ ಸಲ್ಲಿಸಿದರು, ಪ್ರಸ್ತುತ ಸಚಿವಾಲಯದೊಳಗೆ ವಿವಿಧ ಹಂತಗಳಲ್ಲಿ ಬಾಕಿ ಇರುವ ಪ್ರಸ್ತಾವನೆಗಳನ್ನು ಶೀಘ್ರವಾಗಿ ತೆರವುಗೊಳಿಸುವಂತೆ ಒತ್ತಾಯಿಸಿದರು. ರಾಜ್ಯ ಸರ್ಕಾರವು ಈಗಾಗಲೇ ಬಜೆಟ್‌ನಲ್ಲಿ ತನ್ನ 40% ಪಾಲನ್ನು ನಿಧಿಯಿಂದ ನಿರೀಕ್ಷಿಸಲಾಗಿದೆ. ತ್ವರಿತ ಅನುಷ್ಠಾನಕ್ಕಾಗಿ ನಾವು ಆರಂಭಿಕ ಅನುಮೋದನೆಗಳನ್ನು ಕೋರಿದ್ದೇವೆ ಮತ್ತು ಕೇಂದ್ರ ಸಚಿವರಿಂದ ಪ್ರತಿಕ್ರಿಯೆ ಉತ್ತೇಜನಕಾರಿಯಾಗಿದೆ" ಎಂದು ಬೋಸರಾಜು ಹೇಳಿದರು.



ಸಭೆಗಳಲ್ಲಿ ನವದೆಹಲಿಯಲ್ಲಿ ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಸಂಸದ ಕುಮಾರನಾಯಕ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಮತ್ತು ಸಣ್ಣ ನೀರಾವರಿ ಕಾರ್ಯದರ್ಶಿ ಬಿ.ಕೆ. ಪವಿತ್ರಾ ಸೇರಿ ಅಧಿಕಾರಿಗಳು ಭಾಗವಹಿಸಿದ್ದರು.

# ದೇವೇಗೌಡರು ನಮ್ಮನ್ನು (ಕಾಂಗ್ರೆಸ್) ಪ್ರೀತಿಸಿ ಮೋದಿಯನ್ನು ಮದುವೆಯಾದರು

**ನವದೆಹಲಿ, ಮಾ.18:** ರಾಜ್ಯಸಭೆಯಲ್ಲಿ ನಡೆದ ಬೀಳ್ಕೊಡುಗೆ ಕಾರ್ಯಕ್ರಮದ ವೇಳೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಮಾತುಗಳಿಗೆ ಸದನವೇ ನಗೆಗಡಲಲ್ಲಿ ತೇಲಿಹೋಯಿತು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರನ್ನು ಉಲ್ಲೇಖಿಸಿ ಮಾತನಾಡಿದ ಖರ್ಗೆ, "ದೇವೇಗೌಡರು ನಮ್ಮನ್ನು (ಕಾಂಗ್ರೆಸ್) ಪ್ರೀತಿಸಿದರು, ಆದರೆ ಕೊನೆಗೆ ನರೇಂದ್ರ ಮೋದಿ ಅವರನ್ನು ಮದುವೆಯಾದರು" ಎಂದು ಚಟಾಕಿ ಹಾರಿಸಿದರು. ಈ ಮಾತಿಗೆ ಪ್ರಧಾನಿ ಮೋದಿ ಸೇರಿ ಸದನದಲ್ಲಿದ್ದ ಸದಸ್ಯರು ನಕ್ಕರು.

ಈ ಸಂದರ್ಭ ಜೆಡಿಎಸ್–ಬಿಜೆಪಿ ಮೈತ್ರಿಯನ್ನು ವ್ಯಂಗ್ಯವಾಗಿ ಟೀಕಿಸಿದ ಖರ್ಗೆ, ದೇವೇಗೌಡರೊಂದಿಗೆ ತಮ್ಮ 54 ವರ್ಷಗಳ ಸ್ನೇಹವನ್ನು ನೆನಪಿಸಿಕೊಂಡರು. ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ ಸಾರ್ವಜನಿಕ ಜೀವನದಲ್ಲಿ ಸೇವಾ ಮನೋಭಾವ ಮುಖ್ಯವೆಂದು ಹೇಳಿದರು. ಖರ್ಗೆಯವರ ಮಾತಿನ ಬಳಿಕ ಮಾತನಾಡಿದ ಪ್ರಧಾನಿ ಮೋದಿ, ದೇವೇಗೌಡ, ಖರ್ಗೆ ಹಾಗೂ ಇತರ ಹಿರಿಯ ನಾಯಕರ ಸಂಸದೀಯ ಅನುಭವವನ್ನು ಶ್ಲಾಘಿಸಿದರು. ದೇಶದ ಹೊಸ ಸಂಸದರು ಇವರಿಂದ ಸಾಕಷ್ಟು ಕಲಿಯಬೇಕಿದೆ ಎಂದು ಹೇಳಿದರು.



**■ ರಾಜ್ಯಸಭೆಯಲ್ಲಿ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಮಾತಿಗೆ ನಗೆಗಡಲಲ್ಲಿ ತೇಲಿದ ಸದಸ್ಯರು**

ಇತ್ತೀಚೆಗೆ ಕರ್ನಾಟಕದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಮಾಡಿಕೊಂಡಿರುವ ಹಿನ್ನೆಲೆ, ಖರ್ಗೆಯವರ ಈ ಹೇಳಿಕೆ ರಾಜಕೀಯ ವಲಯದಲ್ಲಿ ಗಮನ ಸೆಳೆಯಿತು. ಆದರೆ ಈ ಮಾತು ಹಾಸ್ಯಭರಿತವಾಗಿದ್ದು, ಸದನದಲ್ಲಿ ಸೌಹಾರ್ದ ವಾತಾವರಣ ನಿರ್ಮಾಣವಾಗಲು ಕಾರಣವಾಯಿತು.

**ಕಾಂಗ್ರೆಸ್ ನಾಯಕ ವರ್ತನೆ ಬಗ್ಗೆ ಕಳವಳ– ಬಹಿರಂಗ ಪತ್ರ:** ದೆಹಲಿಯಲ್ಲಿ ನಡೆದಿದ್ದ ಎಐ ಇಂಪ್ಯಾಕ್ಟ್ ಶೃಂಗಸಭೆಯ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರ ವರ್ತನೆ ಭಾರಿ ಚರ್ಚೆಗೆ ಕಾರಣವಾಗಿತ್ತು. ಇದೀಗ ಸಂಸತ್ತಿನ ದ್ವಾರದಲ್ಲಿ ಕುಳಿತು ಪ್ರತಿಭಟನೆ ಮಾಡಿದ್ದಲ್ಲದೆ ಚಹಾ–ಪಕೋಡಾ ಸೇವಿಸಿದ ರಾಹುಲ್ ಗಾಂಧಿಯ ವಿರುದ್ಧ 204 ನಿವೃತ್ತ ಅಧಿಕಾರಿಗಳ ಗುಂಪು ಬಹಿರಂಗ ಪತ್ರ ಬರೆದಿದೆ. ಸಶಸ್ತ್ರ ಪಡೆಗಳ 116 ಸಿಬ್ಬಂದಿ, 84 ಅಧಿಕಾರಿಗಳು (4 ಮಾಜಿ ರಾಯಭಾರಿಗಳು ಸೇರಿದಂತೆ) ಮತ್ತು 4 ಹಿರಿಯ ವಕೀಲರು ಸೇರಿದಂತೆ 204 ನಿವೃತ್ತ ಅಧಿಕಾರಿಗಳ ಗುಂಪು ಮಾರ್ಚ್ 12ರಂದು ಸಂಸತ್ತಿನ ಆವರಣದಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ವಿರೋಧ ಪಕ್ಷದ ಸಂಸದರ ವರ್ತನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ಬಹಿರಂಗ ಪತ್ರ ಬರೆದಿದೆ. ರಾಹುಲ್ ಗಾಂಧಿಯ ವಿರುದ್ಧ ಪತ್ರದಲ್ಲಿ ವಾಗ್ದಾಳಿ ನಡೆಸಿದ ಹಿರಿಯ ಅಧಿಕಾರಿಗಳು, ರಾಹುಲ್ ಗಾಂಧಿ ಸ್ಪೀಕರ್ ಅವರ ಸ್ಪಷ್ಟ ನಿರ್ದೇಶನವನ್ನು ನಿರ್ಲಕ್ಷಿಸಿದ್ದಾರೆ. ಇದು ದುರಹಂಕಾರದ ಮನೋಭಾವವನ್ನು ಪ್ರತಿಬಿಂಬಿಸುತ್ತದೆ ಎಂದು ಪತ್ರದಲ್ಲಿ ಹೇಳಲಾಗಿದೆ. ಇಂತಹ ವರ್ತನೆಗೆ ಕಾಂಗ್ರೆಸ್ ಹಾಗೂ ರಾಹುಲ್ ಗಾಂಧಿ ಕ್ಷಮೆಯಾಚಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ಕಾಂಗ್ರೆಸ್ ಜತೆಗಿನದ್ದು ಪ್ರೀತಿಯಲ್ಲ, ಬಲವಂತದ ಮದುವೆ: ಎಚ್‌ಡಿಡಿ

**■ ಖರ್ಗೆಗೆ ಹಾಸ್ಯಮಯವಾಗಿಯೇ ತಿರುಗೇಟು ನೀಡಿದ ಮಾಜಿ ಪ್ರಧಾನಿ ದೇವೇಗೌಡ**



**ಬೆಂಗಳೂರು, ಮಾ.18:** ಕಾಂಗ್ರೆಸ್ ಜೊತೆಗಿನದ್ದು ಪ್ರೀತಿಯಲ್ಲ, ಅದು ಒಂದು ಬಲವಂತದ ಮದುವೆಯಾಗಿತ್ತು. ಅದು ದುರುದ್ದೇಶಪೂರಿತ ಸಂಬಂಧವಾದ್ದರಿಂದ ರಾಷ್ಟ್ರೀಯ ಪಕ್ಷಕ್ಕೆ ವಿಚ್ಛೇದನ ನೀಡಬೇಕಾಯಿತು ಎಂದು ಮಾಜಿ ಪ್ರಧಾನಿ ಹಾಗೂ ಜೆಡಿ(ಎಸ್) ವರಿಷ್ಠ ಎಚ್.ಡಿ. ದೇವೇಗೌಡ ಅವರು ಬುಧವಾರ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ನಿವೃತ್ತಿಯಾಗಲಿರುವ ಸದಸ್ಯರಿಗೆ ಬುಧವಾರ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ದೇವೇಗೌಡರು 'ಪ್ರೀತಿ ಮಾಡಿದ್ದು ನಮ್ಮನ್ನು (ಕಾಂಗ್ರೆಸ್), ಆದರೆ ಮದುವೆಯಾಗಿದ್ದು ಮೋದಿ ಯನ್ನು' ಎಂದು ಹಾಸ್ಯಮಯವಾಗಿ ಹೇಳಿದ್ದರು. ಇದಕ್ಕೆ ಹಾಸ್ಯಮಯ ಶೈಲಿಯಲ್ಲಿಯೇ ದೇವೇಗೌಡರು ತಿರುಗೇಟು ನೀಡಿದ್ದಾರೆ. ಈ ಬಗ್ಗೆ ಖರ್ಗೆ ಅವರಿಗೆ ಪತ್ರ ಬರೆದಿರುವ ಅವರು, ನಾನು ಹಾಗೆ ಮಾಡಲು ಕಾರಣವೇನೆಂದು ಅವರಿಗೆ ಗೊತ್ತಿಲ್ಲ". ಯುಗಾದಿ ಹಬ್ಬಕ್ಕಾಗಿ ನಾನು ಬೆಂಗಳೂರಿಗೆ ತೆರಳುತ್ತಿದ್ದರಿಂದ ಖರ್ಗೆ ಅವರು ಮಾತನಾಡುತ್ತಿದ್ದಾಗ ಸದನದಲ್ಲಿ ಇರಲಿಲ್ಲ. "ನನ್ನ ಸ್ನೇಹಿತನಿಗೆ ಮದುವೆಯ ಭಾಷೆಯಲ್ಲಿಯೇ ಪ್ರತಿಕ್ರಿಯಿಸುತ್ತೇನೆ. ಕಾಂಗ್ರೆಸ್ ಜೊತೆಗಿನದ್ದು ಪ್ರೀತಿಯಲ್ಲ, "ಬಲವಂತದ ಮದುವೆ" ಮಾಡಿಕೊಂಡಿದ್ದೆ. ಆದರೆ ಅದು ದುರುದ್ದೇಶಪೂರಿತ ಸಂಬಂಧವಾದ್ದರಿಂದ ಮತ್ತು ಆ ಸಂಬಂಧದಲ್ಲಿ ಕಿರುಕುಳ, ಹಿಂಸೆ ಇದ್ದ ಕಾರಣ "ವಿಚ್ಛೇದನ" ನೀಡಬೇಕಾಯಿತು ಎಂದು ತಿಳಿಸಿದ್ದಾರೆ. ತಮ್ಮ ಹಾಗೂ ಕಾಂಗ್ರೆಸ್ ಪಕ್ಷದ ನಡುವಿನ ಸಂಬಂಧ ಹಾಗೂ ಕಹಿ ಅನುಭವಗಳ ಬಗ್ಗೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.


### ಖರ್ಗೆ ಅವರನ್ನು ಸಿಎಂ ಮಾಡಲು ಬಯಸಿದ್ದೆ

2018ರಲ್ಲಿ ಕಾಂಗ್ರೆಸ್ ನಾಯಕ ಗುಲಾಂ ನಬಿ ಆಜಾದ್ ಅವರನ್ನು ಕಳುಹಿಸಿ ಕುಮಾರಸ್ವಾಮಿಗೆ ಸಿಎಂ ಹುದ್ದೆಯನ್ನು ನೀಡಿತ್ತು ಎಂದು ದೇವೇಗೌಡರು ಖರ್ಗೆಗೆ ನೆನಪಿಸಿದ್ದಾರೆ. ಆದರೆ ಇದಕ್ಕೆ ನಾನು ಒಪ್ಪಲಿಲ್ಲ. ಕುಮಾರಸ್ವಾಮಿ ಬದಲಾಗಿ ಖರ್ಗೆ ಅವರನ್ನು ಮುಖ್ಯಮಂತ್ರಿ ಮಾಡಬೇಕೆಂದು ಎಲ್ಲರ ಸಮ್ಮುಖದಲ್ಲಿ ಹೇಳಿದ್ದೆ. ಸಿದ್ದರಾಮಯ್ಯ ಕೂಡ ಅಲ್ಲಿದ್ದರು. ಆದಾಗ್ಯೂ, ಕುಮಾರಸ್ವಾಮಿ ಅವರ ನಾಯಕತ್ವಕ್ಕೆ ಒತ್ತಾಯಿಸಿದರು. ಆದರೆ ಇಷ್ಟೆಲ್ಲಾ ಹಾಡು, ನೃತ್ಯ ಮತ್ತು ಮದುವೆ ನಂತರ ಅವರು 2019ರಲ್ಲಿ ಏನು ಮಾಡಿದರು, ಅವರು ನಮ್ಮನ್ನು ಕೈಬಿಟ್ಟರು ಎಂದಿದ್ದಾರೆ.

# ಹಾರ್ಮುಜ್ ಜಲಸಂಧಿ ದಾಟಲಿರುವ ಭಾರತದ ಮತ್ತೆರಡು ಎಲ್‌ಪಿಜಿ ಹೊತ್ತ ಹಡಗುಗಳು

**ನವದೆಹಲಿ, ಮಾ.18:** ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ದೇಶದಲ್ಲಿ ಅಡುಗೆ ಅನಿಲದ ಬಿಕ್ಕಟ್ಟು ಎದುರಾಗದಂತೆ ತನ್ನ ಇಂಧನ ಭದ್ರತೆಯನ್ನು ಹೆಚ್ಚಿಸಿಕೊಳ್ಳಲು ಭಾರತ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಈಗಾಗಲೇ ಹೊರ್ಮುಜ್ ಜಲಸಂಧಿಯಿಂದ ಸುರಕ್ಷಿತವಾಗಿ ಭಾರತ 2 ಎಲ್‌ಪಿಜಿ ಟ್ಯಾಂಕರ್‌ಗಳು ಹಾದು ಬಂದಿವೆ. ಈ ಬೆನ್ನಲ್ಲೇ, ತನ್ನ ದ್ರವೀಕೃತ ಪೆಟ್ರೋಲಿಯಂ ಅನಿಲ ಫ್ಲೀಟ್‌ಗೆ ಅಧಿಕ ಸಾಮರ್ಥ್ಯವುಳ್ಳ 2 ಹೆಚ್ಚುವರಿ ಹಡಗುಗಳನ್ನು ಸೇರಿಸುವ ಕಾರ್ಯ ಮಾಡುತ್ತಿದೆ. ಪಶ್ಚಿಮ ಏಷ್ಯಾದಲ್ಲಿನ ಪ್ರಾದೇಶಿಕ ಉದ್ವಿಗ್ನತೆಯಿಂದ ಎದುರಾಗುವ ಅಡೆತಡೆಗಳಿಂದ ದೇಶದ ಇಂಧನ ಪೂರೈಕೆ ಸರಪಳಿಯನ್ನು ಸುರಕ್ಷಿತಗೊಳಿಸಲು ನಡೆಸುತ್ತಿರುವ ಈ ಕಾರ್ಯಾಚರಣೆಯ ಭಾಗವಾಗಿ ಜಗ್ ವಸಂತ್ ಮತ್ತು ಪೈನ್ ಗ್ಯಾಸ್ ಎಂಬ ಮತ್ತೆರಡು LPG ಟ್ಯಾಂಕರ್ ಗಳನ್ನು ಭಾರತಕ್ಕೆ ಕರೆತರಲು ಕಾರ್ಯನಿರ್ವಹಿಸುತ್ತಿರುವುದಾಗಿ ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ. ಜಗ್ ವಸಂತ್ ಹಾಗೂ ಪೈನ್ ಗ್ಯಾಸ್ ಟ್ಯಾಂಕರ್ ಗಳು ದ್ರವೀಕೃತ ಪೆಟ್ರೋಲಿಯಂ ಅನಿಲದ ಹೆಚ್ಚಿನ ಒತ್ತಡ ಮತ್ತು ತಾಪಮಾನ–ನಿಯಂತ್ರಿತ ಸಾಗಣೆಗಾಗಿ ವಿನ್ಯಾಸಗೊಳಿಸಲಾಗಿರುವ ವಿಶೇಷ ಟ್ಯಾಂಕರ್ ಗಳಾಗಿದ್ದು,ಈ ಬೆಳವಣಿಗೆ ಸಾಕಷ್ಟು ಮಹತ್ವವನ್ನು ಪಡೆದುಕೊಂಡಿದೆ. ಇನ್ನು ಈ ಪವಿತ್ರ ರಂಜಾನ್ ಹಾಗೂ ಹಬ್ಬದ ಋತುವಿನಲ್ಲಿ ಈ LPG ಟ್ಯಾಂಕರ್ ಗಳ ಸೇರ್ಪಡೆ ಪೂರೈಕೆ ಸರಾಗವಾಗಿರುವಂತೆ ಮಾಡಲಿದೆ. ಅಲ್ಲದೆ, ಈ ಬೃಹತ್ ಹಡಗುಗಳ ಮೂಲಕ ಕೊಲ್ಲಿಯಲ್ಲಿ ಉದ್ವಿಗ್ನತೆ ಹೆಚ್ಚಾದಾಗ್ಯೂ, ಭಾರತಕ್ಕೆ ಇದರ ಹೊಡೆತ ಭಾರಿ ಪ್ರಮಾಣದಲ್ಲಿ ತಟ್ಟದಂತೆ ಈ ಟ್ಯಾಂಕರ್ ಗಳು ತೈಲ ಪೂರೈಕೆಯನ್ನು ಸಾರಾಗವಾಗಿರುವಂತೆ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಕ್ರಮವಾಗಿದೆ.

# ಶೇ.60 ಸೀಟುಗಳಿಗೆ ಹೆಚ್ಚುವರಿ ಶುಲ್ಕ ಬೇಡ, ಆಯ್ಕೆಗೆ ಅವಕಾಶವಿರಲಿ



### ವಿಮಾನಯಾನ ಸಂಸ್ಥೆಗಳಿಗೆ ಕೇಂದ್ರದ ನಿರ್ದೇಶನ

**ನವದೆಹಲಿ, ಮಾ.18:** ವಿಮಾನ ಪ್ರಯಾಣಿಕರಿಗೆ ಹೆಚ್ಚುವರಿ ಶುಲ್ಕಗಳಿಂದ ಪರಿಹಾರ ಒದಗಿಸಲು ಕೇಂದ್ರ ಸರಕಾರ ಮಹತ್ವದ ಕ್ರಮ ಕೈಗೊಂಡಿದ್ದು, ವಿಮಾನಗಳಲ್ಲಿ ಕನಿಷ್ಠ 60% ಸೀಟುಗಳಿಗೆ ಯಾವುದೇ ಹೆಚ್ಚುವರಿ ಶುಲ್ಕ ಪಡೆಯದೇ ಪ್ರಯಾಣಿಕರಿಗೆ ಉಚಿತವಾಗಿ ಆಯ್ಕೆ ಮಾಡಲು ಅವಕಾಶ ಕಲ್ಪಿಸುವಂತೆ ನಿರ್ದೇಶನ ನೀಡಿದೆ. ನಾಗರಿಕ ವಿಮಾನಯಾನ ಸಚಿವಾಲಯವು ವಿಮಾನ ಪ್ರಯಾಣ ನಿಯಮಗಳಲ್ಲಿ ಬದಲಾವಣೆ ತರಲು ನಿರ್ಧರಿಸಿದ್ದು, ನಾಗರಿಕ ವಿಮಾನಯಾನ ನಿರ್ದೇಶನಾಲಯದ ಮೂಲಕ ಮಾರ್ಗಸೂಚಿ ಹೊರಡಿಸಲಾಗಿದೆ. ವಿಮಾನ ಪ್ರಯಾಣವನ್ನು ಹೆಚ್ಚು ಪಾರದರ್ಶಕ ಮತ್ತು ಪ್ರಯಾಣಿಕಸ್ನೇಹಿ ಮಾಡುವುದೇ ಇದರ ಉದ್ದೇಶವಾಗಿದೆ.

ಇದುವರೆಗೆ ಟಿಕೆಟ್ ಬುಕಿಂಗ್ ಬಳಿಕ ಅಥವಾ ವೆಬ್ ಚೆಕ್–ಇನ್ ಸಮಯದಲ್ಲಿ ಬೇಕಾದ ಸೀಟಿನ ಆಯ್ಕೆಗೆ ಹಲವು ವಿಮಾನಯಾನ ಸಂಸ್ಥೆಗಳು ಹೆಚ್ಚುವರಿ ಶುಲ್ಕ ವಿಧಿಸುತ್ತಿದ್ದವು. ಅದರನ್ವಯ ಟಿಕೇಟು ಬುಕಿಂಗ್ ಮಾಡಿಕೊಂಡ ಬಳಿಕ ತಮಗಿಷ್ಟವಾದ ಸೀಟಿಗೆ ಹೆಚ್ಚುವರಿ ಹಣ ಪಾವತಿಸಬೇಕಿತ್ತು. ಸರಕಾರ ನೀಡಿರುವ ಹೊಸ ನಿರ್ದೇಶನವು ಈ ಪದ್ಧತಿಗೆ ಕಡಿವಾಣ ಹಾಕಿ, ಪ್ರಯಾಣಿಕರಿಗೆ ಬೇಕಾದ ಸೀಟು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿದೆ.

ಅಲ್ಲದೇ, ಒಂದೇ PNRನಲ್ಲಿ ಪ್ರಯಾಣಿಸುವವರು ಪಕ್ಕಪಕ್ಕದ ಆಸನಗಳಲ್ಲಿ ಕುಳಿತುಕೊಳ್ಳುವಂತೆ ವಿಮಾನಯಾನ ಸಂಸ್ಥೆಗಳಿಗೆ ಸೂಚಿಸಲಾಗಿದೆ. ಕುಟುಂಬಗಳು ಹಾಗೂ ತಂಡವಾಗಿ ಪ್ರಯಾಣಿಸುವವರು ಒಟ್ಟಿಗೆ ಕುಳಿತುಕೊಳ್ಳಲು ಹೆಚ್ಚುವರಿ ಹಣ ಪಾವತಿಸಬೇಕಾದ ಪರಿಸ್ಥಿತಿಗೆ ಇದರಿಂದ ಪರಿಹಾರ ದೊರೆಯುವ ನಿರೀಕ್ಷೆಯಿದೆ. ಪ್ರಯಾಣಿಕರಿಗೆ ಹಾರಾಟದ ಅನುಭವವನ್ನು ಸುಧಾರಿಸಲು, ಕ್ರೀಡಾ ಉಪಕರಣಗಳು ಮತ್ತು ಸಂಗೀತ ವಾದ್ಯಗಳ ಸಾಗಣೆ ಕುರಿತು ಪಾರದರ್ಶಕ ಮಾರ್ಗಸೂಚಿಗಳನ್ನು ರೂಪಿಸುವಂತೆ ಡಿಜಿಸಿಎಗೆ ಸೂಚಿಸಲಾಗಿದೆ. ಸುರಕ್ಷತಾ ಮಾನದಂಡಗಳನ್ನು ಪಾಲಿಸುವುದರ ಜೊತೆಗೆ, ಈ ಸೇವೆಗಳನ್ನು ಸುಗಮಗೊಳಿಸಲು ವಿಮಾನಯಾನ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಲಾಗಿದೆ.

ಸಾಕುಪ್ರಾಣಿಗಳ ಸಾಗಣೆ ಕುರಿತ ಗೊಂದಲ ನಿವಾರಣೆಗೆ ಸ್ಪಷ್ಟ ನೀತಿಗಳನ್ನು ಪ್ರಕಟಿಸುವ ಅಗತ್ಯವಿದೆ ಎಂದು ಸಹ ನಿರ್ದೇಶಿಸಲಾಗಿದೆ. ವಿಮಾನ ವಿಳಂಬ, ರದ್ದತಿ ಅಥವಾ ಬೋರ್ಡಿಂಗ್ ನಿರಾಕರಣೆ ಸಂದರ್ಭಗಳಲ್ಲಿ ಪ್ರಯಾಣಿಕರ ಹಕ್ಕುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸರಕಾರ ಒತ್ತಾಯಿಸಿದೆ. ಈ ಹಕ್ಕುಗಳ ಮಾಹಿತಿ ವಿಮಾನಯಾನ ಸಂಸ್ಥೆಗಳ ವೆಬ್‌ಸೈಟ್, ಮೊಬೈಲ್ ಅಪ್ಲಿಕೇಶನ್, ಬುಕಿಂಗ್ ವೇದಿಕೆಗಳು ಹಾಗೂ ವಿಮಾನ ನಿಲ್ದಾಣ ಕೌಂಟರ್ ಗಳಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು ಎಂದು ಸೂಚಿಸಲಾಗಿದೆ.

ಪ್ರಯಾಣಿಕರಿಗೆ ತಮ್ಮ ಹಕ್ಕುಗಳ ಬಗ್ಗೆ ಪ್ರಾದೇಶಿಕ ಭಾಷೆಗಳಲ್ಲಿ ಮಾಹಿತಿ ನೀಡುವುದೂ ಕಡ್ಡಾಯವಾಗಿದ್ದು, ಇದರಿಂದ ಹೆಚ್ಚಿನ ಜನರಿಗೆ ಅರಿವು ಮೂಡಲಿದೆ.

ಭಾರತದ ದೇಶೀಯ ವಾಯುಯಾನ ವಲಯವು ವೇಗವಾಗಿ ವಿಸ್ತರಿಸುತ್ತಿದ್ದು, ಜಾಗತಿಕವಾಗಿ ಮೂರನೇ ಅತಿದೊಡ್ಡ ಮಾರುಕಟ್ಟೆಯಾಗಿ ಹೊರಹೊಮ್ಮಿದೆ. ದೇಶದ ವಿಮಾನ ನಿಲ್ದಾಣಗಳು ಪ್ರತಿದಿನ ಐದು ಲಕ್ಷಕ್ಕೂ ಹೆಚ್ಚು ಪ್ರಯಾಣಿಕರನ್ನು ನಿರ್ವಹಿಸುತ್ತಿವೆ.


ಈ ಹಿನ್ನೆಲೆಯಲ್ಲಿ, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವುದು ಪ್ರಮುಖ ಆದ್ಯತೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ. ವಿಮಾನ ನಿಲ್ದಾಣಗಳಲ್ಲಿ ಕೈಗೆಟುಕುವ ದರದಲ್ಲಿ ಆಹಾರ ಮತ್ತು ಉಚಿತ ವೈ–ಫೈ ಸೌಲಭ್ಯಕ್ಕಾಗಿ ಉಡಾನ್ ಯಾತ್ರಿ ಕೆಫೆಗಳಂತಹ ಉಪಕ್ರಮಗಳನ್ನು ಸೂಚಿಸಲಾಗಿದೆ.

ಹೊಸ ಮಾರ್ಗಸೂಚಿಗಳು ವಿಮಾನಯಾನ ಪದ್ಧತಿಗಳಲ್ಲಿ ಏಕರೂಪತೆ ತರಲು ಹಾಗೂ ಪ್ರಯಾಣಿಕರ ಮೇಲಿನ ಹೆಚ್ಚುವರಿ ಶುಲ್ಕಗಳ ಭಾರವನ್ನು ಕಡಿಮೆ ಮಾಡಲು ಕೈಗೊಂಡ ಕ್ರಮವೆಂದು ಪರಿಗಣಿಸಲಾಗಿದೆ.



ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಮಂಗಳೂರು ಪ್ರದೇಶವನ್ನು ನಗರ ಆರ್ಥಿಕ ಪ್ರದೇಶ (ಸಿಇಆರ್) ಆಗಿ ಸೇರಿಸಲು ಮನವಿ ಸಲ್ಲಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ವಿಕಸಿತ ಭಾರತ 2047ರ ದೃಷ್ಟಿಗೆ ಅನುಗುಣವಾಗಿ CER ಉಪಕ್ರಮವನ್ನು ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

## ನಿತ್ಯ ಪಂಚಾಂಗ 19.3.2026 ಗುರುವಾರ



ಪರಾಭವ ನಾಮ ಸಂವತ್ಸರ, ಉತ್ತರಾಯಣ, ಶಿಶಿರ-ವಸಂತ ಋತು, ಚಾಂದ್ರಮಾನ ಪಾಲ್ಗುಣ-ಚೈತ್ರಮಾಸ

ಅಮಾವಾಸ್ಯೆ, ಉತ್ತರಾ ಬಾದ್ರಾ ನಕ್ಷತ್ರ, ಪಾಡ್ಯ, ಚಾಂದ್ರ ಯುಗಾದಿ, ವಸಂತನವರಾತ್ರಿ ಆರಂಭ, ಯುಗಾದಿ ಅಮಾವಾಸ್ಯೆ, ಅಲ್ಲಮಪ್ರಭು ಜಯಂತಿ.

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 – 12.00 | 1.30 – 3.00 |
| ಮಂಗಳ | 3.00 – 4.30 | 9.00 – 10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 – 12.00 |
| ಗುರು | 1.30 – 3.00 | 6.00 – 7.30 | 9.00 – 10.30 |
| ಶುಕ್ರ | 10.30 – 12.00 | 3.00 – 4.30 | 7.30 – 9.00 |
| ಶನಿ | 9.00 – 10.30 | 1.30 – 3.00 | 6.00 – 7.30 |

# ಮುಡಾ ಪ್ರಕರಣ ತನಿಖೆಗೆ ರಾಜ್ಯಪಾಲರ ಅನುಮತಿ ಪ್ರಶ್ನಿಸಿದ್ದ ಸಿದ್ದರಾಮಯ್ಯ ಮೇಲ್ಮನವಿ ವಿಚಾರಣೆ ಜೂ.8ಕ್ಕೆ

**ಬೆಂಗಳೂರು, ಮಾ.18:** ಮುಡಾ ಪ್ರಕರಣದಲ್ಲಿ ತನಿಖೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅನುಮತಿಸಿರುವುದನ್ನು ಹೈಕೋರ್ಟ್ ಎತ್ತಿ ಹಿಡಿದಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಾಲಯ ಜೂನ್ 8ಕ್ಕೆ ಮುಂದೂಡಿದೆ. ಇದರೊಂದಿಗೆ ಸತತ 10ನೇ ಬಾರಿಗೆ ಪ್ರಕರಣದ ವಿಚಾರಣೆ ಮುಂದೂಡಿದಂತಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆಕ್ಷೇಪಾರ್ಹ ಭೂಮಿಯ ಮಾಲೀಕ ಜೆ ದೇವರಾಜು ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಅನು ಶಿವರಾಮನ್ ಮತ್ತು ತಾರಾ ವಿತಾಸ್ತಾ ಗಂಜು ಅವರ ವಿಭಾಗೀಯ ಪೀಠ ನಡೆಸಿತು.

ಸಿದ್ದರಾಮಯ್ಯ ಪರವಾಗಿ ಹಾಜರಾಗಿದ್ದ ವಕೀಲ ಶತಭಿಷ್ ಶಿವಣ್ಣ ಅವರು ಮೇಲ್ಮನವಿಗಳ ವಿಚಾರಣೆ ಮುಂದೂಡಿಕೆ ಕೋರಿಕೆಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ತಿಳಿಸಲಾಗಿದೆ. ಹೀಗಾಗಿ, ಅರ್ಜಿಯ ವಿಚಾರಣೆ ಮುಂದೂಡಬೇಕು ಎಂದರು.

ಆಗ ಪೀಠವು ಯಾವ ಪ್ರಕರಣ ಇದು ಎಂದಿತು. ಅದಕ್ಕೆ ಶತಭಿಷ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತನಿಖೆಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದನ್ನು ಏಕಸದಸ್ಯ ಪೀಠ ಎತ್ತಿಹಿಡಿದಿದೆ. ಇದನ್ನು ಪ್ರಶ್ನಿಸಿರುವ ಮೇಲ್ಮನವಿ ಇದಾಗಿದೆ ಎಂದರು.

ಆಗ ಪೀಠ ಇದರ ಜೊತೆಗೆ ಹಲವು ಮೇಲ್ಮನವಿಗಳು ಇವೆಯಲ್ಲಾ ಎಂದಿತು. ಇದಕ್ಕೆ ಶತಭೀಷ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ನಾನು ಪ್ರತಿನಿಧಿಸುತ್ತೇನೆ. ಇತರೆ ಪ್ರತಿವಾದಿಗಳ ಪರವಾಗಿ ಸಹೋದ್ಯೋಗಿಗಳು ಪ್ರತಿನಿಧಿಸುತ್ತಿದ್ದಾರೆ ಎಂದರು. ಇದನ್ನು ಆಲಿಸಿದ ಪೀಠವು ಮೇಲ್ಮನವಿಗಳನ್ನು ಜೂನ್ 8ಕ್ಕೆ ಮುಂದೂಡಿತು.

# ಉಪಚುನಾವಣೆ ಅಭ್ಯರ್ಥಿ ಆಯ್ಕೆಗೆ ಕೈ-ಬಿಜೆಪಿ ಕಸರತ್ತು

## ಬಾಗಲಕೋಟೆ ಕೈ ಟಿಕೆಟ್‌ಗಾಗಿ ಮೇಟಿ ಕುಟುಂಬ ಪಟ್ಟು

**ಬೆಂಗಳೂರು, ಮಾ.18:** ರಾಜ್ಯದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ನಿಗದಿಯಾಗುತ್ತಿದ್ದಂತೆ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿಪಕ್ಷ ಬಿಜೆಪಿಯಲ್ಲಿ ಚಟುವಟಿಕೆಗಳು ಗರಿಗೆದರಿದ್ದು, ಅಭ್ಯರ್ಥಿಗಳ ಆಯ್ಕೆ ಸಂಬಂಧ ಎರಡು ಪಕ್ಷಗಳಲ್ಲಿ ಸಮಾಲೋಚನೆಗಳು ನಡೆದಿವೆ.

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಅಭ್ಯರ್ಥಿ ಆಯ್ಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಧಾನಸೌಧದ ತಮ್ಮ ಕಚೇರಿಯಲ್ಲಿಂದು ಮಾಜಿ ಸಚಿವ ದಿ. ಎಚ್.ವೈ. ಮೇಟಿ ಪುತ್ರ ಹಾಗೂ ಪುತ್ರಿಯರ ಜತೆ ಸಮಾಲೋಚನೆ ನಡೆಸಿದರು. ಈ ಉಪಚುನಾವಣೆಯಲ್ಲಿ ತಮಗೆ ಟಿಕೆಟ್ ನೀಡಬೇಕೆಂದು ಮೇಟಿ ಕುಟುಂಬ ಪಟ್ಟು ಹಿಡಿದಿದ್ದು, ಒಂದು ವೇಳೆ ಕಾಂಗ್ರೆಸ್ ಪಕ್ಷ ತಮಗೆ ಟಿಕೆಟ್ ನೀಡದಿದ್ದರೆ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಾಗಿ ಎಚ್.ವೈ. ಮೇಟಿ ಪುತ್ರಿ ಮಹಾದೇವಿ ಮೇಟಿ ಎಚ್ಚರಿಕೆ ಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬುಧವಾರ ದಿ.ಎಚ್.ವೈ. ಮೇಟಿ ಪುತ್ರರಾದ ಮಲ್ಲಿಕಾರ್ಜುನ ಮೇಟಿ, ಉಮೇಶ್ ಮೇಟಿ ಹಾಗೂ ಪುತ್ರಿಯರಾದ ಮಹಾದೇವಿ ಮೇಟಿ, ಬಾಯಕ್ಕ ಮೇಟಿ ರವರೊಂದಿಗೆ ಚರ್ಚೆ ನಡೆಸಿದರು.

ಬಾಗಲಕೋಟೆಯಲ್ಲಿ ಯಾರನ್ನು ಅಭ್ಯರ್ಥಿಯನ್ನಾಗಿಸಬೇಕು ಎಂಬ ಬಗ್ಗೆ ಪಕ್ಷದ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಹೈಕಮಾಂಡ್ ತೀರ್ಮಾನಿಸುವ ಅಭ್ಯರ್ಥಿಗೆ ನೀವೆಲ್ಲರೂ ಬೆಂಬಲ ನೀಡಬೇಕು. ಅವರ ಪರವಾಗಿ ನೀವೆಲ್ಲರೂ ಕೆಲಸ ಮಾಡಬೇಕು ಎಂದು ಮೇಟಿ ಕುಟುಂಬಸ್ಥರಿಗೆ ಸೂಚನೆ ನೀಡಿದರು ಎಂದು ಹೇಳಲಾಗಿದೆ.

ಬಾಗಲಕೋಟೆಯಲ್ಲಿ ಯಾರನ್ನು ಅಭ್ಯರ್ಥಿಯನ್ನಾಗಿಸಿದರೆ ಗೆಲುವು ಸಾಧ್ಯವಾಗುತ್ತದೆ ಎಂಬುದರ ಮೇಲೆ ಅಭ್ಯರ್ಥಿಯನ್ನು ಹೈಕಮಾಂಡ್ ಆಯ್ಕೆ ಮಾಡುತ್ತದೆ. ಯಾರೇ ಅಭ್ಯರ್ಥಿಯಾಗಲೀ ಎಲ್ಲರೂ ಒಟ್ಟಾಗಿ ಕೆಲಸ ಮಾಡಿ ಎಂದು ಸಿಎಂ ಹೇಳಿದರು ಎನ್ನಲಾಗಿದೆ.



■ ಬಾಗಲಕೋಟ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಚ್.ವೈ. ಮೇಟಿ ಅವರ ಪುತ್ರರಾದ ಮಲ್ಲಿಕಾರ್ಜುನ, ಉಮೇಶ್, ಪುತ್ರಿಯರಾದ ಬಾಯಕ್ಕ ಮತ್ತು ಮಹಾದೇವಿ ಅವರೊಂದಿಗೆ ಮಾತುಕತೆ ನಡೆಸಿದರು.

### ಬಿಜೆಪಿ ಅಭ್ಯರ್ಥಿ ಆಯ್ಕೆ ಇಂದು ಅಂತಿಮ

ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಗುರುವಾರ ಅಭ್ಯರ್ಥಿಯನ್ನು ಅಂತಿಮಗೊಳಿಸಲಿದ್ದು, ಬಾಗಲಕೋಟೆಯಿಂದ ಮಾಜಿ ಶಾಸಕ ವೀರಣ್ಣ ಚರಂತಿಮಠ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಯಶವಂತರಾವ್ ಜಾಧವ್ ಬಿಜೆಪಿ ಅಭ್ಯರ್ಥಿಗಳಾಗುವ ಸಾಧ್ಯತೆ ಇದೆ. ರಾಜ್ಯ ಬಿಜೆಪಿಯ ಕೋರ್ ಸಮಿತಿ ಸಭೆ ಸೇರಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಕ್ಷದ ಹೈಕಮಾಂಡ್‌ಗೆ ಕಳುಹಿಸಿದ್ದು, ಬಿಜೆಪಿ ಹೈಕಮಾಂಡ್ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸಲಿದೆ ಎಂದು ಹೇಳಲಾಗಿದೆ.

### ಎಲ್ಲರನ್ನೂ ವಿಶ್ವಾಸಕ್ಕೆ ಪಡೆದು ಅಭ್ಯರ್ಥಿ ಘೋಷಣೆ

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಕಾಂಗ್ರೆಸ್ ಪಕ್ಷದ ಪಾಲಿಗೆ ಪ್ರತಿಷ್ಠೆಯಾಗಿದೆ. ನಮಗೆ ಗೆಲುವೇ ಮಾನದಂಡ ಆಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು. ದಾವಣಗೆರೆ ದಕ್ಷಿಣ ವಿಧಾನಸಭೆ ಉಪ ಚುನಾವಣೆ ಉಸ್ತುವಾರಿ ಸಮಿತಿ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ 8 ಜನರ ಹೆಸರು ಚರ್ಚೆ ಆಗಿದೆ ಎಂದರು.

ಜಿಲ್ಲಾ ಹಾಗೂ ತಾಲೂಕು ಪಂಚಾಯತ್, ಜಿಬಿಎ ಹಾಗೂ 2028ರ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕಿದೆ. ಸಿಎಂ, ಡಿಸಿಎಂ ಹೈಕಮಾಂಡ್ ಜೊತೆ ಚರ್ಚಿಸಿ ಅಭ್ಯರ್ಥಿಗಳನ್ನು ಅಂತಿಮಗೊಳಿಸ ಲಿದ್ದಾರೆ ಎಂದು ಸಚಿವರು ಹೇಳಿದರು. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಹೆಸರು ಘೋಷಣೆ ಆದ ಮೇಲೆ ಗೊಂದಲ ಸರಿ ಹೋಗುತ್ತದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅಭ್ಯರ್ಥಿ ಘೋಷಣೆ ಮಾಡಲಾಗುತ್ತದೆ. ಯಾರೆ ಆಗಲಿ ಟಿಕೆಟ್ ಕೇಳೋದರಲ್ಲಿ ತಪ್ಪಿಲ್ಲ.



ಸಂಸದ ಬಸವರಾಜ ಬೊಮ್ಮಾಯಿ ಅವರು ಬುಧವಾರ ನವದೆಹಲಿಯ ತಮ್ಮ ನಿವಾಸಕ್ಕೆ ಆಗಮಿಸಿದ ಚಿತ್ರದುರ್ಗದ ಸಿರಿಗೆರೆ ಬೃಹನ್ಮಠದ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳನ್ನು ಆತ್ಮೀಯವಾಗಿ ಸ್ವಾಗತಿಸಿ, ಸತ್ಕರಿಸಿದರು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ವಿ. ಸೋಮಣ್ಣ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಸಂಸದ ಬಿ.ವೈ ರಾಘವೇಂದ್ರ ಅವರು ಹಾಜರಿದ್ದರು.

# ಶಾಸಕರಿಗೆ ಮಂತ್ರಿ ಆಗಬೇಕೆನ್ನುವ ಆಸೆ ಸ್ವಾಭಾವಿಕ

## ಭೋಜನ ಕೂಟದ ಸಭೆ ತಪ್ಪು ಎನ್ನಲಾಗಲ್ಲ: ಡಾ. ಜಿ.ಪರಮೇಶ್ವರ್

**ಬೆಂಗಳೂರು, ಮಾ.18:** ನಾನು ಮಂತ್ರಿ ಆಗಬೇಕು ಎನ್ನುವ ಆಸೆ ಎಲ್ಲ ಶಾಸಕರಿಗೂ ಸ್ವಾಭಾವಿಕವಾಗಿ ಇದೆ ಹಾಗಾಗಿ ಶಾಸಕರ ಭೋಜನ ಕೂಟದ ಸಭೆ ತಪ್ಪು ಎಂದು ಹೇಳಲು ಆಗಲ್ಲ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಹೇಳಿದರು. ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲೆಲ್ಲಾ ಒಬ್ಬೊಬ್ಬರೇ ಹೋಗಿ ಕೇಳೋರು, ಜಿಲ್ಲಾವಾರು ಹೋಗಿ ಕೇಳುತ್ತಿದ್ದರು. ಈ ಬಾರಿ ಸ್ವಲ್ಪ ಎಲ್ಲ ಒಗ್ಗಟ್ಟಾಗಿ ನಮ್ಮಲ್ಲಿ ಯಾರಿಗಾದರೂ



ಕೊಡಿ ಅಂತ ಕೇ12ಳುತ್ತಿದ್ದಾರೆ. ಮೊದಲ ಬಾರಿ ಗೆದ್ದವರು ಕೂಡ ಕೇಳಿದ್ದಾರೆ. ಹಾಗೆಯೇ ಮೂರು ನಾಲ್ಕು ಬಾರಿ ಗೆದ್ದವರು ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಅದನ್ನು ಹೈಕಮಾಂಡ್ ನಾಯಕರು ತೀರ್ಮಾನ ಮಾಡುತ್ತಾರೆ ಎಂದರು

ಶಾಸಕರು ಮೀಟಿಂಗ್ ಮಾಡೋದು ತಪ್ಪೇನು ಅಲ್ಲ. ತಪ್ಪು ಅಂತ ಹೇಳೋಕೆ ಬರಲ್ಲ. ಮಂತ್ರಿ ಆಗಬೇಕು ಅಂತ ಕೇಳುವುದು ತಪ್ಪಲ್ಲ ಎಂದರು. ಶಾಸಕರ ಡಿನ್ನರ್ ಮೀಟಿಂಗ್ ಬಗ್ಗೆ ಹೈಕಮಾಂಡ್ ಹೈಕಮಾಂಡ್‌ಗೆ ತಪ್ಪು ಅಂತ ಅನಿಸಿಲ್ಲ ಹಾಗಾಗಿ ಹೈಕಮಾಂಡ್ ಬಗ್ಗೆ ಏನನ್ನು ಹೇಳಿಲ್ಲ. ಹಾಗೇನಾದರೂ ತಪ್ಪು ಅನಿಸಿದರೆ ಹೈಕಮಾಂಡ್ ಪ್ರಧಾನ ಕಾರ್ಯದರ್ಶಿಗಳ ಮೂಲಕ ಸೂಚನೆ ಕೊಡುತ್ತಿತ್ತು ಎಂದು ಅವರು ಹೇಳಿದರು.

### ಕೋನರೆಡ್ಡಿ ಹೇಳಿಕೆ



ಕಾಂಗ್ರೆಸ್‌ನಲ್ಲಿ ಮೊದಲ ಮತ್ತು ಎರಡನೇ ಬಾರಿಗೆ ಗೆದ್ದಿರುವ ಶಾಸಕರು ನಿನ್ನೆ ಡಿನ್ನರ್ ಮೀಟಿಂಗ್ ನಡೆಸಿರುವ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಶಾಸಕ ಕೋನಾರೆಡ್ಡಿ ಅವರು, ಮೊದಲು ಮತ್ತು ಎರಡನೇ ಬಾರಿ ಗೆದ್ದಿರುವ ಶಾಸಕರು ಮಂಗಳವಾರ ಔತಣಕೂಟದ ಸಭೆ ನಡೆಸಿದ್ದೆವು. ನಾವು ಯಾರ ಪರವಾಗಿಯೂ ಇಲ್ಲ. ನಮಗೆ ಸಚಿವ ಸಂಪುಟದಲ್ಲಿ ಒಂದು ಅವಕಾಶ ಕೊಡಿ ಎಂದು ಮನವಿ ಮಾಡಿದ್ದೇವೆ ಅಷ್ಟೆ. ಮೊನ್ನೆ ಹಿರಿಯ ಶಾಸಕರು ಸಭೆ ನಡೆಸಿದ್ದರು ಎಂದರು.

ಎಂಊದಲು ಮತ್ತು ಎರಡನೇ ಬಾರಿ ಗೆದ್ದಿರುವ ಶಾಸಕರಲ್ಲೂ ಕ್ರಿಯಾಶೀಲರಿದ್ದಾರೆ. ಹಾಗಾಗಿ ನಮಗೂ ಸಚಿವ ಸ್ಥಾನ ಕೊಡಿ ಎಂದು ಹೈಕಮಾಂಡ್ ಮುಂದೆ ಬೇಡಿಕೆ ಇಟ್ಟಿದ್ದೇವೆ. 46 ಶಾಸಕರ ಔತಕೂಟ ಸಭೆ ನಡೆಸಿದ್ದೇವೆ ಎಂದರು. ನಾವು ಸಚಿವ ಸ್ಥಾನಕ್ಕಾಗಿ ಹೈಕಮಾಂಡ್ ಭೇಟಿಗೆ ಹೋಗಲ್ಲ. ಇಲ್ಲಿಯೇ ನಮ್ಮ ನಾಯಕರಿದ್ದಾರೆ. ಇಲ್ಲಿಯೇ ಮಾತನಾಡುತ್ತೇವೆ. ಶಾಸಕರಾದ ಮೇಲೆ ಮಂತ್ರಿ ಆಗುವ ಆಸೆ ಎಲ್ಲರಿಗೂ ಇರುತ್ತದೆ. ಹೀಗಾಗಿ ಮೊದಲು ಮತ್ತು ಎರಡನೇ ಬಾರಿ ಗೆದ್ದಿರುವ ಶಾಸಕರಿಗೂ ಸಚಿವ ಸ್ಥಾನ ನೀಡಿ ಎಂದು ಮನವಿ ಮಾಡಿದ್ದೇವೆ ಎಂದರು.

# ಮುಂದಿನ 5 ವರ್ಷದಲ್ಲಿ 25 ಸಾವಿರ ಮೆ.ವಾ. ವಿದ್ಯುತ್ ಉತ್ಪಾದಿಸುವ ಗುರಿ

## ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದನೆ: ಅಪರ ಮುಖ್ಯ ಕಾರ್ಯದರ್ಶಿ ಗೌರವ್‌ಗುಪ್ತ



**ಬೆಂಗಳೂರು, ಮಾ.18:** ಮುಂದಿನ ಐದು ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು 25 ಸಾವಿರ ಮೆಗಾವ್ಯಾಟ್‌ಗೆ ಹೆಚ್ಚಿಸುವ ಗುರಿಯನ್ನು ಕರ್ನಾಟಕ ಹೊಂದಿದ್ದು, ಇದನ್ನು ಸಾಧಿಸಲು ಸರ್ಕಾರ ಸಾಕಷ್ಟು ಪೂರಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದ್ದಾರೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ನಿಯಮಿತ (ಕ್ರೆಡಲ್), ಸಿಇಇಡಬ್ಲ್ಯು ಸಹಯೋಗದೊಂದಿಗೆ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ "ನವೀಕರಿಸಬಹುದಾದ ಇಂಧನದ ಭವಿಷ್ಯವನ್ನು ಭಾರತವು ಹೇಗೆ ಜವಾಬ್ದಾರಿಯುತವಾಗಿಸಬಹುದು" ಎಂಬ ವಿಷಯ ಕುರಿತಾದ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, ಹೂಡಿಕೆದಾರರು ಮತ್ತು ಜನರ ಸಹಯೋಗದೊಂದಿಗೆ ಈ ಗುರಿ ಸಾಧಿಸಬೇಕಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಸಾಕಷ್ಟು ಭೂಮಿ ಬೇಕಾಗುತ್ತದೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಜನರಿಂದ ಸಾಕಷ್ಟು ವಿರೋಧಗಳು ಬರುತ್ತಿವೆ. ಯೋಜನೆಗಳಿಗೆ ನಮಗೆ ತೊಂದರೆ ಯಾಗುತ್ತದೆ ಎಂಬ ಆತಂಕ ಅವರಲ್ಲಿರುತ್ತದೆ. ಭೂಸ್ವಾಧೀನಕ್ಕೆ ಬರುವ ವಿರೋಧಗಳನ್ನು ಹೂಡಿಕೆದಾರರು ಅಡೆತಡೆ ಎಂದು ಯೋಚಿಸುತ್ತಾರೆ. ಆದ್ದರಿಂದ ನವೀಕರಿಸಬಹುದಾದ ಇಂಧನ ನೇತೃತ್ವದ ಬೆಳವಣಿಗೆಯು ದೇಶದ ಅಭಿವೃದ್ಧಿಗೆ ಮಾರ್ಗ ಎಂಬುದನ್ನು ಜನರಿಗೆ ಮನದಟ್ಟು ಮಾಡಿಕೊಟ್ಟರೆ ಅವರು ಯೋಜನೆಗಳನ್ನು ಬೆಂಬಲಿಸುತ್ತಾರೆ," ಎಂದು ತಿಳಿಸಿದರು.

"ಉದ್ಯಮ ವಲಯದಿಂದ ಬಂದಿರುವ ಪ್ರತಿಕ್ರಿಯೆಗಳನ್ನು ಆಧರಿಸಿ ಭೂಸ್ವಾಧೀನ ವಿಚಾರದಲ್ಲಿ ಸರಳೀಕರಣ ಮಾಡಲಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಭೂಮಿ ಪಡೆಯಲು ಮುಖ್ಯಮಂತ್ರಿಗಳು, ಇಂಧನ ಸಚಿವರು ಮತ್ತು ಕಂದಾಯ ಸಚಿವರ ಮುತುವರ್ಜಿಯಿಂದ ರಾಜ್ಯ ಸರ್ಕಾರ ವಿಶೇಷ ಆನ್ ಲೈನ್ ಪೋರ್ಟಲ್ ಸಿದ್ಧಪಡಿಸಿದೆ. ಹೂಡಿಕೆದಾದರರು ರೈತರೊಂದಿಗೆ ಮಾತುಕತೆ ನಡೆಸಿದ ಬಳಿಕ ಭೂ ಪರಿವರ್ತನೆಗಾಗಿ ಆನ್‌ಲೈನ್ ನೋಂದಣಿ ಮಾಡಿ, ಪರಿವರ್ತನೆ ಮಾಡಿಸಿಕೊಳ್ಳಬಹುದು. ಇದಾದ ಬಳಿ ಯೋಜನೆ ಅನುಷ್ಠಾನ ಸಾಧ್ಯವಾಗುತ್ತದೆ," ಎಂದು ಹೇಳಿದರು.

### 'ಮುಖ್ಯಮಂತ್ರಿ ಸೌರಕೃಷಿ ಯೋಜನೆ' ಬಗ್ಗೆ ಕ್ರೆಡಲ್ ಅಧ್ಯಕ್ಷ ರಾಜೇಗೌಡ ಮೆಚ್ಚುಗೆ

ಕ್ರೆಡಲ್ ಅಧ್ಯಕ್ಷರೂ ಆಗಿರುವ ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ, "ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕವು ಸಾಕಷ್ಟು ಸಾಧನೆಗಳನ್ನು ಮಾಡಿದ್ದು, ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದಿದೆ. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಾಧನೆಗಾಗಿ ಭೂಸ್ವಾಧೀನದಲ್ಲಿ ಸುಧಾರಣೆಗಳನ್ನು ತಂದಿದೆ. ಈ ಬಾರಿಯ ಆಯವ್ಯಯದಲ್ಲಿ ಮುಖ್ಯಮಂತ್ರಿಗಳು ಮುಖ್ಯಮಂತ್ರಿ ಸೌರ ಕೃಷಿ ಯೋಜನೆಯನ್ನು ಘೋಷಿಸಿದ್ದು, ಇದು ಕೃಷಿ ಮತ್ತು ನವೀಕರಿಸಬಹುದಾದ ಇಂಧನವನ್ನು ಒಂದೇ ವೇದಿಕೆಯಲ್ಲಿ ತರುವ ಒಂದು ಮಹತ್ವದ ಯೋಜನೆಯಾಗಿದೆ," ಎಂದು ತಿಳಿಸಿದರು.

"ಅಭಿವೃದ್ಧಿಪರ ಯೋಜನೆಗಳ ರೂಪರೇಷೆ ಮತ್ತು ಅನುಷ್ಠಾನದಲ್ಲಿ ಗುಣಮಟ್ಟವನ್ನ ಹೆಚ್ಚಿಸಬೇಕಾದ ಅವಶ್ಯಕತೆ ಇದ್ದು, ಅದಕ್ಕಾಗಿ ಇರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೂಡಿಕೆದಾರರು ಮತ್ತು ಜನರ ಮಧ್ಯೆ ಸಮನ್ವಯತೆ ಸಾಧಿಸಿ ಯೋಜನೆಗಳನ್ನು ಜಾರಿಗೊಳಿಸಬೇಕು," ಎಂದರು.

ಕಾರ್ಯಕ್ರಮದಲ್ಲಿ ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ, ಸಿಇಇಡಬ್ಲ್ಯು ನಿರ್ದೇಶಕ ಕಾರ್ತಿಕ್ ಗಣೇಶ್ ಸೇರಿದಂತೆ ಇಂಧನ ಇಲಾಖೆ ಅಧಿಕಾರಿಗಳು, ನವೀಕರಿಸಬಹುದಾದ ಇಂಧನ ಕ್ಷೇತ್ರದ ಉದ್ಯಮಿಗಳು ಇದ್ದರು. ಇಡೀ ದಿನ ವಿವಿಧ ವಿಚಾರಗಳ ಬಗ್ಗೆ ಚಿಂತನ–ಮಂಥನ ನಡೆಯಿತು.



ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಸಂಸದ ಬಿ.ವೈವಿಜಯೇಂದ್ರ ನವದೆಹಲಿಯ ಪ್ರಧಾನಮಂತ್ರಿ ವಸ್ತುಸಂಗ್ರಹಾಲಯಕ್ಕೆ ಭೇಟಿನೀಡಿ, ಪ್ರಧಾನಿಗಳ ಜೀವನ ಮತ್ತು ಕೊಡುಗೆಗಳ ಮೂಲಕ ಭಾರತದ ಗಮನಾರ್ಹ ಪ್ರಯಾಣವನ್ನು ವೀಕ್ಷಿಸಿದರು. ಒಂದು ಶ್ರೀಮಂತ ಮತ್ತು ಸ್ಫೂರ್ತಿದಾಯಕ ಅನುಭವವಾಗಿತ್ತು. ಈ ವಸ್ತುಸಂಗ್ರಹಾಲಯವು ನಮ್ಮ ರಾಷ್ಟ್ರದ ಪ್ರಜಾಪ್ರಭುತ್ವ ಪರಂಪರೆ, ನಾಯಕತ್ವ ಮತ್ತು ಭವಿಷ್ಯದ ದೃಷ್ಟಿಕೋನವನ್ನು ಸುಂದರವಾಗಿ ಸೆರೆಹಿಡಿಯುತ್ತದೆ. ಪ್ರತಿಯೊಬ್ಬರೂ ಭೇಟಿ ನೀಡಲೇಬೇಕಾದ ಸ್ಥಳ ಎಂದು ವಿಜಯೇಂದ್ರ ತಿಳಿಸಿದರು.

# ಜೆಬಿಎ ಚುನಾವಣೆಯ ಕರಡು ಮತಪಟ್ಟಿಯ ಪರಿಶೀಲಿಸಿ ಆಕ್ಷೇಪಣೆ ಸಲ್ಲಿಕೆಗೆ ಹೆಚ್ಚು ಸಮಯಾವಕಾಶಕ್ಕೆ ಕೋರಿಕೆ



**ಬೆಂಗಳೂರು, ಮಾ.18;** ಮತದಾರರ ಪಟ್ಟಿಯ ಪರಿಶೀಲನೆಯ ವೆಬ್‌ಸೈಟ್ ದಿನಾಂಕ ಮಾರ್ಚ್ 13 ರಿಂದ 18 ರ ತನಕ ತಾಂತ್ರಿಕ ಕಾರಣಗಳಿಂದ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಈ ಕುರಿತು ಜಿಬಿಎ ಮಹಾ ಆಯುಕ್ತರಿಗೆ ಬಿಜೆಪಿಯ ನಿಯೋಗ ಅಧಿಕೃತವಾಗಿ ಇದರ ಬಗ್ಗೆ ದೂರು ಸಲ್ಲಿಸಲಾಗಿದೆ. ಜಿಬಿಎ ವೆಬ್ ಸೈಟ್ ಕಳೆದ ಆರು ದಿನ ಕಾರ್ಯ ನಿರ್ವಹಿಸಿದ ಕಾರಣ ನಾಗರಿಕರಿಗೆ ಅಪಾರ ತೊಂದರೆಯಾಗಿದೆ ಹಾಗೂ ಪರಿಶೀಲಿಸಲು ಸಾಧ್ಯವಾಗದೆ ಪರದಾಡಿದರು.

ಹಾಗೂ ಕರಡು ಮತದಾರರ ಪಟ್ಟಿಯನ್ನು ದಿನಾಂಕ 16.03.2026ರಂದು ನಮ್ಮ ಕಚೇರಿಗೆ ತಲುಪಿದ್ದು, ಈ ಪಟ್ಟಿಯನ್ನು ಪರಿಶೀಲಿಸಲು ಹೆಚ್ಚಿನ ಸಮಯ ಬೇಕಾಗುತ್ತದೆ.

ಮುಂದಿನ ಮೂರು ದಿನಗಳ ಕಾಲ ಹಬ್ಬದ ಪ್ರಯುಕ್ತ ರಜಾ ಇರುವ ಕಾರಣ ಸಾವಿರಾರು ಜನರು ತಮ್ಮ ಊರುಗಳಿಗೆ ತೆರಳುವುದರಿಂದ ಪರಿಶೀಲಿಸಲು ಸಾಧ್ಯವಾಗುವುದಿಲ್ಲ.

ಕರಡು ಪ್ರತಿಯ ಬಗ್ಗೆ ಆಕ್ಷೇಪಣೆ ಸಲ್ಲಿಸುವ ದಿನಾಂಕವನ್ನು 20.03.2026 ರಿಂದ 30.03.2026ರವರೆಗೆ ವಿಸ್ತರಿಸಿ, ನಾಗರಿಕರಿಗೆ ಅನುಕೂಲ ಕಲ್ಪಿಸಿ.

ನಗರದ ಮತದಾರರ ಹಿತದೃಷ್ಟಿಯಿಂದ ನಮ್ಮ ಮನವಿಯನ್ನು ಪುರಸ್ಕರಿಸಿ, ಮತದಾರರ ಹಕ್ಕು ಕಾಪಾಡಬೇಕು ಎಂದು ಒತ್ತಾಯ ಮಾಡುತ್ತೇವೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದರು.

# ಕೆ.ಪಿ.ಎಸ್.ಸಿ ಸುಧಾರಣೆಗೆ ಸರ್ವಪಕ್ಷದ ಸದನ ಸಮಿತಿ ರಚನೆ: ಕೃಷ್ಣ ಬೈರೇಗೌಡ


**ಬೆಂಗಳೂರು, ಮಾ.18:** ಇನ್ನು ಮುಂದೆ ಕೆ.ಪಿ.ಎಸ್.ಸಿಯಿಂದ ವಿವಿಧ ಹುದ್ದೆಗಳಿಗೆ ನಡೆಯುವ ನೇಮಕಾತಿಗಳು ಯಾವುದೇ ವಂಚನೆಗಳಿಲ್ಲದೆ ನಡೆಯುವಂತೆ ಮಾಡುವ ಸಲುವಾಗಿ ಸರ್ವಪಕ್ಷ ಸದಸ್ಯರನ್ನೊಳಗೊಂಡ ಸದನ ಸಮಿತಿಯನ್ನು ರಚಿಸಿ, ಸಮಿತಿಯ ಸಲಹೆಗಳನ್ನು ಪಡೆದುಕೊಳ್ಳುವ ಮೂಲಕ ಕೆ.ಪಿ.ಎಸ್.ಸಿಯಲ್ಲಿ ಸುಧಾರಣೆ ತರಲಾಗುವುದು ಎಂದು ಮುಖ್ಯಮಂತ್ರಿ ಅವರ ಬದಲಿಗೆ ಕೃಷ್ಣ ಬೈರೇಗೌಡರು ಬುಧವಾರ ವಿಧಾನಸಭೆಯಲ್ಲಿ ತಿಳಿಸಿದರು.

ಕೆ.ಪಿ.ಎಸ್.ಸಿ ಯಲ್ಲಿ ಇತ್ತೀಚೆಗೆ ನಡೆದ ಗೆಜೆಟೆಡ್ ಹುದ್ದೆಗಳಿಗೆ ನಡೆದ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿ ಪರೀಕ್ಷೆ ಬರೆದ ಬಹಳಷ್ಟು ಅಭ್ಯರ್ಥಿಗಳು ಆಯ್ಕೆಯಾಗಿರುವುದರಿಂದ ಅಕ್ರಮ ನಡೆದಿದೆ. ಇದರಿಂದ ಅರ್ಹರಿಗೆ ಅನ್ಯಾಯವಾಗಲಿದೆ. ಮೊದಲಿನಿಂದಲೂ ಇಂತಹ ಘಟನೆಗಳು ಜರುಗುತ್ತಲೇ ಇರುವುದರಿಂದ ಕೆ.ಪಿ.ಎಸ್.ಸಿ.ಯು ಪಾರದರ್ಶಕವಾಗಿ ಕಾರ್ಯ ನಿರ್ವಹಿಸುವಂತೆ ಬದಲಾವಣೆ ತರಬೇಕು. ಈ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ನೀಡಬೇಕೆಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸುನಿಲ್‌ಕುಮಾರ್, ಸುರೇಶ್‌ಕುಮಾರ್, ಆರಗ ಜ್ಞಾನೇಂದ್ರ, ಡಾ.ಸಿ.ಎಸ್. ಅಶ್ವತ್ಥನಾರಾಯಣ ಅವರು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ್ದರು. ಇದಕ್ಕೆ ಪಕ್ಷಾತೀತವಾಗಿ ಆಡಳಿತ ಪಕ್ಷದ ಸದಸ್ಯರು ಕೂಡ ಸಮ್ಮತಿಯನ್ನು ಸೂಚಿಸಿದ್ದರು.

ಈ ವಿಚಾರಕ್ಕೆ ಇಂದು ವಿಧಾನಸಭೆಯಲ್ಲಿ ಸರ್ಕಾರದ ಪರವಾಗಿ ಉತ್ತರ ನೀಡಿದ ಸಚಿವರು ಈ ವಿಚಾರವಾಗಿ ಪಕ್ಷಾತೀತವಾಗಿ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವಂತೆ ಉತ್ತಮ ಗುಣಮಟ್ಟದ ಚರ್ಚೆಯಾಗಿರುವುದರಿಂದ ಕೆ.ಪಿ.ಎಸ್.ಸಿ ಸಂಸ್ಥೆಯಲ್ಲಿ ಸುಧಾರಣೆ ತರುವ ಸಲುವಾಗಿ ಎಲ್ಲರೂ ತಮ್ಮ ಸಲಹೆಗಳನ್ನು ನೀಡುವ ಸಲುವಾಗಿ ಕೂಡಲೇ ಸರ್ವಪಕ್ಷದ ಸದನ ಸಮಿತಿಯನ್ನು ರಚಿಸಲಾಗುವುದು. ಸದನ ಸಮಿತಿಯ ಸಭೆಯಲ್ಲಿ ನೀವು ನೀಡಿದ ಸಲಹೆಗಳನ್ನು ಅಳವಡಿಸಿಕೊಂಡು ಕೆ.ಪಿ.ಎಸ್.ಸಿ ಯ ಕಾರ್ಯವೈಖರಿಯಲ್ಲಿ ಸುಧಾರಣೆ ತರಲಾಗುವುದು. ಸಮಿತಿಯಿಂದ ಮುಂದಿನ ಅಧಿವೇಶನದ ಒಳಗೆ ವರದಿಯನ್ನು ಪಡೆದುಕೊಳ್ಳಲಾಗುವುದು ಎಂದು ತಿಳಿಸಿದರು.

Managing Editor : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಬಾಕಿ ಉತ್ತರ ನೀಡಲು ಸರ್ಕಾರಕ್ಕೆ ಮಾ.25ರ ಗಡುವು



**ನಿರ್ದೇಶನ ಪಾಲಿಸದಿದ್ದರೆ ಕ್ರಮದ ಎಚ್ಚರಿಕೆ, ಸಚಿವರ ಗೈರುಹಾಜರಿಗೆ ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ**

**ಬೆಂಗಳೂರು, ಮಾ.18:** ರಾಜ್ಯ ಸರ್ಕಾರವು ಬಾಕಿ ಇರುವ ಎಲ್ಲಾ ಉತ್ತರಗಳನ್ನು ಸಲ್ಲಿಸಲು ವಿಧಾನ ಪರಿಷತ್ ಅಧ್ಯಕ್ಷ ಬಸವರಾಜ ಹೊರಟ್ಟಿ ಗಡುವು ವಿಧಿಸಿ, ನಿರ್ದೇಶನವನ್ನು ಪಾಲಿಸದಿದ್ದರೆ ಮರುದಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಸಚಿವರ ಗೈರು ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದ ಸಭಾಪತಿ ಬಸವರಾಜ ಹೊರಟ್ಟಿ, ಇದೀಗ ಸರ್ಕಾರಕ್ಕೆ ಉತ್ತರಗಳನ್ನು ನೀಡಲು ಗಡುವು ವಿಧಿಸಿದ್ದಾರೆ. ಮಾರ್ಚ್ 25 ರೊಳಗೆ ಬಾಕಿ ಇರುವ ಎಲ್ಲಾ ಉತ್ತರಗಳನ್ನು ಸಲ್ಲಿಸಬೇಕು ಎಂದು ಕಾಲಾವಕಾಶ ನೀಡಿದ್ದಾರೆ.ಒಂದು ವೇಳೆ ನಿರ್ದೇಶನವನ್ನು ಪಾಲಿಸದಿದ್ದರೆ ಮರುದಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ. ಈ ನಡುವೆ ರಾಜ್ಯ ಗೃಹ ಸಚಿವ ಜಿ ಪರಮೇಶ್ವರ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡುವ ಭರವಸೆ ನೀಡಿದ್ದಾರೆ.ಉತ್ತರ ನೀಡುವಲ್ಲಿನ ವಿಳಂಬವನ್ನು ಪರಿಹರಿಸಲು ಸರ್ಕಾರ ಈಗಾಗಲೇ ಕ್ರಮಗಳನ್ನು ಪ್ರಾರಂಭಿಸಿದೆ ಎಂದು ಪರಮೇಶ್ವರ ಹೇಳಿದರು. ಇದರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ನೋಟಿಸ್ ನೀಡುವುದು ಮತ್ತು ನಿರಂತರ ನಿರ್ಲಕ್ಷ್ಯದ ಸಂದರ್ಭದಲ್ಲಿ ಅಮಾನತುಗೊಳಿಸುವ ಎಚ್ಚರಿಕೆ ಸೇರಿವೆ. "ಅದನ್ನು ಮಾಡಬಹುದು ಅಧ್ಯಕ್ಷರೇ," ಎಂದು ಹೇಳುವ ಮೂಲಕ ಪರಮೇಶ್ವರ ಅವರು ಅಧ್ಯಕ್ಷರ ಗಡುವನ್ನು ಪೂರೈಸಲು ಒಪ್ಪಿಕೊಂಡರು. "ಎಲ್ಲಾ ಉತ್ತರಗಳನ್ನು 25 ರೊಳಗೆ ಒದಗಿಸಬೇಕು. ಇಲ್ಲದಿದ್ದರೆ, 26 ರಂದು ಕ್ರಮ ಕೈಗೊಳ್ಳಬೇಕು ಮತ್ತು ಸದನಕ್ಕೆ ತಿಳಿಸಬೇಕು" ಎಂದು ಹೊರಟ್ಟಿ ಪರಿಷತ್ತಿನಲ್ಲಿ ಹೇಳಿದರು.ಹೆಚ್ಚಿನ ಸಂಖ್ಯೆಯ ಉತ್ತರಿಸದ ಪ್ರಶ್ನೆಗಳ ಕುರಿತು ಜೆಡಿ(ಎಸ್) ಎಂಎಲ್ಸಿ ಭೋಜೇಗೌಡ ಅವರು ಎತ್ತಿದ ಕಳವಳಗಳ ನಂತರ ಚರ್ಚೆ ನಡೆಯಿತು. "ಇಲ್ಲಿ ಇಲ್ಲಿಯವರೆಗೆ 688 ಪ್ರಶ್ನೆಗಳನ್ನು ಕೇಳಲಾಗಿದೆ. ಆದರೆ ಸುಮಾರು 400 ಪ್ರಶ್ನೆಗಳಿಗೆ ಉತ್ತರಿಸಲಾಗಿಲ್ಲ...ಅಂದರೆ ಕೇವಲ 277 ಪ್ರಶ್ನೆಗಳಿಗೆ ಮಾತ್ರ ಉತ್ತರಗಳು ಬಂದಿವೆ" ಎಂದು ಅವರು ಹೇಳಿದರು. ಅಧಿವೇಶನ ಮುಗಿಯುವ ಮೊದಲು ಬಾಕಿ ಇರುವ ಪ್ರಶ್ನೆಗಳನ್ನು ಪರಿಹರಿಸಲಾಗುತ್ತದೆಯೇ ಎಂಬುದರ ಕುರಿತು ಸ್ಪಷ್ಟನೆ ಕೇಳಿದರು.ಈ ವಿಷಯವನ್ನು ವಿಧಾನಸಭೆಯಲ್ಲಿಯೂ ಸೇರಿದಂತೆ ಮೊದಲೇ ಚರ್ಚಿಸಲಾಗಿದೆ ಮತ್ತು ಪರಿಸ್ಥಿತಿಯನ್ನು ಪರಿಶೀಲಿಸಲು ಮುಖ್ಯಮಂತ್ರಿಗಳು ಮುಖ್ಯ ಕಾರ್ಯದರ್ಶಿ ಮತ್ತು ವಿರೋಧ ಪಕ್ಷದ ನಾಯಕರೊಂದಿಗೆ ಸಭೆ ನಡೆಸಿದ್ದಾರೆ. ಎಲ್ಲಾ ಕಾರ್ಯದರ್ಶಿಗಳಿಗೆ ನೋಟಿಸ್ ನೀಡಬೇಕು. ಇನ್ನೂ ನಿರ್ಲಕ್ಷ್ಯವಿದ್ದರೆ, ಸಂಬಂಧಪಟ್ಟ ಕಾರ್ಯದರ್ಶಿಗಳನ್ನು ಅಮಾನತುಗೊಳಿಸಬೇಕು ಎಂದು ಸೂಚನೆಗಳನ್ನು ನೀಡಲಾಗಿದೆ. ಕೆಲವು ಸುಧಾರಣೆಗಳು ಈಗಾಗಲೇ ಗೋಚರಿಸುತ್ತಿವೆ ಮತ್ತು ಮುಂದಿನ ವಾರದ ವೇಳೆಗೆ ಹೆಚ್ಚಿನ ಪ್ರಗತಿಯನ್ನು ನಿರೀಕ್ಷಿಸಲಾಗಿದೆ ಎಂದು ಪರಮೇಶ್ವರ ಹೇಳಿದರು.

# ಪಾರಂಪರಿಕ ಕಟ್ಟಡಗಳ ಗೋಡೆ, ಸುತ್ತಮುತ್ತ ಜಾಹೀರಾತಿಗೆ ನಿಷೇಧ

**ಸಚಿವ ಬೈರತಿ ಸುರೇಶ್ ಘೋಷಣೆ: ಪೌರನಿಗಮ ಅಧಿನಿಯಮ, ಪೌರಸಭೆ ಅಧಿನಿಯಮ ತಿದ್ದುಪಡಿ ಮಸೂದೆ ಮಂಡನೆ**



**ಬೆಂಗಳೂರು, ಮಾ.18:** ಮಹಾನಗರ ಪಾಲಿಕೆಗಳು ಮತ್ತು ನಗರಸಭೆಗಳು ಮತ್ತು ಇತರೆ ಪಟ್ಟಣ ಪ್ರದೇಶಗಳಲ್ಲಿನ ಪಾರಂಪರಿಕ ಕಟ್ಟಡಗಳ ಗೋಡೆಗಳು ಮತ್ತು ಸುತ್ತಮುತ್ತ ವಾಣಿಜ್ಯ ಜಾಹೀರಾತುಗಳ ಪ್ರದರ್ಶನವನ್ನು ನಿಷೇಧಿಸಲಾಗುತ್ತದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ಘೋಷಿಸಿದ್ದಾರೆ.

ವಿಧಾನಸಭೆಯಿಂದ ಅಂಗೀಕೃತಗೊಂಡ ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ 1964ಕ್ಕೆ ತಿದ್ದುಪಡಿ ಮಸೂದೆಯನ್ನು ವಿಧಾನಪರಿಷತ್ತಿನಲ್ಲಿ ಬುಧವಾರ ಮಂಡಿಸಿ ಮಾತನಾಡಿ ಈ ವಿಷಯ ತಿಳಿಸಿದರು.

ಕಳೆದ ಏಳೆಂಟು ವರ್ಷಗಳಿಂದ ರಾಜ್ಯಾದ್ಯಂತ ಸಾವಿರಾರು ಅನಧಿಕೃತ ಜಾಹೀರಾತುಗಳನ್ನು ಪ್ರದರ್ಶಿಸಲಾಗುತ್ತಿದೆ. ಇದಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಯಾವುದೇ ರೀತಿಯ ಶುಲ್ಕ ಅಥವಾ ತೆರಿಗೆಯನ್ನು ಪಾವತಿಸುತ್ತಿಲ್ಲ. ಹೀಗಾಗಿ ನೂರಾರು ಕೋಟಿ ರೂಪಾಯಿಗಳ ಆದಾಯ ಬರದಂತಾಗಿದೆ ಎಂದರು.

ಈ ಹಿನ್ನೆಲೆಯಲ್ಲಿ ಅನಧಿಕೃತ ಜಾಹೀರಾತುಗಳನ್ನು ನಿಯಂತ್ರಣ ಮಾಡಬೇಕೆಂಬ ಉದ್ದೇಶದಿಂದ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಆದಾಯ ತಂದುಕೊಡುವ ಉದ್ದೇಶದಿಂದ ಈಗಿರುವ ಕಾನೂನಿಗೆ ತಿದ್ದುಪಡಿ ತರಲೆಂದು ಮಸೂದೆ ಮಂಡಿಸಲಾಗಿದೆ ಎಂದು ತಿಳಿಸಿದರು.

**ಅನಧಿಕೃತ ಜಾಹೀರಾತುಗಳ ವಿರುದ್ಧ ಕ್ರಿಮಿನಲ್ ಕೇಸ್:** ಸರ್ಕಾರಕ್ಕೆ ಯಾವುದೆ ಶುಲ್ಕ ಅಥವಾ ತೆರಿಗೆ ಪಾವತಿಸದೆ ಜಾಹೀರಾತು ಪ್ರದರ್ಶನ ಮಾಡುತ್ತಿರುವವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದ ಸಚಿವರು, ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಇಂತಹ ಜಾಹೀರಾತುಗಳನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಖಾಸಗಿ ಜಾಗದಲ್ಲಿ ಜಾಹೀರಾತು ಪ್ರದರ್ಶನ ಮಾಡಿದರೆ ಆ ಜಾಗದ ಮಾಲೀಕರಿಗೆ ತೆರಿಗೆ ವಿಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಸಚಿವರು, ಜಾಹೀರಾತು ನೀಡುವ ಕಂಪನಿಗೆ ತೆರಿಗೆ ವಿಧಿಸಲಾಗುತ್ತದೆ ಎಂದರು.

**ನಿಗದಿತ ಸ್ಥಳಗಳಲ್ಲಿ ಮಾತ್ರ ಜಾಹೀರಾತು:** ಸ್ಥಳೀಯ ಸಂಸ್ಥೆಗಳು ಸಾರ್ವಜನಿಕರಿಗೆ ತೊಂದರೆ ಆಗದ ರೀತಿಯಲ್ಲಿ ನಿಗದಿಪಡಿಸುವ ಜಾಗದಲ್ಲಿ ಮಾತ್ರ ಜಾಹೀರಾತು ಫಲಕಗಳನ್ನು, ಫ್ಲೆಕ್ಸ್, ಬಂಟಿಂಗ್ಸ್ ಹಾಕಲು ಅವಕಾಶ ನೀಡಲಾಗುತ್ತದೆ. ಆದರೆ, ಯಾವುದೇ ಪಾರಂಪರಿಕ ಕಟ್ಟಡಗಳ ಗೋಡೆಗಳ ಮೇಲಾಗಲೀ ಅಥವಾ ಕಟ್ಟಡಗಳ ಸೌಂದರ್ಯಕ್ಕೆ ಅಡ್ಡಿಯಾಗುವ ರೀತಿಯಲ್ಲಿ ಸುತ್ತಮುತ್ತ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ ಎಂದು ಸಚಿವ ಬೈರತಿ ಸುರೇಶ್ ತಿಳಿಸಿದರು.

ವೈದ್ಯರು, ವಕೀಲರು ಮತ್ತು ಇತರ ವೃತ್ತಿಪರರು ಹಾಕುವ ಜಾಹೀರಾತುಗಳಿಗೆ ಈ ತೆರಿಗೆಯಿಂದ ವಿನಾಯ್ತಿ ನೀಡಲಾಗುತ್ತದೆ. ಆದರೆ, ರಾಜಕಾರಣಿಗಳು, ಯಾವುದೇ ಪಕ್ಷಗಳು ಫ್ಲೆಕ್ಸ್, ಬಂಟಿಂಗ್ಸ್, ಬ್ಯಾನರ್‌ಗಳನ್ನು ಹಾಕಿದರೆ ಅವುಗಳ ಗಾತ್ರಕ್ಕೆ ತಕ್ಕಂತೆ ಸ್ಥಳೀಯ ಸಂಸ್ಥೆಗಳು ನಿಗದಿಪಡಿಸುವ ಶುಲ್ಕವನ್ನು ವಿಧಿಸಲಾಗುತ್ತದೆ ಎಂದು ಅವರು ಹೇಳಿದರು.

**ಸ್ಥಳೀಯ ಸಂಸ್ಥೆಗಳಿಗೇ ಹಣ:** ಈ ಹೊಸ ಮಸೂದೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಜಾಗದಲ್ಲಿ ಜಾಹೀರಾತುಗಳಿಗೆ ಸ್ಥಳೀಯ ಪ್ರದೇಶಗಳಿಗೆ ಅನುಗುಣವಾಗಿ ಶುಲ್ಕವನ್ನು ವಿಧಿಸಲಾಗುತ್ತದೆ. ಹೀಗೆ ಜಾಹೀರಾತುಗಳಿಂದ ಬಂದ ಆದಾಯವನ್ನು ಆಯಾ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಮಾತ್ರ ಬಳಸಲಾಗುತ್ತದೆ ಎಂದು ಮಾಹಿತಿ ನೀಡಿದರು.

**ಎಲ್‌ಇಡಿ ಜಾಹೀರಾತು ಫಲಕಗಳಿಗೆ ಪ್ರತ್ಯೇಕ ದರ:** ಸದಸ್ಯರು ಎಲ್‌ಇಡಿ ಜಾಹೀರಾತು ಫಲಕಗಳ ಬಗ್ಗೆ ಗಮನಸೆಳೆದ ಸಂದರ್ಭದಲ್ಲಿ ಸ್ಪಷ್ಟನೆ ನೀಡಿದ ಸಚಿವ ಬೈರತಿ ಸುರೇಶ್ ಅವರು, ಎಲ್‌ಇಡಿ ಫಲಕಗಳಿಗೆ ಪ್ರತ್ಯೇಕ ಶುಲ್ಕವನ್ನು ವಿಧಿಸಲಾಗುತ್ತದೆ ಎಂದರು. ಸದನದಲ್ಲಿ ವಿಸ್ತೃತ ಚರ್ಚೆ ನಂತರ ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕ್ಕೆ ತಿದ್ದುಪಡಿ ಮಸೂದೆಗೆ ಧ್ವನಿಮತದ ಅಂಗೀಕಾರ ದೊರೆಯಿತು.

# ವಿಧಾನಸಭೆಯಲ್ಲಿ 'ಇವ ನಮ್ಮವ ಇವ ನಮ್ಮವ' ವಿಧೇಯಕ ಮಂಡನೆ

**ಮರ್ಯಾದೆ ಹತ್ಯೆ, ಹಲ್ಲೆ, ಬೆದರಿಕೆ ಹಾಕುವವರಿಗೆ ಜೈಲುಶಿಕ್ಷೆ ವಿಧಿಸಲು ಅವಕಾಶ**

**ಬೆಂಗಳೂರು, ಮಾ.18:** ರಾಜ್ಯದಲ್ಲಿ ಮರ್ಯಾದೆಯ ಹೆಸರಿನಲ್ಲಿ ಹತ್ಯೆ, ಹಲ್ಲೆ ಮತ್ತು ಬೆದರಿಕೆ ಹಾಕುವವರಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವ ಅವಕಾಶ ಕಲ್ಪಿಸುವ "ಇವ ನಮ್ಮವ ಇವ ನಮ್ಮವ" ಎಂಬ ವಿಧೇಯಕವನ್ನು ವಿಧಾನಸಭೆಯಲ್ಲಿಂದು ಮಂಡಿಸಲಾಯಿತು.

ರಾಜ್ಯದಲ್ಲಿ ಮರ್ಯಾದೆ ಹೆಸರಿನಲ್ಲಿ ಹತ್ಯೆ ಮತ್ತು ಹಲ್ಲೆಗಳನ್ನು ತಡೆಗಟ್ಟಲು ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆಯ ಹಾಗೂ ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧಕ (ಇವ ನಮ್ಮವ ಇವ ನಮ್ಮವ) 2026ನ್ನು ವಿಧಾನಸಭೆಯಲ್ಲಿಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಕಾನೂನು ಸಚಿವರ ಪರವಾಗಿ ಮಂಡಿಸಿದರು.

ಈ ಕಾಯ್ದೆಯಲ್ಲಿ ಮರ್ಯಾದೆ ಹೆಸರಿನಲ್ಲಿ ಹತ್ಯೆಯಾದರೆ ಭಾರತೀಯ ನ್ಯಾಯ ಸಮ್ಮಿತಿ ಅಡಿ ವಿಧಿಸಲಾದ ದಂಡನೆಗೆ ಬಾಧಕವಾಗದಂತೆ ಮರ್ಯಾದೆ ಹೆಸರಿನಲ್ಲಿ ದಂಪತಿ ಅಥವಾ ಅವರಲ್ಲಿ ಯಾರೊಬ್ಬರನ್ನೂ ಅಥವಾ ಯಾರೇ ವ್ಯಕ್ತಿಯನ್ನು ಯಾವುದೇ ರೀತಿಯ ಮೂಲಕ ಅವರ ಸಾವಿಗೆ ಕಾರಣರಾದ ಅಥವಾ ಸಾವಿಗೆ ಕಾರಣವಾಗುವ ಯಾವುದೇ ಅಂತಹ ಕೃತ್ಯವನ್ನು ಎಸಗಿದ ಯಾರೇ ವ್ಯಕ್ತಿಯು ಕನಿಷ್ಠ ಐದು ವರ್ಷಗಳ ಅವಧಿಯ ಜೈಲುಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಮರ್ಯಾದೆ ಹೆಸರಿನಲ್ಲಿ ದಂಪತಿ ಅಥವಾ ಅವರಲ್ಲಿ ಯಾರೊಬ್ಬರಿಗೂ ತೀವ್ರ ಗಾಯಗೊಳ್ಳಲು ಕಾರಣರಾದ ಯಾರೇ ವ್ಯಕ್ತಿಗೆ ಮೂರು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಯ ಜೈಲು ಶಿಕ್ಷೆ ಮತ್ತು 3 ಲಕ್ಷ ರೂ.ಗಳವರೆಗೆ ಜುಲ್ಮಾನೆಯನ್ನು ವಿಧಿಸಲು ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಮರ್ಯಾದೆ ಹೆಸರಿನಲ್ಲಿ ದಂಪತಿ ಅಥವಾ ಅವರಲ್ಲಿ ಯಾರೊಬ್ಬರಿಗೂ ಸಣ್ಣ ಗಾಯವಾಗಲು ಕಾರಣರಾದ ಯಾರೇ ವ್ಯಕ್ತಿಗೆ 2 ವರ್ಷಗಳಿಗೆ ಕಡಿಮೆ ಇಲ್ಲದೆ ಜೈಲು ಶಿಕ್ಷೆ ಮತ್ತು 2 ಲಕ್ಷ ರೂ. ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿ ಕಾನೂನು ಬಾಹಿರವಾಗಿ ಸಭೆ ಸೇರುವ ಯಾರೇ ಸದಸ್ಯನನ್ನು ಒಳಗೊಂಡು ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ಮದುವೆ ಆಗುವ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಅವರ ಯಾರೇ ಸಂಬಂಧಿಕರು ಅಥವಾ ಬೆಂಬಲಿಗರನ್ನು ಅಪರಾಧಿಕವಾಗಿ ಬೆದರಿಸಿದರೆ ಅಂತವಹವರಿಗೂ 3 ವರ್ಷಗಳಿಗೆ ಕಡಿಮೆ ಇಲ್ಲದ ಆದರೇ ಐದು ವರ್ಷಗಳಿಗೆ ವಿಸ್ತರಿಬಹುದಾದ ಅವಧಿಯ ಜೈಲು ಶಿಕ್ಷೆ ಮತ್ತು 2ಲಕ್ಷ ರೂ. ಜುಲ್ಮಾನೆ ವಿಧಿಸಲು ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಮರ್ಯಾದೆ ಹತ್ಯೆ ಹೆಸರಿನ ಅಪರಾಧಗಳು ಜಾಮೀನು ರಹಿತ ಅಪರಾಧಗಳು ಎಂದು ಈ ವಿಧೇಯಕದಲ್ಲಿ ಹೇಳಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಜಾತಿ ಆಧಾರಿತ ತಾರತಮ್ಯವು ನಿರಂತರವಾಗಿ ಅಂತರ್ಜಾತಿ ವಿವಾಹಗಳ ಮೂಲಕ ಅವರ ಜೀವನ ಸಂಗಾತಿ ಆಯ್ಕೆ ಮಾಡಿಕೊಳ್ಳುವ ತಮ್ಮ ಸಾಂವಿಧಾನಕ ಹಕ್ಕನ್ನು ಚಲಾಯಿಸುವವರ ವಿಶೇಷವಾಗಿ ಯುವ ವಯಸ್ಕರ ವಿರುದ್ಧ ಮರ್ಯಾದೆ ಗೇಡು ಹತ್ಯೆ ಒಳಗೊಂಡಂತೆ ಕ್ರೂರ ಸ್ವರೂಪದ ಹಿಂಸಾಚಾರ ತಡೆಯಲು ಈ ಕಾಯ್ದೆಯ ಉದ್ದೇಶ ಎಂದು ಕಾಯ್ದೆಯಲ್ಲಿ ಹೇಳಲಾಗಿದೆ.

# ಸಾಂಸ್ಕೃತಿಕ ಕಾರ್ಯಕ್ರಮ, ಉತ್ಸವಗಳಲ್ಲಿ ಡಿ.ಜೆ. ನಿಷೇಧ

**ವಿಧಾನಸಭೆಯಲ್ಲಿ ಪಕ್ಷಭೇದ ಮರೆತು ಸದಸ್ಯರ ಒತ್ತಾಯ**

**ಬೆಂಗಳೂರು, ಮಾ.18:** ರಾಜ್ಯದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಡಿಜೆಗಳನ್ನು ನಿಷೇಧಿಸಬೇಕು ಎಂದು ವಿಧಾನಸಭೆಯಲ್ಲಿ ಪಕ್ಷಬೇಧ ಮರೆತು ಸದಸ್ಯರು ಒತ್ತಾಯಿಸಿದರು.

ರಾಜ್ಯದಲ್ಲಿ ಉತ್ಸವಗಳನ್ನು ಆಯೋಜಿಸುವ ಸಂಬಂಧ ಬಿಜೆಪಿಯ ಚನ್ನಬಸಪ್ಪ ಅವರು ಕೇಳಿದ ಪ್ರಶ್ನೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಉತ್ತರಿಸುತ್ತಿದ್ದ ಸಂದರ್ಭದಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಜಯಂತಿ, ಉತ್ಸವಗಳಲ್ಲಿ ಡಿಜೆಗಳನ್ನು ಹಾಕಿ, ಐಟಂ ಸಾಂಗ್‌ಗಳನ್ನು ಹಾಕುತ್ತಿದ್ದಾರೆ. ಐಟಂ ಸಾಂಗ್‌ಗಳಿದ್ದರೆ ದೇವರೆ ಮುಂದೆ ಹೋಗದಂತ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಡಿಜೆ ಅಸಹ್ಯ ಹುಟ್ಟಿಸುತ್ತಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಡಿಜೆ, ಐಟಂ ಸಾಂಗ್‌ಗಳ ಅವಶ್ಯಕತೆ ಇಲ್ಲ. ಸಾಂಸ್ಕತಿಕ ಕಾರ್ಯಕ್ರಮ, ಜಯಂತಿಗಳಲ್ಲಿ ಡಿಜೆಗಳನ್ನು ನಿಷೇಧಿಸಿ ಎಂದು ಒತ್ತಾಯಿಸಿದರು.

ಆಗ ಸಭಾಧ್ಯಕ್ಷ ಯು.ಟಿ. ಖಾದರ್, ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಡಿಜೆ ನಿಷೇಧ ಮಾಡಿದ್ದೇವೆ ಎಂದು ಹೇಳಿದರು.

ಈ ಹಂತದಲ್ಲಿ ಮಾತನಾಡಿದ ಬಿಜೆಪಿಯ ಚನ್ನಬಸಪ್ಪ ಅವರು ಶಿವಮೊಗ್ಗ ಬಿಟ್ಟು ಬೇರೆ ಜಿಲ್ಲೆಗಳಿಗೆ ನಿಷೇಧ ಮಾಡಿ. ನಮ್ಮ ಅಭ್ಯಂತರವೇನು ಇಲ್ಲ. ಡಿಜೆ ಹಾಕುವುದು ಸಮಸ್ಯೆ ಅಲ್ಲ. ನಂಗನಾಚ್ ಮಾಡುತ್ತಾರೆ. ಸರ್ಕಾರ ಏನು ಮಾಡುತ್ತಿದೆ. ತಡೆಯಬೇಕಾಗಿರುವುದು ಸರ್ಕಾರದ ಕೆಲಸ. ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಆಜಾನ್ ತಡೆದಿದ್ದಿರಾ ಎಂದು ಪ್ರಶ್ನಿಸಿದರು.

ಆಗ ಸಭಾಧ್ಯಕ್ಷರು ಆಜಾನ್‌ಗೆ ಸಂಬಂಧಿಸಿದಂತೆ ಶಬ್ದದ ಬಗ್ಗೆ ಸುಪ್ರೀಂಕೋರ್ಟ್ ಸೂಚನೆ ಕೊಟ್ಟಿದೆ. ಅದರಂತೆ ಎಲ್ಲರೂ ನಡೆದುಕೊಳ್ಳುತ್ತಿದ್ದಾರೆ. ಅದು ಬೇರೆ ಡಿಜೆ ಬೇರೆ ಎಂದರು.

ಡಿಜೆ ನಿಷೇಧಕ್ಕೆ ಸಂಬಂಧಿಸಿದಂತೆ ಮಾತನಾಡಿದ ಬಿಜೆಪಿಯ ಸುರೇಶ್‌ಕುಮಾರ್, ಡಿಜೆಯಿಂದ ಹಾರ್ಟ್ ಸಮಸ್ಯೆ ಇರುವವರು, ಫೇಸ್ ಮೇಕರ್ ಹಾಕಿಕೊಂಡಿರುವವರಿಗೆ ಎಷ್ಟು ಸಮಸ್ಯೆ ಆಗುತ್ತಿದೆ ಎಂದು ನಮಗೆ ಗೊತ್ತಿದೆ. ಡಿಜೆ ಶಬ್ದಮಾಲಿನ್ಯದ ಬಗ್ಗೆ ಕ್ರಮ ಆಗಬೇಕು. ಡಿಜೆ ನಿಷೇಧಿಸಬೇಕು ಎಂದರು. ಸದಸ್ಯರ ಮಾತುಗಳಿಗೆ ಉತ್ತರ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಡಿಜೆ ನಿಷೇಧಿಸುವುದಕ್ಕೆ ನಮ್ಮ ತಕರಾರು ಇಲ್ಲ. ಬಿಜೆಪಿ ಸದಸ್ಯರು ಸಹಕಾರ ಮಾಡಿದರೆ ಡಿಜೆ ನಿಷೇಧ ಆದೇಶವನ್ನು ಹೊರಡಿಸುತ್ತೇನೆ ಎಂದು ಹೇಳಿದರು.

ಡಿಜೆ ಬೇಕೋ ಬೇಡವೋ ಎಂಬುದರ ಬಗ್ಗೆ ವಿಶೇಷ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳಿ ಸಭಾಧ್ಯಕ್ಷ ಯು.ಟಿ. ಖಾದರ್ ಈ ಕುರಿತ ಚರ್ಚೆಗೆ ತೆರೆ ಎಳೆದರು.

# ಎರಡು-ಮೂರು ತಿಂಗಳಲ್ಲಿ ಕೃಷಿ ಇಲಾಖೆ ಖಾಲಿಹುದ್ದೆಗಳ ಭರ್ತಿ



**■ ವಿಧಾನಸಭೆಯಲ್ಲಿ ಸಚಿವ ಚಲುವರಾಯ ಸ್ವಾಮಿ ಹೇಳಿಕೆ**

**ಬೆಂಗಳೂರು, ಮಾ.18:** ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಮೂರು-ನಾಲ್ಕು ತಿಂಗಳಲ್ಲಿ ಭರ್ತಿ ಮಾಡಲಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಬುಧವಾರ ವಿಧಾನಸಭೆಯ ಪ್ರಶ್ನೋತ್ತರ ಕಲಾಪದ ವೇಳೆ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿ, ಉಡುಪಿ ಜಿಲ್ಲೆ ವ್ಯಾಪ್ತಿಯಲ್ಲಿನ ವಿವಿಧ ಕಚೇರಿಗಳಲ್ಲಿ 143 ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 30 ಹುದ್ದೆಗಳು ಖಾಲಿ ಇರುತ್ತವೆ. 2018ರಲ್ಲಿ 370 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 2023ರಲ್ಲಿ 940 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿಗೆ ಬಂದಿದ್ದು ಸರ್ಕಾರದ ನಿರ್ದೇಶನದಂತೆ ಅಧಿಸೂಚನೆ ಹೊರಡಿಸಲು ಸಾಧ್ಯವಾಗಿರುವುದಿಲ್ಲ. ಸರ್ಕಾರದ ಇತ್ತೀಚಿನ ನಿರ್ದೇಶನದನ್ವಯ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಲು ಪ್ರಸ್ತಾವನೆ ಸಲ್ಲಿಸಲು ಕ್ರಮ ವಹಿಸಲಾಗುತ್ತಿದೆ.

ಇನ್ನು 2-3 ತಿಂಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಉಡುಪಿ ಭಾಗಕ್ಕೂ ಸಹ ನಿಯೋಜಿಸಲಾಗುವುದು ಎಂದು ಸಚಿವರು ತಿಳಿಸಿದರು.

# ಅಗತ್ಯಕ್ಕೆ ಅನುಗುಣವಾಗಿ ವಿದ್ಯಾರ್ಥಿ ನಿಲಯಗಳ ಸ್ಥಾಪನೆ: ತಂಗಡಗಿ



**ಬೆಂಗಳೂರು, ಮಾ.18:** ಕುಷ್ಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಒಟ್ಟು 14 ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಗಳ ಬೇಡಿಕೆಯನುಸಾರ ಅಗತ್ಯಕ್ಕೆ ಅನುಸಾರ ವಿದ್ಯಾರ್ಥಿ ನಿಲಯಗಳ ಸ್ಥಾಪನೆಗೆ ಕ್ರಮ ವಹಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶಿವರಾಜ ಎಸ್ ತಂಗಡಗಿ ವಿಧಾನಸಭೆಗಿಂದು ತಿಳಿಸಿದರು.

ಪ್ರಶ್ನೋತ್ತರ ಕಲಾಪದ ವೇಳೆ ದೊಡ್ಡನಗೌಡ ಹನುಮಗೌಡ ಪಾಟೀಲ ಇವರು ಕಳೆದ 3 ವರ್ಷಗಳಿಂದ ಕೊಪ್ಪಳ ಜಿಲ್ಲೆಯ ವ್ಯಾಪ್ತಿಗೆ ಮಂಜೂರು ಮಾಡಲಾಗಿರುವ ವಸತಿ ನಿಲಯಗಳ ಬಗ್ಗೆ, ಹಾಗೂ ಕುಷ್ಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚಾಗಿ ಹಿಂದುಳಿದ ವರ್ಗಗಳ ಜನರು ವಾಸವಾಗಿದ್ದು, ಹೆಚ್ಚುವರಿಯಾಗಿ ಹಿಂದುಳಿದ ವರ್ಗಗಳ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಂತೆ ಕೋರಿದರು.

ಈ ಸಮಯದಲ್ಲಿ ಶಾಸಕರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕುಷ್ಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 10 ಮೆಟ್ರಿಕ್ ಪೂರ್ವ ಹಾಗೂ ನಾಲ್ಕು ಮೆಟ್ರಿಕ್ ನಂತರದ ಒಟ್ಟು 14 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ ಎಂದರು. ಕಳೆದ ಮೂರು ವರ್ಷದಲ್ಲಿ ಒಟ್ಟು 250 ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ. ಜಿಲ್ಲಾ ಕೇಂದ್ರಗಳಲ್ಲಿ ವಿದ್ಯಾರ್ಥಿನಿಲಯಗಳ ಬೇಡಿಕೆ ಇದೆ. ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಬೇಡಿಕೆ ಹಾಗೂ ಅಗತ್ಯತೆ ಅನುಸಾರ ವಿದ್ಯಾರ್ಥಿನಿಲಯಗಳನ್ನು ಹೆಚ್ಚಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

# ಪುಣ್ಯಕ್ಷೇತ್ರ ದರ್ಶನಕ್ಕೆ ಸಹಾಯಧನ: ಸಚಿವ ರಾಮಲಿಂಗಾರೆಡ್ಡಿ



**ಬೆಂಗಳೂರು, ಮಾ.18:** ಪುಣ್ಯಕ್ಷೇತ್ರಗಳ ದರ್ಶನಕ್ಕಾಗಿ ಆಡಳಿತ ಮಂಡಳಿಯು ಧನಸಹಾಯ ಘೋಷಿಸಿದೆ. ಸಚಿವ ರಾಮಲಿಂಗಾರೆಡ್ಡಿ ಅವರು ಸದನದಲ್ಲಿ ಮಾಹಿತಿ ನೀಡಿದಂತೆ, ಜಮ್ಮುವಿನ ವೈಷ್ಣೋದೇವಿ ದೇವಸ್ಥಾನಕ್ಕೆ ತೆರಳುವ ಭಕ್ತರಿಗೆ ತಲಾ 5,000 ರೂ. ಸಹಾಯಧನ ನೀಡಲು 5 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ. ಈ ಸೌಲಭ್ಯವು 2026-27ನೇ ಸಾಲಿನಿಂದ ಜಾರಿಯಾಗಲಿದೆ. ರಾಜ್ಯ ಸರ್ಕಾರ ನೀಡುವ ನೆರವಿನ ವಿವರಗಳು ಈ ಕೆಳಗಿನಂತಿವೆ

ಮಾನಸ ಸರೋವರ: 30,000 ರೂ., ಚಾರ್ ಧಾಮ್: 20,000 ರೂ., ಕಾಶಿ ಮತ್ತು ವೈಷ್ಣೋದೇವಿ: 5,000 ರೂ.. ಇನ್ನು ಪ್ರತಿವರ್ಷ 2,500 ಅರ್ಚಕರಿಗೆ ಉಚಿತ ಪ್ರವಾಸ ಭಾಗ್ಯವನ್ನೂ ಕಲ್ಪಿಸಲಾಗಿದೆ. ಯಾತ್ರಾರ್ಥಿಗಳು ಭೇಟಿ ನೀಡಿದ ಸ್ಥಳದ ಭಾವಚಿತ್ರಗಳನ್ನು ಅಪ್‌ಲೋಡ್ ಮಾಡಿದ ನಂತರ, ಮೊದಲು ಬಂದವರಿಗೆ ಆದ್ಯತೆಯ ಮೇಲೆ ನೇರವಾಗಿ ಅವರ ಖಾತೆಗೆ ಹಣ ವರ್ಗಾವಣೆಯಾಗಲಿದೆ. ಭಕ್ತರ ಆರ್ಥಿಕ ಹೊರೆ ತಗ್ಗಿಸುವುದು ಈ ಯೋಜನೆಯ ಮೂಲ ಉದ್ದೇಶವಾಗಿದೆ.

# 2000 ಲಕ್ಷ ರೂ. ವೆಚ್ಚದಲ್ಲಿ ಬಂದರು ಹೂಳೆತ್ತುವ ಕಾಮಗಾರಿ



**■ ಪೂರ್ವ ಬ್ಯಾತಿ ಮೆಟ್ರಿಕ್ ಸರ್ವೇ**

**■ ಸಚಿವ ಮಂಕಾಳ ವೈದ್ಯ ಮಾಹಿತಿ**

**ಬೆಂಗಳೂರು, ಮಾ.18:** ರಾಜ್ಯದ 8 ಮೀನುಗಾರಿಕೆ ಬಂದರುಗಳಲ್ಲಿ ಮೀನುಗಾರಿಕಾ ದೋಣಿಗಳು ಸುಗಮವಾಗಿ ಮತ್ತು ವೇಗವಾಗಿ ಚಲಿಸಲು ಅನುಕೂಲವಾಗಿಸಲು ನ್ಯಾವಿಗೇಷನ್ ಚಾನಲ್‌ಗಳಲ್ಲಿ ಹಂತಹಂತವಾಗಿ ರೂ.2000 ಲಕ್ಷ ಅಂದಾಜು ವೆಚ್ಚದಲ್ಲಿ ಹೂಳೆತ್ತು ಕಾಮಗಾರಿ ಕೈಗೊಳ್ಳಲು ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ತಿಳಿಸಿದರು. ಸದಸ್ಯರಾದ ಮಂಜುನಾಥ್ ಭಂಡಾರಿ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಕಡಲ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಮೀನುಗಾರರು ಮೀನುಗಾರಿಕೆ ಅಥವಾ ಮೀನುಗಾರಿಕೆಗೆ ಸಂಬಂಧಿಸಿದ ಚಟುವಟಿಕೆಯಲ್ಲಿ ತೊಡಗಿರುವಾಗ ಸಂಭವಿಸಿರುವ ದೋಣಿ ಹಾನಿ ಪ್ರಕರಣಗಳು ಮತ್ತು ವೈದ್ಯಕೀಯ ವೆಚ್ಚ ಮರಣ ಪ್ರಕರಣಗಳಲ್ಲಿ ಸಂಕಷ್ಟಕ್ಕೀಡಾದವರ ಕುಟುಂಬಗಳಿಗೆ ಸಂಕಷ್ಟ ಪರಿಹಾರ ನಿಧಿಯಿಂದ ಆರ್ಥಿಕ ಪರಿಹಾರವನ್ನು ಮೀನುಗಾರಿಕೆ ಇಲಾಖೆಯಿಂದ ನೀಡಲಾಗುತ್ತಿದೆ ಎಂದರು. ಆಯವ್ಯಯ ಭಾಷಣದಲ್ಲಿ ಮಾಡಿರುವ ಘೋಷಣೆಯಂತೆ ವಿವಿಧ ಬಂದರು ಪ್ರದೇಶಗಳಲ್ಲಿ ಹೂಳೆತ್ತುವ ಬಗ್ಗೆ ಪೂರ್ವ ಬ್ಯಾತಿ ಮೆಟ್ರಿಕ್ ಸರ್ವೆಯನ್ನು ರೂ.69.32 ಲಕ್ಷ ವೆಚ್ಚದಲ್ಲಿ ನಡೆಸಲಾಗಿದ್ದು, ಅನುದಾನ ಲಭ್ಯತೆಗನುಗುಣವಾಗಿ ಡ್ರೆಜ್ಜಿಂಗ್ ಕಾಮಗಾರಿಗಳನ್ನು ಹಂತಹಮತವಾಗಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು ಎಂದರು.

# ಪ್ರತಿ ಜಿಲ್ಲೆಯಲ್ಲೂ ಉತ್ಸವ ಆಚರಣೆಗೆ ಮಾರ್ಗಸೂಚಿ, ನೀತಿ ರೂಪಿಸಿ: ಸರ್ಕಾರಕ್ಕೆ ಯು.ಟಿ. ಖಾದರ್ ಸೂಚನೆ

**ಬೆಂಗಳೂರು, ಮಾ.18:** ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲೂ ಉತ್ಸವಗಳನ್ನು ನಡೆಸುವ ಸಂಬಂಧ ಒಂದು ಮಾರ್ಗಸೂಚಿ ಮತ್ತು ನೀತಿಗಳ್ನು ರೂಪಿಸಿ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸರ್ಕಾರಕ್ಕೆ ಸೂಚನೆ ನೀಡಿದರು.


ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಚನ್ನಬಸಪ್ಪ ಅವರು ಶಿವಮೊಗ್ಗದ ಸಹ್ಯಾದ್ರಿ ಉತ್ಸವ ಆಚರಣೆ ಬಗ್ಗೆ ಕೇಳಿದ್ದ ಪ್ರಶ್ನೆ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಸಭಾಧ್ಯಕ್ಷರು, ಕರ್ನಾಟಕ ರಾಜ್ಯ ತನ್ನದೇ ಆದ ಇತಿಹಾಸ, ಸಂಸ್ಕೃತಿಯನ್ನು ಹೊಂದಿದೆ. ಪ್ರತಿಯೊಂದು ಜಿಲ್ಲೆಗಳಿಗೂ ಸಂಸ್ಕೃತಿ, ಕಲೆಗಳು ಭಿನ್ನವಾಗಿವೆ. ಈ ಸಂಸ್ಕೃತಿ ಕಲೆಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸಲು ಹಾಗೂ ಸಂಸ್ಕೃತಿ ಪರಂಪರೆಯ ಆಚರಣೆಗಳನ್ನು ಯುವ ಜನಾಂಗಕ್ಕೆ ವರ್ಗಾಯಿಸಲು ಜಿಲ್ಲಾ ಉತ್ಸವಗಳ ಅವಶ್ಯಕತೆ ಇದೆ. ಹಾಗಾಗಿ ಜಿಲ್ಲಾ ಉತ್ಸವ2 ಸಂಬಂಧ ಒಂದು ಮಾರ್ಗಸೂಚಿ ನೀತಿಯನ್ನು ರೂಪಿಸಿ ಎಂದು ಹಾಗೆಯೇ ಪ್ರತಿಯೊಂದು ಜಿಲ್ಲೆಗೂ ಉತ್ಸವಕ್ಕೆ ಇಂತಿಷ್ಟು ಅನುದಾನ ಕೊಡಿ ಎಂದು ಸಲಹೆ ಮಾಡಿದರು.

ಸಭಾಧ್ಯಕ್ಷರ ಮಾತಿಗೆ ಹಲವು ಸದಸ್ಯರು ದ್ವನಿಗೂಡಿಸಿದರು. ಬಿಜೆಪಿಯ ಸುನಿಲ್‌ಕುಮಾರ್, ಹಂಪಿ ಉತ್ಸವ, ಆನೆಗುಂದಿ ಉತ್ಸವ, ಕಿತ್ತೂರು ಉತ್ಸವಗಳನ್ನು ದೊಡ್ಡಮಟ್ಟದಲ್ಲಿ ಮಾಡುತ್ತಾರೆ ಇವುಗಳು ಜಿಲ್ಲೆಗೆ ಸೀಮಿತವಾಗಿವೆ. ಇವುಗಳನ್ನು ರಾಜ್ಯಮಟ್ಟದ ಉತ್ಸವ ಎಂದು ಬಿಂಬಿಸಿ. ಇದರ ಜತೆಗೆ ಪ್ರತಿ ಜಿಲ್ಲೆಯಲ್ಲೂ ಉತ್ಸವ ಮಾಡಿ ಆಗ ಮಾತ್ರ ರಾಜ್ಯ ಸಾಂಸ್ಕೃತಿಕವಾಗಿ ಶ್ರೀಮಂತ ಎನಿಸಿಕೊಳ್ಳುತ್ತದೆ ಎಂದರು.

ಇದಕ್ಕೆ ದ್ವನಿಗೂಡಿಸಿ ಬಿಜೆಪಿ ಭಾಗೀರಥಿ ಮರುಳ್ಯ, ಹಿಂದೆ ಯುವಜನೋತ್ಸವ ಮಾಡುತ್ತಿದ್ದರು. ಈಗ ಯುವ ಜನೋತ್ಸವಗಳು ನಿಂತಿವೆ. ಯುವ ಜನೋತ್ಸವಗಳನ್ನು ತಾಲ್ಲೂಕುಗಳಲ್ಲಿ ಮಾಡುವುದರಿಂದ ಸ್ಥಳೀಯ ಕಲಾವಿದರು ತಮ್ಮ ಪ್ರತಿಭೆ ಪ್ರರ್ದರ್ಶನಕ್ಕೆ ಅವಕಾಶ ಮಾಡಿಕೊಡುತ್ತದೆ. ಹಾಗೆಯೇ ಸ್ಥಳೀಯ ಕಲೆಗಳು ನಶಿಸಿ ಹೋಗುವುದನ್ನು ತಡೆಯಬಹುದು ಎಂದರು.

ಬಿಜೆಪಿಯ ಗಾಲಿ ಜನಾರ್ದನ ರೆಡ್ಡಿ ಅವರು, ಆನೆಗುಂದಿ ಉತ್ಸವ ನಿಂತಿದೆ. ಮತ್ತೆ ಈ ಉತ್ಸವ ಆರಂಭಿಸಬೇಕು ಎಂದು ಹೇಳಿದರು.

ಈ ಹಂತದಲ್ಲಿ ಉತ್ಸವಗಳು ನಮ್ಮಸಾಂಸ್ಕೃತಿಕ ವೈಭವ ಎಂಬ ಚರ್ಚೆಗೆ ದ್ವನಿಗೂಡಿಸಿದ ಸಚಿವ ಪ್ರಿಯಾಂಕ ಖರ್ಗೆ ಅವರು, ನಾನು ಪ್ರವಾಸೋದ್ಯಮ ಸಚಿವನಾಗಿ ಕೆಲಸ ಮಾಡಿದ್ದೇನೆ. ಒಂದು ರಾಜ್ಯ ಹಲವು ಜಗತ್ತು ಎಂಬ ಘೋಷಣೆ ಇದೆ. ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕಿದೆ. ನಾವು ಕೂಡಾ ಕಲಬುರುಗಿಯಲ್ಲಿ ಉತ್ಸವಗಳನ್ನು ಮಾಡುತ್ತಿದ್ದೇವೆ. ಮೊನ್ನೆ ನಾಟಕೋತ್ಸವ ಆಯೋಜಿಸಿದ್ದೇವು.



ವರ್ಷಪೂರ್ತಿ ಈ ರೀತಿ ಚಟುವಟಿಕೆಗಳು ಆದಾಗ ಮಾತ್ರ ಸ್ಥಳೀಯ ಕಲಾವಿದರಿಗೆ ಅವಕಾಶ ಸಿಗುತ್ತದೆ. ದೊಡ್ಡ ಉತ್ಸವಗಳಲ್ಲಿ ದೊಡ್ಡ ಕಲಾವಿದರನ್ನು ಕರೆಸುತ್ತಾರೆ. ಸ್ಥಳೀಯ ಉತ್ಸವಗಳಾಗದರೆ ಸ್ಥಳೀಯ ಕಲಾವಿದರಿಗೆ ಅವಕಾಶ ಸಿಗುತ್ತದೆ ಎಂದರು.

ಸಚಿವ ಸಂತೋಷ್ ಲಾಡ್ ಮಾತನಾಡಿ, ಉತ್ಸವಗಳಿಗೆ ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾದ ಗಾಯಕರನ್ನು ಕರೆಸಿವುದರಿಂದ ಹೆಚ್ಚು ವೆಚ್ಚವಾಗುತ್ತಿದೆ. ಸ್ಥಳೀಯ ಕಲಾವಿದರನ್ನೇ ಬಳಕೆ ಮಾಡಿದರೆ ವೆಚ್ಚ ಕಡಿಮೆಯಾಗುತ್ತದೆ. ದೊಡ್ಡ ಮಟ್ಟದ ನಾಯಕರನ್ನು ನೋಡರು ಜನ ಸೇರುತ್ತಿದ್ದಾರೆ. ಸ್ಥಳೀಯ ಮಟ್ಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿದರೆ ಜನ ಸೇರುವುದೇ ಅನುಮಾನ ಎಂದು ಹೇಳಿದರು.

ಸದಸ್ಯರ ಎಲ್ಲ ಪ್ರಸ್ತಾವಗಳಿಗೆ ಉತ್ತರಿಸಿದ ಸಚಿವ ಶಿವರಾಂ ತಂಗಡಗಿ, ಸರ್ಕಾರ ಸಹ ಜಿಲ್ಲಾ ಉಸ್ತುವಗಳ ಪರವಾಗಿದೆ. ನಮ್ಮ ಅನುದಾನದ ಇತಿಮಿತಿಗಳಲ್ಲೇ ಉತ್ಸವಗಳನ್ನು ಮಾಡಬೇಕಾಗುತ್ತದೆ. ಎಲ್ಲ ಜಿಲ್ಲೆಗಳು ಈಗ ಉತ್ಸವ ಮಾಡಲು ಮುಂದಾಗಿದ್ದಾರೆ. ನಮ್ಮ ಇತಿಮಿತಿಯೊಳಗೆ ಉತ್ಸವಗಳಿಗೆ ಅನುದಾನ ನೀಡಿದ್ದೇವೆ. ಉತ್ಸವಗಳ ಸಂಬಂಧ ನೀತಿಯನ್ನು ರೂಪಿಸುವ ಸಂಬಂಧ ಪರಿಶೀಲನೆ ನಡೆಸುತ್ತೇವೆ ಎಂದು ಹೇಳಿದರು.

ಸಹ್ಯಾದ್ರಿ ಉತ್ಸವ, ಆನೆಗುಂದಿ ಉತ್ಸವವನ್ನು ಆರಂಭಿಸುವ ಬಗ್ಗೆಯೂ ಪ್ರಸ್ತಾಪಗಳು ಬಂದರೆ ತೀರ್ಮಾನ ಕೈಗೊಳ್ಳುತ್ತವೆ. ಶಿವಮೊಗ್ಗದ ದಸರಾ ಉತ್ಸವಕ್ಕೆ ಸರ್ಕಾರ 50 ಲಕ್ಷ ರೂ. ಅನುದಾನ ನೀಡಿತ್ತು. ಉತ್ಸವಗಳು ಇನ್ನೊಂದು ವಾರ ಇರುವಾಗ ಜನ ಅನುದಾನ ಕೇಳುತ್ತಾರೆ. ಎಲ್ಲ ಉತ್ಸವಗಳಿಗೂ ಅನುದಾನ ಕೊಡುವುದು ಕಷ್ಟ ಸಾಧ್ಯ. ಏನೇ ಇರಲಿ ಸಂಸ್ಕೃತಿಗಳ ಪ್ರತಿಬಿಂಬಿವಾಗಿರುವ ಉತ್ಸವಗಳಿಗೆ ಸರ್ಕಾರ ಹೆಚ್ಚಿನ ಅನುದಾನ ಕೊಡುತ್ತದೆ ಎಂದು ಅವರು ಹೇಳಿದರು.

## 199 ಪ್ರಶ್ನೆಗಳ ಪೈಕಿ 171ಕ್ಕೆ ಲಿಖಿತ ಉತ್ತರ

ವಿಧಾನಸಭೆಯು ಕಲಾಪದಲ್ಲಿ ಲಿಖಿತ ಮೂಲಕ ಉತ್ತರಿಸುವ ಒಟ್ಟು 199 ಪ್ರಶ್ನೆಗಳಿಗೆ 171ಕ್ಕೆ ಉತ್ತರ ನೀಡಲಾಗಿದೆ ಎಂದು ತಿಳಿಸಿ ಇಲಾಖಾವಾರು ವಿವರಗಳನ್ನು ಕಲಾಪದಲ್ಲಿ ವಿವರಿಸಿದರು. ಸಮಾಜ ಕಲ್ಯಾಣ ಇಲಾಖೆ 199ಕ್ಕೆ 135 ಉತ್ತರಗಳನ್ನು ನೀಡಿದ್ದಾರೆ. ಸಮಾಜ ಕಲ್ಯಾಣ 39ಕ್ಕೆ 34 ಉತ್ತರ ನೀಡಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ 55ಕ್ಕೆ 33, ಮಾಹಿತಿ ತಂತ್ರಜ್ಞಾನ ಒಂದಕ್ಕೆ ಒಂದು, ಕೃಷಿ ಇಲಾಖೆ 17ಕ್ಕೆ 16, ಕಾರ್ಮಿಕ ಇಲಾಖೆ 21ಕ್ಕೆ 20, ಹಿಂದುಳಿದ ವರ್ಗಗಳ ಇಲಾಖೆ 27ಕ್ಕೆ 11, ಕನ್ನಡ ಮತ್ತು ಸಂಸ್ಕೃತಿ ಇಲಾಖೆ 12ಕ್ಕೆ 11, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ 8ಕ್ಕೆ 7, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ 34ಕ್ಕೆ 15 ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.




ನವದೆಹಲಿಯಲ್ಲಿ ನಡೆದ ಭಾರತ್ ಟ್ರೈಬ್ಸ್ ಫೆಸ್ಟ್ 2026 ರಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಜುವಾಲ್ ಓರಂ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವೆ ಸಾವಿತ್ರಿ ಠಾಕೂರ್ ಭಾಗವಹಿಸಿದ್ದರು.

# ಹತ್ತಿ ಬೆಳೆಗಾರರಿಗೆ 1,718.56 ಕೋಟಿ ರೂ. ಎಂಎಸ್‌ಪಿ ಬೆಂಬಲಕ್ಕೆ ಸಿಸಿಇಎ ಅನುಮೋದನೆ

**ನವದೆಹಲಿ, ಮಾ.18:** 2023–24 ಹತ್ತಿ ಋತುವಿಗಾಗಿ ಭಾರತೀಯ ಹತ್ತಿ ನಿಗಮಕ್ಕೆ 1,718.56 ಕೋಟಿ ರೂ.ಗಳ ಕನಿಷ್ಠ ಬೆಂಬಲ ಬೆಲೆ ನಿಧಿಯನ್ನು ಬುಧವಾರ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಅನುಮೋದಿಸಿದೆ.

ಈ ನಿರ್ಧಾರವನ್ನು ಪ್ರಕಟಿಸಿದ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ರೈತರಿಗೆ ನೇರ ಬೆಲೆ ಬೆಂಬಲವನ್ನು ಒದಗಿಸಲು ಮತ್ತು ಮಾರುಕಟ್ಟೆಯ ಏರಿಳಿತದಿಂದ ಅವರನ್ನು ರಕ್ಷಿಸಲು ಈ ಹಂಚಿಕೆ ಉದ್ದೇಶಿಸಲಾಗಿದೆ ಎಂದು ಹೇಳಿದರು. "MSP ಕಾರ್ಯಾಚರಣೆಗಳು ಹತ್ತಿ ರೈತರ ಹಿತಾಸಕ್ತಿಗಳನ್ನು ಕಾಪಾಡಲು ವಿನ್ಯಾಸಗೊಳಿಸಲಾಗಿದೆ, ವಿಶೇಷವಾಗಿ ಮಾರುಕಟ್ಟೆಬೆಲೆಗಳು ಬೆಂಬಲ ಬೆಲೆಗಿಂತ ಕಡಿಮೆಯಾದಾಗ," ವೈಷ್ಣವ್ ಹೇಳಿದರು, ಈ ಹಸ್ತಕ್ಷೇಪವು ಹತ್ತಿ ಬೆಲೆಗಳಲ್ಲಿ ಸ್ಥಿರತೆಯನ್ನು ಖಚಿತಪಡಿಸುತ್ತದೆ ಮತ್ತು ಮಾರಾಟದ ತೊಂದರೆಯನ್ನು ತಡೆಯುತ್ತದೆ ಎಂದು ಹೇಳಿದರು.

ಭಾರತದ ಪ್ರಮುಖ ನಗದು ಬೆಳೆಗಳಲ್ಲಿ ಒಂದಾದ ಹತ್ತಿ ಗ್ರಾಮೀಣ ಆರ್ಥಿಕತೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ, 60 ಲಕ್ಷ ರೈತರಿಗೆ ಬೆಂಬಲ ನೀಡುತ್ತದೆ ಮತ್ತು ಸಂಸ್ಕರಣೆ, ವ್ಯಾಪಾರ ಮತ್ತು ಜವಳಿಗಳಂತಹ ಸಂಬಂಧಿತ ವಲಯಗಳಲ್ಲಿ ತೊಡಗಿಸಿಕೊಂಡಿರುವ ಅಂದಾಜು 400–500 ಲಕ್ಷ ಜನರಿಗೆ ಜೀವನೋಪಾಯವನ್ನು ಒದಗಿಸುತ್ತದೆ. 2023–24ರ ಋತುವಿನಲ್ಲಿ, ಈ ಬೆಳೆಯನ್ನು ಸರಿಸುಮಾರು 114.47 ಲಕ್ಷ ಹೆಕ್ಟೇರ್‌ಗಳಲ್ಲಿ ಬೆಳೆಸಲಾಗಿದ್ದು, ಉತ್ಪಾದನೆಯು 325.22 ಲಕ್ಷ ಬೇಲ್‌ಗಳು ಎಂದು ಅಂದಾಜಿಸಲಾಗಿದೆ – ಇದು ಜಾಗತಿಕ ಹತ್ತಿ ಉತ್ಪಾದನೆಯ ಸುಮಾರು ಕಾಲು ಭಾಗದಷ್ಟಿದೆ.

ಬೀಜ ಹತ್ತಿ (ಕಪಾಸ್) ಗಾಗಿ ಎಂಎಸ್‌ಪಿ ಅನ್ನು ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ ಶಿಫಾರಸುಗಳ ಆಧಾರದ ಮೇಲೆ ಸರ್ಕಾರವು ವಾರ್ಷಿಕವಾಗಿ ನಿಗದಿಪಡಿಸುತ್ತದೆ.

ಎಂಎಸ್‌ಪಿ ಬೆಂಬಲವು ರೈತರ ಆದಾಯವನ್ನು ಸ್ಥಿರಗೊಳಿಸುವುದಲ್ಲದೆ, ಹತ್ತಿ ಕೃಷಿಯಲ್ಲಿ ನಿರಂತರ ಆಸಕ್ತಿಯನ್ನು ಉತ್ತೇಜಿಸುತ್ತದೆ ಮತ್ತು ಗುಣಮಟ್ಟದ ಹತ್ತಿ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಭಾರತದ ವಿಶಾಲ ಗುರಿಗೆ ಕೊಡುಗೆ ನೀಡುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ದೆಹಲಿಯ ಪಾಲಂನಲ್ಲಿ ಬೆಂಕಿ ಅವಘಡ: 3 ಮಕ್ಕಳು ಸೇರಿದಂತೆ 9 ಜನರು ಸಾವು– ಪ್ರಧಾನಿ ಪರಿಹಾರ ಘೋಷಣೆ




**ನವದೆಹಲಿ, ಮಾ.18:** ನೈರುತ್ಯ ದೆಹಲಿಯ ಪಾಲಂ ಪ್ರದೇಶದ ವಸತಿ ಕಟ್ಟಡದಲ್ಲಿ ಬುಧವಾರ ಬೆಳಿಗ್ಗೆ ಸಂಭವಿಸಿದ ಬೆಂಕಿ ಅವಘಡದಲ್ಲಿ ಇಬ್ಬರು ಪುರುಷರು, ನಾಲ್ವರು ಮಹಿಳೆಯರು ಮತ್ತು ಮೂವರು ಮಕ್ಕಳು ಸೇರಿದಂತೆ 9 ಜನರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಪಾಲಂ ಕಾಲೋನಿಯ ಸಾಧ್ ನಗರದಲ್ಲಿ ಬೆಳಿಗ್ಗೆ 7 ಗಂಟೆ ಸುಮಾರಿಗೆ ಕಟ್ಟಡದ ಕೆಳಗಿನ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಟ್ಟೆ ಮತ್ತು ಸೌಂದರ್ಯವರ್ಧಕ ಅಂಗಡಿಯಲ್ಲಿ ಬೆಂಕಿ ಕಾಣಿಸಿಕೊಂಡ ನಂತರ ಈ ಘಟನೆ ಸಂಭವಿಸಿದೆ.

ನೆಲಮಾಳಿಗೆ, ನೆಲ ಮತ್ತು ಮೊದಲ ಮಹಡಿಗಳಲ್ಲಿ ವಾಣಿಜ್ಯ ಸಾಮಗ್ರಿಗಳಿದ್ದವು, ಆದರೆ ಕುಟುಂಬವು ಮೇಲಿನ ಮಹಡಿಯಲ್ಲಿ ವಾಸಿಸುತ್ತಿತ್ತು. ಒಟ್ಟು 12 ಜನರನ್ನು ಕಟ್ಟಡದಿಂದ ರಕ್ಷಿಸಲಾಗಿದೆ. ಈ ಪೈಕಿ ಒಂಬತ್ತು ಮಂದಿ ಸಾವನ್ನಪ್ಪಿದ್ದಾರೆ ಎಂದು ಘೋಷಿಸಲಾಗಿದೆ, ಆದರೆ ಮೂವರು ಗಂಭೀರ ಗಾಯಗೊಂಡಿದ್ದಾರೆ ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಕಿ ಅವಘಡ ಸಂಭವಿಸಿದಾಗ ಕುಟುಂಬದ ಹಲವಾರು ಸದಸ್ಯರು ಒಳಗೆ ಸಿಲುಕಿಕೊಂಡಿದ್ದಾರೆ ಎಂದು ಹಿರಿಯ ಅಗ್ನಿಶಾಮಕ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. "ಕಟ್ಟಡವು ಒಂದು ನೆಲಮಾಳಿಗೆ, ನೆಲ ಮಹಡಿ ಮತ್ತು ನಾಲ್ಕು ಮಹಡಿಗಳನ್ನು ಒಳಗೊಂಡಿದ್ದು, ಛಾವಣಿಯ ಮೇಲೆ ತಾತ್ಕಾಲಿಕ ಟಿನ್ ಶೆಡ್ ಅನ್ನು ಹೊಂದಿತ್ತು. ಬಟ್ಟೆ ಮತ್ತು ಸೌಂದರ್ಯವರ್ಧಕಗಳನ್ನು ಕೆಳಗಿನ ಮಹಡಿಗಳಲ್ಲಿ ಸಂಗ್ರಹಿಸಲಾಗಿತ್ತು, ಆದರೆ ಮೇಲಿನ ಮಹಡಿಗಳನ್ನು ನಿವಾಸಗಳಾಗಿ ಬಳಸಲಾಗುತ್ತಿತ್ತು" ಎಂದು ಅಧಿಕಾರಿ ಹೇಳಿದರು.

ಬೆಂಕಿಯಿಂದ ತಪ್ಪಿಸಿಕೊಳ್ಳಲು ಇಬ್ಬರು ಜನರು ಕಟ್ಟಡದಿಂದ ಜಿಗಿದು ಆಸ್ಪತ್ರೆಗೆ ಸಾಗಿಸಿದ್ದಾರೆ ಎಂದು ವರದಿಯಾಗಿದೆ. ಅಗ್ನಿಶಾಮಕ ದಳದವರು, ಪೊಲೀಸ್ ತಂಡಗಳೊಂದಿಗೆ, ರಕ್ಷಣಾ ಮತ್ತು ತಂಪಾಗಿಸುವ ಕಾರ್ಯಾಚರಣೆಗಳನ್ನು ನಡೆಸಿದರು, ಈ ವರದಿಯನ್ನು ಸಲ್ಲಿಸುವ ಸಮಯದಲ್ಲಿ ಅವು ಇನ್ನೂ ಮುಂದುವರೆದಿದ್ದವು. ಐಜಿಐ ಆಸ್ಪತ್ರೆಯಲ್ಲಿ, ಸುಮಾರು 38 ವರ್ಷ ವಯಸ್ಸಿನ ಮಹಿಳೆಯೊಬ್ಬರು ಸಾವನ್ನಪ್ಪಿದ್ದರು, ಆದರೆ ಸುಮಾರು 40 ವರ್ಷ ವಯಸ್ಸಿನ ಪುರುಷ ಮತ್ತು ಎರಡು ವರ್ಷದ ಬಾಲಕಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಘಟನೆಯ ಬಗ್ಗೆ ದುಃಖ ವ್ಯಕ್ತಪಡಿಸುತ್ತಾ, "ದೆಹಲಿಯ ಪಾಲಂನಲ್ಲಿ ಸಂಭವಿಸಿದ ಬೆಂಕಿ ಅವಘಡವು ದುಃಖಕರವಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನಾನು ಸಂತಾಪ ಸೂಚಿಸುತ್ತೇನೆ. ಗಾಯಾಳುಗಳು ಆದಷ್ಟು ಬೇಗ ಚೇತರಿಸಿಕೊಳ್ಳಲಿ" ಎಂದು ಹೇಳಿದರು. ಮೃತರ ಸಂಬಂಧಿಕರಿಗೆ ತಲಾ 2 ಲಕ್ಷ ರೂ. ಮತ್ತು ಗಾಯಾಳುಗಳಿಗೆ 50,000 ರೂ. ಪರಿಹಾರವನ್ನು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಘೋಷಿಸಿದರು.

ಈ ಘಟನೆಯಿಂದ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ತೀವ್ರ ನೊಂದಿದ್ದು, ಬೆಂಕಿಯ ಕಾರಣವನ್ನು ಕಂಡುಹಿಡಿಯಲು ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಿದ್ದಾರೆ ಎಂದು ಹೇಳಿದ್ದಾರೆ. ಪ್ರಾಣ ಕಳೆದುಕೊಂಡವರ ಹತ್ತಿರದ ಸಂಬಂಧಿಕರಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ ಎಂದು ಸಿಎಂ ಘೋಷಿಸಿದರು, ಇದರಲ್ಲಿ ಮೃತ ವಯಸ್ಕರ ಕುಟುಂಬಗಳಿಗೆ ತಲಾ 10 ಲಕ್ಷ ರೂ., ಮೃತ ಅಪ್ರಾಪ್ತ ವಯಸ್ಕರ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಮತ್ತು ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡವರಿಗೆ ತಲಾ 2 ಲಕ್ಷ ರೂ. ಸೇರಿವೆ. ಈ ಕಷ್ಟದ ಸಮಯದಲ್ಲಿ ಪರಿಹಾರ, ಬೆಂಬಲ ಮತ್ತು ಅಗತ್ಯವಿರುವ ಎಲ್ಲಾ ಸಹಾಯವನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಅವರು ಪುನರುಚ್ಚರಿಸಿದರು. ಈ ಹಿಂದೆ, ಘಟನೆಯ ಕಾರಣ ಮತ್ತು ಇತರ ಅಂಶಗಳನ್ನು ತನಿಖೆ ಮಾಡಲು ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಲಾಗಿದೆ ಎಂದು ಅವರು ತಿಳಿಸಿದ್ದರು.

ರಕ್ಷಣಾ ಕಾರ್ಯಾಚರಣೆಯನ್ನು ಜಿಲ್ಲಾಡಳಿತ, ದೆಹಲಿ ಅಗ್ನಿಶಾಮಕ ಸೇವೆ ಮತ್ತು ದೆಹಲಿ ಪೊಲೀಸರು ನೇತೃತ್ವ ವಹಿಸಿದ್ದರು. ಜಿಲ್ಲಾಡಳಿತ, ದೆಹಲಿ ಅಗ್ನಿಶಾಮಕ ಸೇವೆ ಮತ್ತು ದೆಹಲಿ ಪೊಲೀಸರು ಜಂಟಿಯಾಗಿ ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸಿದ್ದರು. ವಿದ್ಯುತ್ ದೋಷದ ಸಾಧ್ಯತೆಯನ್ನು ಸೂಚಿಸುವ ಆರಂಭಿಕ ಸೂಚನೆಗಳೊಂದಿಗೆ, ಅಧಿಕಾರಿಗಳು ಬೆಂಕಿಯ ಕಾರಣದ ಬಗ್ಗೆ ತನಿಖೆಯನ್ನು ಪ್ರಾರಂಭಿಸಿದ್ದಾರೆ.

# ಯುದ್ಧ, ಎಫ್‌ಐಐ ಹಿಂತೆಗೆತ – ಕಚ್ಚಾತೈಲ ಬೆಲೆ ಏರಿಕೆ, ರೂಪಾಯಿ ದಾಖಲೆ ಕುಸಿತ

**ನವದೆಹಲಿ, ಮಾ.18:** ಬುಧವಾರ ವ್ಯವಹಾರದ ಅಂತ್ಯದ ವೇಳೆಗೆ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯ ದಾಖಲೆಯ ಕನಿಷ್ಠ 92.65 ರೂ.ಗೆ ತಲುಪಿತು, ವಿದೇಶಿ ಹೂಡಿಕೆದಾರರು ಷೇರುಪೇಟೆಗಳಿಂದ ಹಿಂದೆ ಸರಿಯುತ್ತಲೇ ಇದ್ದರು ಮತ್ತು ಕಚ್ಚಾ ತೈಲ ಬೆಲೆಗಳು ಏರುತ್ತಲೇ ಇದ್ದವು, ಭಾರತದ ವಿದೇಶಿ ವಿನಿಮಯ ಹೊರಹರಿವು ಹೆಚ್ಚಾಯಿತು. ಪಶ್ಚಿಮ ಏಷ್ಯಾದಲ್ಲಿ ಇರಾನ್–ಯುಎಸ್ ಯುದ್ಧ ಮುಂದುವರಿದರೆ, ಮಾರುಕಟ್ಟೆ, ಷೇರುಪೇಟೆಗಳಿಂದ ಅಮೆರಿಲ ಡಾಲರ್‌ನ ಸುರಕ್ಷಿತ ತಾಣಕ್ಕೆ ಪಲಾಯನ ಮುಂದುವರಿಯುತ್ತದೆ ಮತ್ತು ತಿಂಗಳ ಅಂತ್ಯದ ವೇಳೆಗೆ ರೂಪಾಯಿ ಡಾಲರ್‌ಗೆ 95 ರೂ.ಗೆ ತಲುಪಬಹುದು ಎಂದು ವಿಶ್ಲೇಷಕರು ನಂಬಿದ್ದಾರೆ.

"ಇಂದು ರೂಪಾಯಿ 92.50 ರೂ.ಗಳ ಮಾನಸಿಕ ತಡೆಗೋಡೆಯನ್ನು ಮುರಿಯಿತು. ರೂಪಾಯಿಯ ಮೌಲ್ಯ ಕಡಿಮೆಯಾಗಲು ಎರಡು ಕಾರಣಗಳಿವೆ – ಎಫ್‌ಐಐ ನಮ್ಮ ಮಾರುಕಟ್ಟೆಗಳಿಂದ ಹಿಂದೆ ಸರಿಯುವುದು ಮತ್ತು ಕಚ್ಚಾ ತೈಲ ಬೆಲೆ ಏರಿಕೆ" ಎಂದು ಸ್ವತಂತ್ರ ವ್ಯಾಪಾರಿ ಬ್ಯಾಂಕರ್ ವಿಕ್ರಮ್ ಸಾಹ್ನಿ ಹೇಳಿದರು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಾರ್ಚ್‌ವರೆಗೆ ಇಲ್ಲಿ ತಮ್ಮ ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ. "ಈ ತಿಂಗಳೊಳಗೆ ಹೊರಹರಿವು 57,000 ಕೋಟಿ ರೂ.ಗಳನ್ನು ದಾಟಿದೆ. ಮಾರ್ಚ್ 13 ರಂದು ಗರಿಷ್ಠ ಮಟ್ಟ ತಲುಪಿತ್ತು, ಒಂದೇ ದಿನದಲ್ಲಿ ಎಫ್‌ಐಐಗಳು 10,716 ಕೋಟಿ ರೂ.ಗಳನ್ನು ಹೊರತೆಗೆದವು" ಎಂದು ಅವರು ಹೇಳಿದರು. ಅಂತರರಾಷ್ಟ್ರೀಯ ಇಂಧನ ಸಂಸ್ಥೆಯು ಮಾರುಕಟ್ಟೆಗೆ ಹೆಚ್ಚಿನ ಕಚ್ಚಾತೈಲವನ್ನು ಬಿಡುಗಡೆ ಮಾಡುವ ಮೂಲಕ ಕಚ್ಚಾ ತೈಲದ ಬೆಲೆಯನ್ನು ಸ್ಥಿರಗೊಳಿಸಲು ಬಿಡ್ ಮಾಡಿತು, ಅದರ ಮೀಸಲುಗಳಿಂದ ಸುಮಾರು 400 ಶತಕೋಟಿ ಬ್ಯಾರಲ್‌ಗಳು ಸಹ ನಿರಾಶಾದಾಯಕ ವೈಫಲ್ಯವಾಗಿದೆ.

ಯುದ್ಧ ಪ್ರಾರಂಭವಾದಾಗಿನಿಂದ ಕಚ್ಚಾ ತೈಲದ ಬೆಲೆಗಳು ಸುಮಾರು 40 ಪ್ರತಿಶತದಷ್ಟು ಹೆಚ್ಚಾಗಿದೆ. ಇಸ್ರೇಲ್ ಇರಾನ್ನೊಳಗಿನ ಗುರಿಗಳನ್ನು ಹೊಡೆದು ಅಲ್ಲಿನ ಪ್ರಮುಖ ಯುದ್ಧ ಕ್ಯಾಬಿನೆಟ್ ನಾಯಕರನ್ನು ಕೊಲ್ಲಲು, ನಿರ್ಣಾಯಕ ಹಾರ್ಮುಜ್ ಜಲಸಂಧಿಯ ಮೂಲಕ ಕಚ್ಚಾತೈಲದ ಚಲನೆಯ ಅಡ್ಡಿಗಳ ಬಗ್ಗೆ ಕಳವಳಗಳು ಮುಂದುವರೆದವು, ಆದರೆ ಟ್ಯಾಂಕರ್‌ಗಳು ಮತ್ತು ಸರಕು ಹಡಗುಗಳಿಗೆ ಸುರಕ್ಷಿತ ಸಾಗಣೆಯನ್ನು ಖಚಿತಪಡಿಸಿಕೊಳ್ಳಲು ವಾಷಿಂಗ್ಟನ್ನೊಂದಿಗೆ ಜಲಸಂಧಿಯಲ್ಲಿ ಜಂಟಿಯಾಗಿ ಗಸ್ತು ತಿರುಗುವ ಯೋಜನೆಯನ್ನು ಯುಎಸ್ ಮಿತ್ರರಾಷ್ಟ್ರಗಳು ತಿರಸ್ಕರಿಸಿದವು. ಭಾರತವು ಆಮದು ಮಾಡಿಕೊಂಡ ತೈಲವನ್ನು ಹೆಚ್ಚು ಅವಲಂಬಿಸಿರುವುದರಿಂದ, ಈ ಏರಿಕೆಯು ಆಮದು ವೆಚ್ಚವನ್ನು ಹೆಚ್ಚಿಸಿದೆ, ಚಾಲ್ತಿ ಖಾತೆ ಕೊರತೆಯನ್ನು ಹದಗೆಡಿಸಿದೆ ಮತ್ತು ಡಾಲರ್‌ಗಳಿಗೆ ಬೇಡಿಕೆಯನ್ನು ಹೆಚ್ಚಿಸಿದೆ, ರೂಪಾಯಿಯನ್ನು ಮತ್ತಷ್ಟು ದುರ್ಬಲಗೊಳಿಸಿದೆ.

ಆರ್‌ಬಿಐ ಭಾರತೀಯ ಬ್ಯಾಂಕುಗಳ ಮೂಲಕ ಡಾಲರ್ ಮಾರಾಟದ ಮೂಲಕ ಹಣ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸಿದೆ ಆದರೆ ಕುಸಿತವನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಾಗಲಿಲ್ಲ ಎಂದು ಮೂಲಗಳು ತಿಳಿಸಿವೆ. ಫೆಬ್ರವರಿ 28 ರಂದು ಇರಾನ್–ಯುಎಸ್ ಯುದ್ಧ ಪ್ರಾರಂಭವಾದಾಗಿನಿಂದ ಭಾರತೀಯ ಕರೆನ್ಸಿ 1.5% ಕ್ಕಿಂತ ಹೆಚ್ಚು ಕುಸಿದಿದೆ.

ಸಂಘರ್ಷದ ಅಪಾಯಗಳಿಂದಾಗಿ ತೈಲ ಬೆಲೆಗಳು ಹೆಚ್ಚಾದರೆ ಮುಂಬರುವ ತಿಂಗಳುಗಳಲ್ಲಿ ಡಾಲರ್–ರೂಪಾಯಿ 92–95ರ ವ್ಯಾಪ್ತಿಯಲ್ಲಿರಬಹುದು ಎಂದು ನಾವು ನಿರೀಕ್ಷಿಸುತ್ತೇವೆ. ನಿರಾಶಾದಾಯಕ ಮಟ್ಟದಲ್ಲಿ ತೈಲವು ಬ್ಯಾರಲ್‌ಗೆ 130 ಡಾಲರ್ ತಲುಪಿದರೆ ಅಥವಾ ಹದಗೆಟ್ಟರೆ ಅದು ರೂ 97.50 ತಲುಪುವುದನ್ನು ನಾವು ನೋಡಬಹುದು" ಎಂದು ರಾಷ್ಟ್ರೀಕೃತ ಬ್ಯಾಂಕಿನ ಫಾರೆಕ್ಸ್ ಮಹಡಿಯ ಮುಖ್ಯಸ್ಥರು ಹೇಳಿದ್ದಾರೆ.

# ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಂಡ ಸಂಸದ ಪ್ರದ್ಯುತ್ ಬೋರ್ಡೋಲೊಯಿ



**ಗುವಾಹಟಿ, ಮಾ.18:** ಸಂಸದ ಪ್ರದ್ಯುತ್ ಬೋರ್ಡೋಲೊಯಿ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ.

ಇದಕ್ಕೂ ಮೊದಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿರುವ ಪದ್ಯುತ್ ಬೋರ್ಡೋಲೊಯಿ, ನನಗೆ ತೀವ್ರ ಬೇಸರವಾಗಿದ್ದು, ಪಕ್ಷದ ಎಲ್ಲ ಹುದ್ದೆ ಹಾಗೂ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ? ಎಂದು ಹೇಳಿದ್ದಾರೆ. ನನ್ನನ್ನು ಪಕ್ಷದ ನಾಯಕತ್ವವು ಮೂಲೆಗುಂಪು ಮಾಡುತ್ತಿದೆ ಎಂದು ಸೋಮವಾರ ಪತ್ರದಲ್ಲಿ ಆರೋಪಿಸಿದ್ದ ಅವರು, ಅಸ್ಸಾಂ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಗೌರವ್ ಗೊಗೊಯಿ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಪ್ರದ್ಯುತ್ ಬೋರ್ಡೋಲೊಯಿ ಅವರನ್ನು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪ್ರತಿಷ್ಠಿತ ದಿಸ್ಪುರ್ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುವ ಸಾಧ್ಯತೆ ಇದೆ ಎನ್ನಲಾಗಿದೆ.




ಯುಜಿಸಿಯನ್ನು ಬೆಂಬಲಿಸಿ ಎನ್‌ಎಸ್‌ಯುಐ, ಎಐಎಸ್‌ಎ ಮತ್ತು ಸಮಾಜವಾದಿ ಛತ್ರ ಸಭಾದ ಸದಸ್ಯರು ಮಂಗಳವಾರ ಲಕ್ನೋ ವಿಶ್ವವಿದ್ಯಾಲಯದಲ್ಲಿ ಪ್ರತಿಭಟನೆ ನಡೆಸಿದರು. ಬುಧವಾರ ಲಖನೌದಲ್ಲಿ ನಡೆದ ಮೆರವಣಿಗೆಯ ಸಂದರ್ಭದಲ್ಲಿ ವಿಶ್ವವಿದ್ಯಾಲಯದಿಂದ ಜಿಲ್ಲಾ ಮ್ಯಾಜಿಸ್ಟ್ರೇಟ್ ನಿವಾಸದ ಕಡೆಗೆ ಮೆರವಣಿಗೆ ನಡೆಸುತ್ತಿದ್ದ ವಿದ್ಯಾರ್ಥಿಗಳನ್ನು ಪೊಲೀಸರು ತಡೆದರು.

# ಹಾರ್ಮುಜ್ ಜಲಸಂಧಿಯಲ್ಲಿ ಇನ್ನೂ 20 ಭಾರತೀಯ ಹಡಗುಗಳು ಸಿಲುಕಿವೆ



**ನವದೆಹಲಿ, ಮಾ.18:** 3 ಲಕ್ಷ ಟನ್ ಎಲ್‌ಪಿಜಿ ಹೊತ್ತಿರುವ 6 ಹಡಗುಗಳು ಸೇರಿ ಒಟ್ಟು 20 ಭಾರತೀಯ ಹಡಗುಗಳು ಹಾರ್ಮುಜ್ ಜಲಸಂಧಿಯಲ್ಲಿ ಸಿಲುಕಿವೆ ಎಂದು ಹಡಗು ಸಚಿವಾಲಯವು ಮಂಗಳವಾರದಂದು. ಸೋಮವಾರ ಮತ್ತು ಮಂಗಳವಾರ, ತಲಾ ಸುಮಾರು 46,500 ಟನ್ ಎಲ್ಪಿಜಿ ಹೊತ್ತಿದ್ದ ಶಿವಾಲಿಕ್ ಮತ್ತು ನಂದಾದೇವಿ ಎಂಬ ಎರಡು ಹಗಲುಗಳು ಭಾರತವನ್ನು ತಲುಪಿವೆ. ಈ ಎರಡೂ ಹಡಗುಗಳಲ್ಲಿದ್ದ ಎಲ್‌ಪಿಜಿ ಭಾರತ ಅಡುಗೆ ಅನಿಲ ಬವಣೆಯನ್ನು ಕೊಂಚ ತಗ್ಗಿಸಿದೆ. ಆದಾಗ್ಯೂ, ಎಲ್ಪಿಜಿ ಬಿಕ್ಕಟ್ಟು ಮುಂದುವರೆದಿದೆ. ಜಗ್ ವಸಂತ್ ಮತ್ತು ಪೈನ್ ಗ್ಯಾಸ್ ಹಾರ್ಮುಜ್ ಜಲಸಂಧಿಯಿಂದ ಇನ್ನೂ ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಕೆಲವೇ ದಿನಗಳಲ್ಲಿ ಭಾರತವನ್ನು ತಲುಪಲಿವೆ, ಎರಡೂ ಕಂಟೇನರ್‌ಗಳು ಆ ಹಂತ ದಾಟಿವೆ. ಆದ್ದರಿಂದ ಈಗ, ಹಾರ್ಮುಜ್ ಜಲಸಂಧಿಯಲ್ಲಿ ಆರು ಎಲ್ಪಿಜಿ ಹಡಗುಗಳು, ಎಲ್‌ಎನ್‌ಜಿ ಟ್ಯಾಂಕರ್, ಕಚ್ಚಾ ತೈಲವಿರುವ ನಾಲ್ಕು ಹಡಗುಗಳು, ರಾಸಾಯನಿಕ ಮತ್ತು ಶುಚಿಗೊಳಿಸುವಿಕೆ ಹೊತ್ತ ಒಂದು ಹಡಗು, ಮೂರು ಕಂಟೈನರ್ ಹಡಗುಗಳು ಮತ್ತು ಎರಡು ಬಲ್ಕ್ ಕ್ಯಾರಿಯರ್‌ಗಳು ಸೇರಿದಂತೆ ಒಟ್ಟು 20 ಭಾರತೀಯ ಹಡಗುಗಳು ಸಿಲುಕಿವೆ ಎಂದು ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಹೇಳಿದ್ದಾರೆ. ಇನ್ನು, ಭಾರತದಿಂದ ರಫ್ತಾಗಬೇಕಿದ್ದ ಸರಕುಗಳನ್ನು ಹೊತ್ತ ಹಗಲುಗಳೂ ಭಾರತ ಬಂದರುಗಳಲ್ಲಿಯೇ ಉಳಿದಿವೆ. ಕೇಂದ್ರ ಸರ್ಕಾರದ ಅಧೀನದಲ್ಲಿರುವ ಎಲ್ಲ ಬಂದರುಗಳು ಹಡಗುಗಳ ಸಂಚಾರ ಮತ್ತು ಸರಕು ಕಾರ್ಯಾಚರಣೆಗಳನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತಿವೆ. ಹೆಚ್ಚುವರಿ ಸಂಗ್ರಹಣಾ ಸ್ಥಳ ಸೇರಿದಂತೆ ಅಗತ್ಯ ಬೆಂಬಲವನ್ನು ನೀಡುತ್ತಿದೆ ಎಂದು ಸಚಿವಾಲಯ ಹೇಳಿದೆ. ವಿ.ಒ. ಚಿದಂಬರನಾರ್ ಬಂದರು ಸರಕು ವರ್ಗಾವಣೆ ಕಂಟೈನರ್‌ಗಳಿಗಾಗಿ ಸುಮಾರು 90,000 ಚದರ ಮೀಟರ್ ಜಾಗವನ್ನು ಒದಗಿಸಲಾಗಿದೆ. ಜವಾಹರಲಾಲ್ ನೆಹರು ಬಂದರಿನಲ್ಲಿ ಶೀಘ್ರವಾಗಿ ಹಾಳಾಗುವ ವಸ್ತುಗಳಿರುವ ಕಂಟೈನರ್‌ಗಳ ಸಂಖ್ಯೆ 2,000 ರಿಂದ 1,000ಕ್ಕೆ ಇಳಿಸಲಾಗಿದೆ ಎಂದು ಸಿನ್ಹಾ ಹೇಳಿದ್ದಾರೆ. ಕೆಲವು ಕಂಟೈನರ್‌ಗಳು ದೇಶೀಯ ಮಾರುಕಟ್ಟೆಗೆ ಮರಳಿವೆ. ಕೆಲವು ಒಮಾನ್‌ನ ಸಲಾಹ್ ಮತ್ತು ಯುಎಇಯ ಖೋರ್ ಫಕ್ಕನ್‌ನಂತಹ ಬಂದರುಗಳಿಗೆ ಪ್ರಯಾಣ ಬೆಳೆಸಿವೆ ಎಂದು ಅವರು ವಿವರಿಸಿದ್ದಾರೆ.

# ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ: ಕಾಂಗ್ರೆಸಿನ ಮೂವರು ಶಾಸಕರ ಅಮಾನತು

**ಭುವನೇಶ್ವರ, ಮಾ. 18:** ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದಕ್ಕಾಗಿ ಒಡಿಶಾ ಕಾಂಗ್ರೆಸ್ ಮೂವರು ಶಾಸಕರಾದ ಸೋಫಿಯಾ ಫಿರ್ದೌಸ್, ರಮೇಶ್ ಜೆನಾ ಮತ್ತು ದಾಸರಥಿ ಗೊಮಾಂಗೊ ಅವರನ್ನು ಅಮಾನತುಗೊಳಿಸಿದೆ.

ಒಡಿಶಾ ವಿಧಾನಸಭೆಯಲ್ಲಿ ಕಾಂಗ್ರೆಸ್ 14 ಶಾಸಕರನ್ನು ಹೊಂದಿದ್ದು, ನಾಲ್ಕನೇ ರಾಜ್ಯಸಭಾ ಸ್ಥಾನಕ್ಕೆ ಬಿಜೆಡಿ ಅಭ್ಯರ್ಥಿ ದತ್ತೇಶ್ವರ್ ಹೋಟಾ ಅವರಿಗೆ ಬೆಂಬಲ ನೀಡಿತ್ತು. ಆದರೆ, ಬಿಜೆಡಿ ಮತ್ತು ಕಾಂಗ್ರೆಸ್ ಶಾಸಕರ ಅಡ್ಡ ಮತದಾನದಿಂದಾಗಿ ಬಿಜೆಪಿ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ದಿಲೀಪ್ ರೇ ಆಯ್ಕೆಯಾಗಿದ್ದಾರೆ.

ಶಾಸಕರು ರೇ ಪರವಾಗಿ ಅಡ್ಡ ಮತದಾನ ಮಾಡಿದ್ದರಿಂದ, ವಿರೋಧ ಪಕ್ಷವು ಕೇವಲ ಒಬ್ಬ ಅಭ್ಯರ್ಥಿಯನ್ನು ಮಾತ್ರ ಗೆಲ್ಲಿಸಿಕೊಳ್ಳಲು ಸಾಧ್ಯವಾಗಿದೆ. ಆದರೆ, ಬಿಜೆಪಿ ಎರಡು ಸ್ಥಾನಗಳನ್ನು ಆರಾಮವಾಗಿ ಪಡೆದುಕೊಂಡಿದ್ದು, ಒಂದು ಸ್ಥಾನವನ್ನು ಸ್ವತಂತ್ರ ಅಭ್ಯರ್ಥಿ ಮೂಲಕ ಗಳಿಸಿದೆ

ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿಯ ಮಾಧ್ಯಮ ವಿಭಾಗದ ಅಧ್ಯಕ್ಷ ಅರಬಿಂದ ದಾಸ್, ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಶಾಸಕರನ್ನು ಅಮಾನತುಗೊಳಿಸಲಾಗಿದೆ ಎಂದಿದ್ದಾರೆ.

ನಿನ್ನೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಮೂವರು ಸದಸ್ಯರು ಪಕ್ಷದ ವಿರುದ್ಧ ನಡೆದುಕೊಂಡು, ಬಿಜೆಪಿ ಬೆಂಬಲಿತ ಅಭ್ಯರ್ಥಿಯ ಪರವಾಗಿ ಮತ ಚಲಾಯಿಸಿದ್ದಾರೆ. ಈ ಹಿನ್ನೆಲೆ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪಕ್ಷದಿಂದ ಅಮಾನತುಗೊಳಿಸಲಾಗಿದೆ.

ಅಮಾನತುಗೊಂಡವರಲ್ಲಿ ಗಜಪತಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ದಶರಥಿ ಗೊಮಾಂಗೊ, ನಿಯಾಮ್ ಜಿಲ್ಲೆಯ ಸಾನಖೇಮುಂಡಿ ಕ್ಷೇತ್ರದ ಶಾಸಕ ರಮೇಶ್ ಜೆನಾ ಮತ್ತು ಬಾರಾಬತಿ–ಕಟಕ್ ಕ್ಷೇತ್ರದ ಶಾಸಕಿ ಸೋಫಿಯಾ ಫಿರ್ದೌಸ್ ಸೇರಿದ್ದಾರೆ. ಪಕ್ಷವಿರೋಧಿ ಚಟುವಟಿಕೆಗಳ ಕಾರಣದಿಂದ ಈ ಮೂವರನ್ನು ಪಕ್ಷದಿಂದ ಅಮಾನತು ಮಾಡಲಾಗಿದೆ ಎಂದು ಅರಬಿಂದ ದಾಸ್ ಮಂಗಳವಾರ ತಿಳಿಸಿದ್ದಾರೆ.

ಬಿಜೆಪಿ ಅಭ್ಯರ್ಥಿಗಳಾದ ಮನಮೋಹನ್ ಸಮಾಲ್ ಮತ್ತು ಸುಜೀತ್ ಕುಮಾರ್, ಬಿಜೆಡಿಯ ಸಂತ್ರಪ್ ಮಿಶ್ರಾ ಮತ್ತು ಸ್ವತಂತ್ರ ಅಭ್ಯರ್ಥಿ ದಿಲೀಪ್ ರೇ ರಾಜ್ಯಸಭೆ ಈ ಬಾರಿಯ ಚುನಾವಣೆಯಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

# ಚೀನಾಗೆ ತೆರಳುತ್ತಿದ್ದ ತೈಲ ಟ್ಯಾಂಕರ್ ಯೂಟರ್ನ್

## ಮಂಗಳೂರಿಗೆ ರಷ್ಯಾ ಕಚ್ಚಾತೈಲ



**ನವದೆಹಲಿ, ಮಾ.18:** ಚೀನಾಕ್ಕೆ ತೆರಳುತ್ತಿದ್ದ ರಷ್ಯಾದ ತೈಲ ತುಂಬಿದ ಟ್ಯಾಂಕರ್ ದಕ್ಷಿಣ ಚೀನಾ ಸಮುದ್ರದಲ್ಲಿ ಯೂಟರ್ನ್ ಹೊಡೆದು ಮಂಗಳೂರಿನತ್ತ ಬರುತ್ತಿದೆ. ಹಡಗು ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಜನವರಿ ಅಂತ್ಯದಲ್ಲಿ ಬಾಲ್ಟಿಕ್ ಸಮುದ್ರದ ಬಂದರಿನಿಂದ ಯುರಲ್ಸ್ ಕಚ್ಚಾತೈಲವನ್ನು ಅಕ್ವಾ ಟೈಟಾನ್ ಹಡಗಿಗೆ ಲೋಡ್ ಮಾಡಲಾಗಿತ್ತು. ಈಗ ಈ ಹಡಗು ಯೂಟರ್ನ್ ಹೊಡೆದಿದ್ದು ಮಾ.21 ರಂದು ನವಮಂಗಳೂರಿಗೆ ಆಗಮಿಸುವ ಸಾಧ್ಯತೆಯಿದೆ.

ಮಾರ್ಚ್ ಮಧ್ಯದಲ್ಲಿ ಆಗ್ನೇಯ ಏಷ್ಯಾದಲ್ಲಿ ಸಂಚರಿಸುತ್ತಿದ್ದಾಗ ಚೀನಾದ ರಿಝಾವೊ ಬಂದರು ತನ್ನ ಗಮ್ಯ ಸ್ಥಾನ ಎಂದು ಅಕ್ವಾ ಟೈಟಾನ್ ತೋರಿಸುತ್ತಿತ್ತು. ಮಧ್ಯಪ್ರಾಚ್ಯದಲ್ಲಿನ ಬಿಕ್ಕಟ್ಟಿನಿಂದಾಗಿ ತೈಲ ಪೂರೈಕೆಯಲ್ಲಿ ಸಮಸ್ಯೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ವಾರ ಭಾರತ ರಷ್ಯಾದಿಂದ 30 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಖರೀದಿಸಿದೆ. ವೋರ್ಟೆಕ್ಸಾ ಲಿಮಿಟೆಡ್ ಪ್ರಕಾರ ರಷ್ಯಾದ ತೈಲವನ್ನು ಹೊತ್ತುಕೊಂಡು ಚೀನಾಗೆ ಸಾಗಿಸುತ್ತಿದ್ದ ಕನಿಷ್ಠ ಏಳು ಟ್ಯಾಂಕರ್‌ಗಳು ಪ್ರಯಾಣ ಮಧ್ಯೆ ಗಮ್ಯಸ್ಥಾನವನ್ನು ಬದಲಾಯಿಸಿ ಭಾರತದತ್ತ ಪ್ರಯಾಣಿಸುತ್ತಿವೆ.

# ಮನೆಗೆ ನುಗ್ಗಿ ಚಿನ್ನ, ಬೆಳ್ಳಿ ಜತೆ ಎಲ್ಪಿಜಿ ಸಿಲಿಂಡರ್ ಕಳವು

**ಭೂಪಾಲ್, ಮಾ. 18:** ಬೀಗ ಹಾಕಿದ ಮನೆಗೆ ಕಳ್ಳನೊಬ್ಬ ನುಗ್ಗಿ ಚಿನ್ನ, ಬೆಳ್ಳಿ ಜತೆ ಎಲ್ಪಿಜಿ ಸಿಲಿಂಡರ್ ಕೂಡಾ ಕಳವು ಮಾಡಿರುವ ಘಟನೆ ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯಲ್ಲಿ ನಡೆದಿದೆ. ಸಿಸಿಟಿವಿಯಲ್ಲಿ ಈ ದೃಶ್ಯ ಸೆರೆಯಾಗಿದ್ದು ಸದ್ಯ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಹರಿದಾಡುತ್ತಿದೆ.

ನೀತು ರಾಜಾವತ್ ಎಂಬವರು ಸೋಮವಾರ ತನ್ನ ತಾಯಿಯ ಮನೆಗೆ ಹೋಗಿದ್ದರು. ಮರುದಿನ ಮನೆಗೆ ಹಿಂದಿರುಗಿದಾಗ ಕಳವಾಗಿರುವುದು ಬೆಳಕಿಗೆ ಬಂದಿದೆ. ಮನೆಯಲ್ಲಿ ಚಿನ್ನ, ಬೆಳ್ಳಿ ಆಭರಣಗಳು, ನಗದು ಮತ್ತು ಹಲವು ದಾಖಲೆಗಳನ್ನು ದೋಚಲಾಗಿದೆ. ಅದರೊಂದಿಗೆ ಕಳ್ಳ ಎಲ್ಪಿಜಿ ಸಿಲಿಂಡರ್ ಕೂಡ ಕದ್ದೊಯ್ದಿದ್ದಾನೆ. ಸದ್ಯ ದೇಶದಲ್ಲಿ ಎಲ್‌ಪಿಜಿ ಕೊರತೆ ಆತಂಕ ಸೃಷ್ಟಿಯಾಗಿರುವ ನಡುವೆಯೇ ಈ ಕಳ್ಳತನ ನಡೆದಿದೆ. ಸದ್ಯ ಕೊಟ್ವಾಲಿ ಪೊಲೀಸ್ ಠಾಣೆಯ ಅಧಿಕಾರಿಗಳು ಸಿಸಿಟಿವಿ ದೃಶ್ಯಗಳನ್ನು ಬಳಸಿಕೊಂಡು ಶಂಕಿತರನ್ನು ಗುರುತಿಸಿದ್ದು, ಹುಡುಕಾಟ ಆರಂಭಿಸಿದ್ದಾರೆ. ಶೀಘ್ರದಲ್ಲೇ ಬಂಧಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವು ಹಲವು ದೇಶಗಳ ಮೇಲೆ ಪ್ರಭಾವ ಬೀರಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಅಡುಗೆ ಅನಿಲ ಆಮದು ಮಾಡಿಕೊಳ್ಳುವುದು ಕಷ್ಟವಾಗಿದ್ದು, ಭಾರತದಲ್ಲಿ ಎಲ್ಪಿಜಿ ಪೂರೈಕೆಯಲ್ಲಿ ಗಣನೀಯ ಕೊರತೆ ಉಂಟಾಗಿದೆ. ಬೆಂಗಳೂರು, ಮುಂಬೈ, ಚೆನ್ನೈ ಮತ್ತು ಹೈದರಾಬಾದ್ನಂತಹ ಪ್ರಮುಖ ನಗರಗಳಲ್ಲಿ ಹೋಟೆಲ್ಗಳು ಮತ್ತು ರೆಸ್ಟೋರೆಂಟ್‌ಗಳು ಅನಿಲದ ಕೊರತೆಯಿಂದಾಗಿ ಮುಚ್ಚುವ ಹಂತಕ್ಕೆ ತಲುಪಿದೆ.

ಆದರೆ ಇವೆಲ್ಲವುದರ ನಡುವೆ ಹಲವೆಡೆ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಸಿಲಿಂಡರ್ ಮಾರಾಟವಾಗುತ್ತಿರುವುದು ಬೆಳಕಿಗೆ ಬಂದಿದೆ. ಇನ್ನು ಕೆಲವೆಡೆ ಎಲ್‌ಪಿಜಿ ಸಿಲಿಂಡರ್ ಕಳ್ಳತನವೂ ನಡೆದಿದೆ. ಬೆಂಗಳೂರಿನ ಕಲ್ಯಾಣ ನಗರದಂತಹ ವಸತಿ ಪ್ರದೇಶಗಳಲ್ಲಿಯೂ ಸಿಲಿಂಡರ್ ಕದಿಯುತ್ತಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದೆ. ಕೇರಳದ ತಿರುವನಂತಪುರಂನ ರೆಸ್ಟೋರೆಂಟ್‌ಗಳಿಂದಲೂ ಅಡುಗೆ ಅನಿಲದ ಸಿಲಿಂಡರ್ಗಳು ಕಳವಾಗಿವೆ.

ಇನ್ನು ಭೋಪಾಲ್ ಲಾಲ್‌ಘಾಟಿ ಪ್ರದೇಶದಲ್ಲಿ ನಡೆದ ಪ್ರತ್ಯೇಕ ಪ್ರಕರಣವೊಂದರಲ್ಲಿ, ವಕೀಲರೊಬ್ಬರ ಮನೆಯಲ್ಲಿ ಗ್ಯಾಸ್ ಸಿಲಿಂಡರ್ ಕಳ್ಳತನ ನಡೆದಿದೆ. ಮೋಟಾರ್ ಸೈಕಲ್‌ನಲ್ಲಿ ಬಂದ ಮೂವರು ಅಪರಿಚಿತ ವ್ಯಕ್ತಿಗಳು ಮನೆಯ ಪಾರ್ಕಿಂಗ್ ಪ್ರದೇಶದಿಂದ ನಾಲ್ಕು ಖಾಲಿ ಸಿಲಿಂಡರ್‌ಗಳನ್ನು ಕದ್ದೊಯ್ದಿದ್ದಾರೆ ಎಂದು ಆರೋಪಿಸಲಾಗಿದೆ.

# ಕೊಳೆಗೇರಿಗಳ ಅಭಿವೃದ್ಧಿ – ವಸತಿ ಸೌಲಭ್ಯ ಒದಗಿಸಲು ಕ್ರಮ: ಸಚಿವ ಜಮೀರ್ ಅಹಮದ್ ಖಾನ್



**ಬೆಂಗಳೂರು, ಮಾ.18:** ಕರ್ನಾಟಕ ರಾಜ್ಯದಾದ್ಯಂತ ಇರುವ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ಮೂಲಭೂತ ಸೌಕರ್ಯ ಗಳನ್ನು ಒದಗಿಸುವ ಜೊತೆಗೆ, ಅವರಿಗೆ ಸುಸಜ್ಜಿತ ಮನೆಗಳನ್ನು ನಿರ್ಮಿಸಿಕೊಡುವ ಮೂಲಕ ಅವರ ಜೀವನಮಟ್ಟವನ್ನು ಸುಧಾರಿಸಲು ಸರ್ಕಾರವು ವಿಶೇಷ ಆದ್ಯತೆ ನೀಡುತ್ತಿದೆ ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ ಬಿ.ಜಡ್. ಜಮೀರ್ ಅಹಮದ್ ಖಾನ್ ವಿಧಾನ ಪರಿಷತ್ತಿಗಿಂದು ತಿಳಿಸಿದರು.

ಪ್ರಶ್ನೋತ್ತರ ಕಲಾಪದ ವೇಳೆ ಪರಿಷತ್ ಸದಸ್ಯ ಡಾ.ಕೆ. ಗೋವಿಂದರಾಜ್ ಅವರ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಮೂಲಕ ಹಮ್ಮಿಕೊಳ್ಳಲಾಗಿರುವ ವಿವಿಧ ಜನಪರ ಯೋಜನೆಗಳ ವಿವರಗಳನ್ನು ಹಂಚಿಕೊಂಡರು.

ರಾಜ್ಯದಲ್ಲಿ ಈವರೆಗೆ ಒಟ್ಟು 3,025 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು, ಕಾನೂನಾತ್ಮಕವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಈ ಪೈಕಿ 2,866 ಪ್ರದೇಶಗಳನ್ನು ಮಂಡಳಿಯ ವ್ಯಾಪ್ತಿಗೆ ಸೇರಿಸಿ ಘೋಷಣೆ ಮಾಡಲಾಗಿದೆ. 2011ರ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ಅನ್ವಯ, ಈ ಪ್ರದೇಶಗಳಲ್ಲಿ ಅಂದಾಜು 40.50 ಲಕ್ಷ ಜನಸಂಖ್ಯೆಯು ವಾಸಿಸುತ್ತಿದೆ ಎಂದು ಅಂದಾಜಿಸಲಾಗಿದೆ ಎಂದರು.

ಪ್ರಸ್ತುತ, ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗೂ ರಾಜ್ಯ ಸರ್ಕಾರದ ವಸತಿ ಯೋಜನೆಗಳ ಸಂಯೋಜನೆಯಲ್ಲಿ ಒಟ್ಟು 1,80,253 ಮನೆಗಳ ನಿರ್ಮಾಣಕ್ಕೆ ಅನುಮೋದನೆ ಸಿಕ್ಕಿದೆ. ಈ ಬೃಹತ್ ಯೋಜನೆಯಲ್ಲಿ ಈಗಾಗಲೇ 86,651 ಮನೆಗಳು ಪೂರ್ಣಗೊಂಡಿದ್ದು, ಇನ್ನುಳಿದ ಮನೆಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ.

ಪೂರ್ಣಗೊಂಡಿರುವ ಮನೆಗಳ ಪೈಕಿ ಮಾರ್ಚ್ 2024ರೊಳಗೆ 36,789 ಮನೆಗಳನ್ನು ಹಾಗೂ ಜನವರಿ 2026ರಲ್ಲಿ 42,345 ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ. ಬಾಕಿ ಇರುವ ಸುಮಾರು 7,517 ಮನೆಗಳನ್ನು ಸೆಪ್ಟೆಂಬರ್ 2026ರೊಳಗೆ ಪೂರ್ಣಗೊಳಿಸಿ ಹಂಚಿಕೆ ಮಾಡಲು ಕಾಲಮಿತಿ ನಿಗದಿಪಡಿಸಲಾಗಿದೆ.

ವಿಶೇಷವಾಗಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 39 ಕೊಳಚೆ ಪ್ರದೇಶಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಮೂಲಕ ಮಾದರಿ ಕಾರ್ಯ ಮಾಡಲಾಗಿದೆ.

ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಶಿಕ್ಷಣ, ಮಾಹಿತಿ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಸಾಮಾಜಿಕ ಅರಿವು ಮೂಡಿಸಿ, ಅವರನ್ನು ಮುಖ್ಯವಾಹಿನಿಗೆ ತರುವುದು ಮಂಡಳಿಯ ಮುಖ್ಯ ಉದ್ದೇಶವಾಗಿದೆ ಎಂದು ಸಚಿವರು ತಿಳಿಸಿದರು.

# ಯೋಜನೆಗಳಿಲ್ಲದ, ದಿಕ್ಕು ತೋರಿಸದ ಅಂಕಿ-ಅಂಶಗಳ ಸಮೂಹ ಪ್ರಸಕ್ತ ಬಜೆಟ್ ಬಗ್ಗೆ ಬಿಜೆಪಿ ನಾಯಕ ಅರವಿಂದ ಬೆಲ್ಲದ್ ಕಿಡಿ

**ಕನ್ನಡಿಗರ ಭವಿಷ್ಯಕ್ಕೆ ಆರ್ಥಿಕ ಮರಣಶಾಸನ ಎಂದು ಬಣ್ಣನೆ**

**ಬೆಂಗಳೂರು, ಮಾ.18:** ರಾಜ್ಯದ ಪ್ರಸಕ್ತ ಆಯವ್ಯಯವು ಯೋಜನೆ ಗಳಿಲ್ಲದ, ದಿಸೆ ತೋರದ ಅಂಕಿ-ಅಂಶಗಳ ಸಮೂಹವಾಗಿದ್ದು, ಇದು ಕನ್ನಡಿಗರ ಭವಿಷ್ಯಕ್ಕೆ ಆರ್ಥಿಕ ಮರಣ ಶಾಸನವಾಗಲಿದೆ ಎಂದು ವಿಧಾನಸಭೆಯ ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ ಕಿಡಿಕಾರಿದರು.

ವಿಧಾನಸಭೆಯಲ್ಲಿ ಬುಧವಾರ ಬಜೆಟ್ ಕುರಿತು ಮಾತನಾಡಿದ ಅವರು, ರಾಜ್ಯದ ಆಯವ್ಯಯವು ಕೇವಲ ಅಂಕಿ-ಸಂಖ್ಯೆಗಳ ನಿರ್ಜೀವ ಪ್ರದರ್ಶನವಲ್ಲ; 7 ಕೋಟಿ ಜನರ ಬದುಕಿನ ಭರವಸೆಯ ದಿಕ್ಕು ತೋರಿಸಬೇಕು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ 17ನೇ ಬಜೆಟ್‌ನಲ್ಲಿ ದಿಕ್ಕು ತೋರಿಸುವ ದೃಷ್ಟಿಕೋನವೇ ಕಾಣುತ್ತಿಲ್ಲ ಎಂದು ಟೀಕಿಸಿದರು.

ಇದು ಬಜೆಟ್ ಅಲ್ಲ, ಸಾಲದ ಹೇಳಿಕೆ, ವಸತಿ, ಶಿಕ್ಷಣ, ಕೃಷಿ, ನೀರಾವರಿ, ಕೈಗಾರಿಕೆ, ಆರೋಗ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳ ಕುರಿತು ಅಂಕಿ-ಅಂಶಗಳನ್ನು ನೀಡಿದರೂ, ಒಟ್ಟಾರೆ ಈ ಬಜೆಟ್ ಅಭಿವೃದ್ಧಿಗೆ ದಾರಿ ತೋರಿಸುವುದಿಲ್ಲ. ಇದು ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆಯೇ, ಅಥವಾ ಸಾಲದ ಕೂಪಕ್ಕೆ ತಳ್ಳುತ್ತದೆಯೇ ಕಾಂಗ್ರೆಸ್ಸಿಗರ ಪಾಲಿಗೆ ಅಕ್ಷಯ ಪಾತ್ರೆಯಾದರೆ, ಜನರ ಪಾಲಿಗೆ ಖಾಲಿ ಚೊಂಬು ಎಂದರು.

**ವಸತಿ ಯೋಜನೆ: ಅಂಕಿ-ಅಂಶಗಳಲ್ಲಿ ವ್ಯತ್ಯಾಸ**

ಪಿಎಂಎವೈ ಯೋಜನೆಯಡಿಯಲ್ಲಿ 7.03 ಲಕ್ಷ ಮನೆಗಳ ಗುರಿ ಇಟ್ಟಿದ್ದರೂ, 3.13 ಲಕ್ಷ ಮನೆಗಳಷ್ಟೇ ಮಂಜೂರಾಗಿದ್ದು, ಕೇವಲ 9,757 ಮನೆಗಳು ನಿರ್ಮಾಣವಾಗಿವೆ. 4.19 ಲಕ್ಷ ಮನೆಗಳಿಗೆ 13,500 ಕೋಟಿ ಅಗತ್ಯವಿದ್ದರೂ, ಬಜೆಟ್‌ನಲ್ಲಿ ಸಮರ್ಪಕ ಅನುದಾನ ಇಲ್ಲ ಎಂದು ಬೆಲ್ಲದ್ ಅಂಕಿ-ಅಂಶ ಸಮೇತ ಆರೋಪಿಸಿದರು.

**ಶಿಕ್ಷಣ: ಘೋಷಣೆಗಳಷ್ಟೇ, ಅನುಷ್ಠಾನ ಶೂನ್ಯ**

ಕಳೆದ ಬಜೆಟ್‌ನಲ್ಲಿ 500 ಹೊಸ ಕೆಪಿಎಸ್ ಶಾಲೆಗಳ ಘೋಷಣೆ ಮಾಡಲಾಗಿದ್ದರೂ, ಒಂದೂ ಶಾಲೆ ಆರಂಭವಾಗಿಲ್ಲ. ಗುಣಮಟ್ಟದ ಶಿಕ್ಷಣ, ಉದ್ಯೋಗಮುಖಿ ತರಬೇತಿಗೆ ಸ್ಪಷ್ಟ ಯೋಜನೆ ಕಾಣುತ್ತಿಲ್ಲ ಎಂದು ಬೆಲ್ಲದ್ ಹೇಳಿದರು.

**ಕೃಷಿ ಮತ್ತು ನೀರಾವರಿ: ಅಲ್ಪ ಅನುದಾನ, ದೊಡ್ಡ ಸಮಸ್ಯೆ**

ಅಡಿಕೆ ಬೆಳೆಗೆ ಬಂದಿರುವ ರೋಗಕ್ಕೆ 500 ಕೋಟಿ ವಿಶೇಷ ಪ್ಯಾಕೇಜ್ ಅಗತ್ಯವಿದ್ದರೂ, ಕೇವಲ 10 ಕೋಟಿ ಮೀಸಲು ಮಾಡಿರುವುದನ್ನು ತೀವ್ರವಾಗಿ ವಿರೋಧಿಸಿದರು. ಕೃಷ್ಣಾ ಮೇಲ್ದಂಡೆ, ಮಹಾದಾಯಿ ಹಾಗೂ ಮೇಕೆದಾಟು ಯೋಜನೆಗಳಿಗೆ ತಕ್ಕ ಮಟ್ಟಿನ ಅನುದಾನ ನೀಡಿಲ್ಲ ಎಂದರು.



**ಉದ್ಯೋಗ: ಬೆಂಗಳೂರು ಕೇಂದ್ರೀಕರಣ**

ರಾಜ್ಯದಲ್ಲಿ 77 ಲಕ್ಷಕ್ಕೂ ಹೆಚ್ಚು ಇಪಿಎಫ್ ಖಾತೆದಾರರಲ್ಲಿ 78% ಮಂದಿ ಬೆಂಗಳೂರಿನವರೇ ಎಂದು ಹೇಳಿ, ಉತ್ತರ ಹಾಗೂ ಕಲ್ಯಾಣ ಕರ್ನಾಟಕದ ನಿರ್ಲಕ್ಷ್ಯವನ್ನು ಎತ್ತಿಹಿಡಿದರು. ಯುವನಿಧಿ ಯೋಜನೆಗೂ ಸಮರ್ಪಕ ಹಣ ನೀಡಿಲ್ಲ ಎಂದು ಆರೋಪಿಸಿದರು.

ಮೂಲಸೌಕರ್ಯಗಳ ಕೊರತೆಯಿಂದ 629 ಕಂಪನಿಗಳು ರಾಜ್ಯ ಬಿಟ್ಟಿದ್ದು, ಉದ್ಯೋಗ ಸೃಷ್ಟಿಯಲ್ಲೂ ಸರ್ಕಾರ ವಿಫಲವಾಗಿದೆ ಎಂದು ಹೇಳಿದರು. 56,000 ಹುದ್ದೆಗಳ ಭರ್ತಿಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

## ವಚನಗಳ ಮೂಲಕ ವ್ಯಂಗ್ಯ

**ಊರಿಲ್ಲದ ಊರಿಗೆ ಒಬ್ಬನೇ ಮುಖಂಡನಂತೆ, ಹಣವಿಲ್ಲದ ಬಜೆಟ್ಟಿಗೆ ನೂರಾರು ಭರವಸೆಗಳಂತೆ; ಅಭಿವೃದ್ಧಿಯ ಹಾದಿ ತಪ್ಪಿದ ಆಯವ್ಯಯ, ಮೊಸರಿನಲ್ಲಿ ಕಲ್ಲು ಹುಡುಕಿದಂತಿದೆ; ಕೈಲಾಗದವನಿಗೆ ಕಡವೇ ಸಾಕ್ಷಿ ಎಂಬಂತೆ, ಗ್ಯಾರಂಟಿಗಳಿಗೆ ಸಾಲವೇ ಆಧಾರವಾದರೆ, ಮುಂದಿನ ಪೀಳಿಗೆಯ ಭವಿಷ್ಯ ಮಣ್ಣಾಗುವುದೇ ಎಂದು ವಚನಗಳನ್ನು ಉಲ್ಲೇಖಿಸಿದ ಬೆಲ್ಲದ್, ಬಜೆಟ್ ಗಾತ್ರ ಮಾತ್ರ ಹೆಚ್ಚಾಗಿದೆ, ಅಭಿವೃದ್ಧಿ ಕಾಣುತ್ತಿಲ್ಲ. ಭರವಸೆಗಳ ಬಣ್ಣದ ಮಾತುಗಳಿಂದ ಜನರನ್ನು ಮೋಸಗೊಳಿಸುವ ಬದಲು, ನೈಜ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಆದ್ಯತೆ ನೀಡಬೇಕು ಎಂದು ಬೆಲ್ಲದ ಒತ್ತಾಯಿಸಿದರು.**

**ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಳ ವಿಚಾರಕ್ಕೆ ಲಕ್ಷ್ಮೀಹೆಬ್ಬಾಳ್ಕರ್ ಹೇಳಿಕೆ**

# ರಾಜ್ಯ ಸರ್ಕಾರದ ಬಗ್ಗೆ ಬೊಟ್ಟು ಮಾಡುವುದು ಸರಿಯಲ್ಲ, ಕೇಂದ್ರವೂ ಕಣ್ತೆರೆಯಬೇಕು

**ಬೆಂಗಳೂರು, ಮಾ. 18** ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಳ ವಿಷಯದಲ್ಲಿ ಕೇವಲ ರಾಜ್ಯ ಸರ್ಕಾರದ ಕಡೆಗೆ ಬೊಟ್ಟು ಮಾಡುವುದು ಸರಿಯಲ್ಲ, ಕೇಂದ್ರ ಸರ್ಕಾರವೂ ಈ ವಿಷಯದಲ್ಲಿ ಕಣ್ತೆರೆಯಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಬಜೆಟ್ ಅಧಿವೇಶನದ ಬುಧವಾರ ಪ್ರಶ್ನೋತ್ತರ ವೇಳೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ರಾಜ್ಯ ಅತಿ ಹೆಚ್ಚು ಗೌರವ ಧನವನ್ನು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ನೀಡುತ್ತಿದೆ. ಹೆಚ್ಚು ಗೌರವ ಧನ ಕೊಡುತ್ತಿರುವವರ ಪೈಕಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಸರ್ಕಾರದ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರ ಬಗ್ಗೆ ಸರ್ಕಾರ ಕಾಳಜಿ ವಹಿಸುತ್ತದೆ. ಹರಿಯಾಣ, ತೆಲಂಗಾಣ ಹಾಗೂ ಕೇರಳ ರಾಜ್ಯಗಳ ಬಳಿಕ ಹೆಚ್ಚು ಗೌರವ ಧನ ಕೊಡಲಾಗುತ್ತಿದೆ ಎಂದರು.

ಅಂಗನವಾಡಿ ಕಾರ್ಯಕರ್ತರಿಗೆ ಕೇಂದ್ರ ಸರ್ಕಾರ 2700 ರೂಪಾಯಿ ಗೌರವ ಧನವನ್ನು ಪಾವತಿಸಿದರೆ, ಉಳಿದ 9800 ರೂಪಾಯಿಯನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಕಳೆದ ಏಪ್ರಿಲ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ 1000 ರೂಪಾಯಿ, ಸಹಾಯಕಿಯರಿಗೆ 750 ರೂಪಾಯಿ ಏರಿಕೆ ಮಾಡಲಾಯಿತು. ಅವರು ಮಾಡುತ್ತಿರುವ ಕೆಲಸಕ್ಕೆ ಇದು ಸಾಕಾಗುತ್ತಿಲ್ಲ, ಸಹಾಯಧನ ಏರಿಕೆ ಮಾಡಬೇಕು ಎಂದು ಮನವಿ ಬಂದಿದ್ದು, ಈ ಸಂಬಂಧ ನಾವು ಈಗಾಗಲೇ ಹಣಕಾಸು ಇಲಾಖೆಗೆ ಮನವಿ ಸಲ್ಲಿಸಿದ್ದೇವೆ. ಆದರೆ ಈ ವಿಷಯದಲ್ಲಿ ಕೇಂದ್ರ ಸರಕಾರ ಒಂದು ಹೆಜ್ಜೆ ಮುಂದೆ ಹೋದರೆ ನಾವೂ ಒಂದು ಹೆಜ್ಜೆ ಮುಂದೆ ಹೋಗುತ್ತೇವೆ. ಅವರೂ ಕಣ್ತೆರೆಯಬೇಕು ಎಂದರು.

ಪ್ರಸಕ್ತ ವರ್ಷದಿಂದ 5,000 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಸರ್ಕಾರಿ ಮಾಂಟೆಸ್ಸರಿ ಆರಂಭಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಪೌಷ್ಟಿಕ ಆಹಾರದ ಜೊತೆಗೆ ಗುಣಮಟ್ಟದ ಶಿಕ್ಷಣ ನೀಡುವುದೇ ನಮ್ಮ ಉದ್ದೇಶ. ಬಿ.ಎ.ಬಿಎಡ್, ಎಂಎ, ಎಂಕಾಂ ಪದವಿ ಪಡೆದಿರುವ ಸುಮಾರು 17,000 ಅಂಗನವಾಡಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ, ಸರ್ಕಾರಿ ಮಾಂಟೆಸ್ಸರಿಗಳಲ್ಲಿ ಗುಣಮಟ್ಟ ಕಾಯ್ದುಕೊಳುವುದು ನಮ್ಮ ಉದ್ದೇಶದು ಸಚಿವರು ತಿಳಿಸಿದರು.

# ಕೆಪಿಎಸ್‌ಸಿ ಮೋಸ ಎಂದು ಪ್ರಪಂಚಕ್ಕೇ ತಿಳಿದಿದೆ: ಅಶೋಕ್



ಬೆಂಗಳೂರು, ಮಾ.18: ಕೆಪಿಎಸ್‌ಸಿ ಮೋಸ ಅಂತ ಪ್ರಪಂಚಕ್ಕೆ ಗೊತ್ತಿದೆ. ನೂರಾರು ಉದಾಹರಣೆಗಳನ್ನು ಕೊಟ್ಟಿದ್ದೇನೆ.

ಕೃಷ್ಣರ ಹೇಳಿಕೆಯಲ್ಲಿ ತಪ್ಪೂ ಇದೆ, ಸರಿಯೂ ಇದೆ. ನಮ್ಮಲ್ಲಿ ಒಂದು ಗಾದೆ ಇದೆ. ಹುಚ್ಚನಿಗೆ ಹೆಣ್ಣು ಕೊಡಿ ಅಂತ ಹೋದ್ರಂತೆ. ಅವರು ಹುಚ್ಚು ಬಿಡಿಸಿ ಕರೆತನ್ನಿ ಅಂದ್ರಂತೆ. ಹುಚ್ಚು ಬಿಡಿಸಲು ವೈದ್ಯರ ಬಳಿ ಕರೆದೊಯ್ದಾಗ ವೈದ್ಯರು ಮದುವೆ ಮಾಡಿ ಹುಚ್ಚು ಬಿಡುತ್ತೆ ಅಂದ್ರು. ಅಲ್ಲಿಗೆ ರಿಸಲ್ಟ್ ಏನಾಯ್ತು ಎಂದು ಆರ್ ಅಶೋಕ್ ಲೇವಡಿ ಮಾಡಿದ್ದಾರೆ.

ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡುತ್ತಾ, ಇದರ ಬಗ್ಗೆ ಎಸ್‌ಐಟಿ ಮಾಡಿ. ಸಿಎಂ ಮೇಲೆ ಮೂಡಾ ತನಿಖೆ ಆಯ್ತು. ಸಚಿವರು, ಶಾಸಕರ ಮೇಲೆ ತನಿಖೆ ಆಯ್ತು. ನಾವು ಹೋಗಿ ಕಟಕಟೆ ಮುಂದೆ ನಿಂತೆವು. ಪೊಲೀಸ್ ಠಾಣೆಗೆ ಹೋಗಿನಾವು ನಿಲ್ಲಲಿಲ್ವೇ? ಲೋಕಾ ಯುಕ್ತಕ್ಕೆ ಹೋಗಿ ವಿವರಣೆ ಕೊಡಲಿಲ್ವೇ? ಇವರು ಹೋಗಿ ನಿಲ್ಲಲಿ. ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆ ಕೊಡಿ ಎಂದು ಕಿಡಿ ಕಾರಿದ್ದಾರೆ.

ಸದನ ಸಮಿತಿ ಮಾಡೋದಾದ್ರೆ ಮಾಡಿ. ನಾನು ಅದಕ್ಕೆ ಸ್ವಾಗತ ಮಾಡ್ತೇನೆ. ಯಾವ ತನಿಖೆ ಮಾಡ್ತಿರೋ ನಿಮಗೆ ಸೇರಿದ್ದು, ಆದರೆ ಅವರಿಗೆ ಕಾನೂನಿನ ಭಯ ತೋರಿಸಿ. ಕೆಪಿಎಸ್ ಸಿಗಿಂತ ಸುಪ್ರೀಂ ಸರ್ಕಾರ ಅಂತ ತೋರಿಸಿ. ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ಮಾಡಿ ಎಂದು ಆಗ್ರಹಿಸಿದ್ದಾರೆ.



ಬೆಂಗಳೂರಿನ ಗಾಂಧಿ ಬಜಾರ್‌ನಲ್ಲಿ ಬುಧವಾರ ಯುಗಾದಿ ಹಬ್ಬದ ಮುನ್ನಾದಿನ ಜನರು ಖರೀದಿಯಲ್ಲಿ ತೊಡಗಿದ್ದ ದೃಶ್ಯ.

# ಧರ್ಮಸ್ಥಳ ಅಸಹಜ ಸಾವಿನ ಪ್ರಕರಣ: ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ




**ಬೆಂಗಳೂರು, ಮಾ.18:** ಧರ್ಮಸ್ಥಳ ಗ್ರಾಮದಲ್ಲಿ 1990ರಿಂದ 2021ರ ನಡುವೆ ಸಂಭವಿಸಿದೆ ಎನ್ನಲಾದ 74 ಅಸಹಜ ಸಾವಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಏನು ಮಾಡಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಧರ್ಮಸ್ಥಳದಲ್ಲಿ 2012ರಲ್ಲಿ ಸಾಮೂಹಿಕ ಅತ್ಯಾಚಾರಕ್ಕೀಡಾಗಿ ಕೊಲೆಯಾದ ವಿದ್ಯಾರ್ಥಿನಿ ಸೌಜನ್ಯಾ ತಾಯಿ ಕುಸುಮವತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಸಿಎಂ ಪೂಣಚ್ಚ ಅವರ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಿಚಾರಣೆ ಆರಂಭವಾಗುತ್ತಿದ್ದಂತೆ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಅವರು ಅರ್ಜಿದಾರರು ಪ್ರಸ್ತಾಪಿಸಿರುವ ಪ್ರಕರಣಗಳು 2002ರಲ್ಲಿ ನಡೆದಿವೆ. 74 ಪ್ರಕರಣಗಳಿಗೆ ಸಂಬಂಧಿಸಿ ದಂತೆ ತನಿಖೆ ನಡೆಸಲಾಗಿದ್ದು, ಯುಡಿಆರ್ ದಾಖಲಿಸಲಾಗಿದೆ. ಸದ್ಯ ರಚಿಸಲಾಗಿರುವ ವಿಶೇಷ ತನಿಖಾ ದಳಕ್ಕೆ ಪ್ರಕರಣಗಳನ್ನು ವರ್ಗಾಯಿಸುವಂಥದ್ದು ಏನೂ ಇಲ್ಲ. ಯುಡಿಆರ್‌ಗಳಿಗೆ ಸಂಬಂಧಿಸಿ ದಂತೆ ಯಾವುದಾದರೂ ದಾಖಲೆ ಸಲ್ಲಿಸಿದರೆ ಅಥವಾ ದೂರು ದಾಖಲಿಸಿದರೆ, ಅದನ್ನು ತನಿಖೆಗೆ ಒಳಪಡಿಸಲಾಗುವುದು. ಇದೊಂದು ಸಾಮಾನ್ಯ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಾಗಿದೆ. ಅರ್ಜಿದಾರೆಯ ಸಹೋದರರನ್ನು ಧರ್ಮಸ್ಥಳ ಸಾಮೂಹಿಕ ದಹನ ಪ್ರಕರಣದಲ್ಲಿ ತನಿಖೆಗೆ ಒಳಪಡಿಸಲಾಗಿತ್ತು. ಇದರ ಸಂಬಂಧಿತ ಎಲ್ಲಾ ದಾಖಲೆ ಗಳನ್ನು ನ್ಯಾಯಾಲಯದ ಮುಂದೆ ಇಡಲಾಗುವುದು. 6.5.2002ರಂದು ಸಿಕ್ಕಿದ್ದ ಬಾಲಕಿಯ ಶವಕ್ಕೆ ಸಂಬಂಧಿಸಿದಂತೆ ಯುಡಿಆರ್ ದಾಖಲಿಸಿ, ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಶವಸಂಸ್ಕಾರ ನಡೆಸಿರುವುದು, ಲುಕ್‌ಔಟ್ ನೋಟಿಸ್ ಜಾರಿ ಮಾಡಿರುವುದು, ಅಂತಿಮ ವರದಿ, ವೈದ್ಯರ ಅಭಿಪ್ರಾಯ ಎಲ್ಲವೂ ಇದೆ ಎಂದರು.

ಅರ್ಜಿದಾರರ ಪರ ವಕೀಲ ಎಸ್ ಬಾಲನ್ ಅವರು ಅಸಹಜವಾಗಿ ಸಾವನ್ನಪ್ಪಿದವರ ಪಟ್ಟಿಯನ್ನು ನ್ಯಾಯಾಲಯದ ಮುಂದೆ ಇಡಲಾಗಿದೆ. ಪ್ರಕ್ರಿಯೆ ಪಾಲಿಸದೇ ಶವಗಳ ಸಂಸ್ಕಾರ ಮಾಡಲಾಗಿದೆ. ಅಸಹಜವಾಗಿ ಸಾವನ್ನಪ್ಪಿದವರ 74 ಪ್ರಕರಣಗಳಲ್ಲಿ ಪಂಚನಾಮೆ ಪ್ರಕ್ರಿಯೆ ನಡೆಸಲಾಗಿಲ್ಲ. ಶವಗಳ ಮರಣೋತ್ತರ ಪರೀಕ್ಷೆ ನಡೆಸಿಲ್ಲ. ಪೊಲೀಸರು ಶವಗಳ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಪಂಚಾಯಿತಿಗೆ ಶಿಫಾರಸು ಮಾಡಿದ್ದಾರೆ. ಶವ ಸಂಸ್ಕಾರ ಮಾಡಿದ್ದಾರೆಯೇ, ಸುಟ್ಟಿದ್ದಾರೆಯೇ ಎಂಬುದರ ಮಾಹಿತಿ ಇಲ್ಲ. ಈ ಸಂಬಂಧ ಎಲ್ಲಾ ದಾಖಲೆಗಳನ್ನು ಸಂಗ್ರಹಿಸಲಾಗಿದೆ.

ಹಲವು ಪ್ರಕರಣಗಳಲ್ಲಿ ಮಹಿಳೆಯರು ಲಾಡ್ಜ್‌ನಲ್ಲಿ ಉಳಿದುಕೊಂಡು, ನಾಪತ್ತೆಯಾಗಿದ್ದಾರೆ. ಆದರೆ, ಈ ಪ್ರಕರಣದಲ್ಲಿ ತನಿಖೆ ನಡೆಸಲಾಗಿಲ್ಲ. ಶವಗಳನ್ನು ಸಂಸ್ಕಾರ ಮಾಡಲಾಗಿದೆ. ಆದರೆ, ಯಾವುದೇ ಎಫ್‌ಐಆರ್ ದಾಖಲಿಸಿ, ತನಿಖೆ ನಡೆದಿಲ್ಲ. 74 ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಬೇಕು ಎಂಬುದು ಕೋರಿಕೆಯಾಗಿದೆ ಎಂದರು.

ಎಲ್ಲರ ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು 74 ಪ್ರಕರಣಗಳಿಗೆ ಸಂಬಂಧಿಸಿದಂತೆ ನಡೆಸಿರುವ ತನಿಖಾ ವರದಿಯನ್ನು ಸಲ್ಲಿಸಬೇಕು ಎಂದು ನಿರ್ದೇಶಿಸಿ, ವಿಚಾರಣೆಯನ್ನು ಜುಲೈ 7ಕ್ಕೆ ಮುಂದೂಡಿತು.

**ಕಠಿಣ ಶ್ರಮಕ್ಕೆ ತಕ್ಕ ಬೆಲೆ ಸಿಕ್ಕೇ ಸಿಗುತ್ತದೆ : ಸಚಿವೆ ಲಕ್ಷ್ಮೀ ಹೆಬ್ಬಾಳಕರ್**

# ಗ್ರೇಸ್ ಐಎಎಸ್ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆದ ಯುಪಿಎಸ್‌ಸಿ ಸಾಧಕರಿಗೆ ಸಚಿವರಿಂದ ಸನ್ಮಾನ




**ಬೆಂಗಳೂರು, ಮಾ.18–** ಜೀವನದಲ್ಲಿ ಕಠಿಣ ಶ್ರಮ ವಹಿಸಿದರೆ ದೇವರು ಕರುಣೆ ತೋರುತ್ತಾನೆ. ಕಠಿಣ ಶ್ರಮಕ್ಕೆ ಬೆಲೆ ಸಿಕ್ಕೆ ಸಿಗುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಬೆಂಗಳೂರಿನ ಚಂದ್ರಾ ಲೇಔಟ್ ನಲ್ಲಿರುವ ಗ್ರೇಸ್ ಐಎಎಸ್ ಕೋಚಿಂಗ್ ಸೆಂಟರ್ ನಲ್ಲಿ 2025ನೇ ಸಾಲಿನ ಯುಪಿಎಸ್ಸಿಯ ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಸಚಿವರು, ಜೀವನದಲ್ಲಿ ಯಶಸ್ಸು ಸಾಧಿಸುವವರ ಹಿಂದೆ ಒಂದು ಕಥೆಯೇ ಇರುತ್ತದೆ. ಸಾಧನೆಯ ಹಿಂದಿನ ಪರಿಶ್ರಮ, ಸಾಧಕರಿಗಷ್ಟೇ ಗೊತ್ತಿರುತ್ತದೆ ಎಂದರು.

ಐಎಎಸ್, ಕೆಎಎಸ್ ಪರೀಕ್ಷೆ ಅಷ್ಟು ಸುಲಭ ಅಲ್ಲ. ಅತ್ಯಂತ ಕಠಿಣ ಪರೀಕ್ಷೆಯಲ್ಲಿ ಪಾಸ್ ಆಗಿರುವುದು ಖುಷಿಯ ವಿಚಾರ, ನೀವೆಲ್ಲರೂ ಯುವಪೀಳಿಗೆಗೆ ಆದರ್ಶ. ಅಭ್ಯರ್ಥಿಗಳ ಹಿಂದಿನ ಪರಿಶ್ರಮ ನಮಗೆ ಕಾಣುವುದಿಲ್ಲ. ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿರುವ ಕಿರಣ್ ಕಮತೆ, ಸತತ ಪ್ರಯತ್ನದ ಫಲವಾಗಿ ತಮ್ಮ ಕಡೇ ಪ್ರಯತ್ನದಲ್ಲಿ ಯಶಸ್ಸು ಕಂಡು ಐಎಎಸ್ ಹುದ್ದೆಗೆ ಆಯ್ಕೆಯಾಗಿದ್ದಾರೆ. ಕಠಿಣ ಪರಿಶ್ರಮ ಪಟ್ಟರೆ ದೇವರು ಕೂಡ ಕರುಣೆ ತೋರುತ್ತಾನೆ ಎಂಬುದಕ್ಕೆ ಇವರೇ ಸಾಕ್ಷಿ. ಗ್ರೇಸ್ ಐಎಎಸ್ ಕೋಚಿಂಗ್ ಸೆಂಟರ್ ಪರಿಶ್ರಮ ಕೂಡ ನಿಮ್ಮ ಯಶಸ್ಸಿನ ಹಿಂದಿದೆ. ಅದಕ್ಕಾಗಿ ನಾನು ಗ್ರೇಸ್ ಐಎಎಸ್ ತಂಡವನ್ನ ಅಭಿನಂದಿಸುತ್ತೇನೆ ಎಂದು ಸಚಿವೆ ಹೇಳಿದರು.

ಜನಪ್ರತಿ ನಿಧಿ ಗಳು ಹಾಗೂ ಅಧಿಕಾರಿಗಳು ಒಂದೇ ನಾಣ್ಯದ ಎರಡು ಮುಖಗಳು. ಸನ್ವಯತೆಯಿಂದ ಕೆಲಸ ಮಾಡಬೇಕು, ಅಧಿಕಾರಿಗಳು ಆಸಕ್ತಿ ವಹಿಸಿದರೆ ಸರ್ಕಾರದ ಸವಲತ್ತುಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಬಹುದು. ಸೂಕ್ಷ್ಮ ಮನಸ್ಸು ಇಟ್ಟುಕೊಂಡು ಕೆಲಸ ಮಾಡಬೇಕು. ನಿಮ್ಮ ಸೇವಾವಧಿಯಲ್ಲಿ ಹೃದಯದಿಂದ ಕೆಲಸ ಮಾಡಿ, ಸಾವಿರಾರು, ಲಕ್ಷಾಂತರ ಜನರಿಗೆ ಪ್ರೇರಣೆ ಆಗಿ ಕೆಲಸ ಮಾಡಬೇಕು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಿವಿ ಮಾತು ಹೇಳಿದರು.

ಸತತ ಪ್ರಯತ್ನವೇ ನನ್ನ ಯಶಸ್ಸಿನ ಗುಟ್ಟು. ರಾಜ ಕಾರಣಿಗಳಿಗೂ ಅಷ್ಟೇ, ಸತತ ಪರಿಶ್ರಮ ಅಗತ್ಯ. ನಾವು ಪ್ರತಿ ಐದು ವರ್ಷಕ್ಕೊಮ್ಮೆ ಜನರ ಮುಂದೆ ಪರೀಕ್ಷೆ ಎದುರಿಸುತ್ತೇವೆ. ಹಲವು ಚುನಾವಣೆಗಳಲ್ಲಿ ಸೋತ ನಂತರ ನಾನು ಸತತ ಪರಿಶ್ರಮದ ಫಲವಾಗಿ 2018ರಲ್ಲಿ 52 ಸಾವಿರ ಮತಗಳ ಅಂತರದಿಂದ ಗೆದ್ದೆ, 2023ರ ಚುನಾವಣೆಯಲ್ಲಿ 58 ಸಾವಿರ ಮತಗಳಿಂದ ಗೆದ್ದು ರಾಜ್ಯ ಸಚಿವ ಸಂಪುಟದಲ್ಲಿ ಏಕೈಕ ಮಹಿಳಾ ಸಚಿವೆಯಾಗಿರುವೆ. ಇದಕ್ಕೆ ನಾನು ಮಾಡಿದ ಮರಳಿ ಯತ್ನವೇ ಕಾರಣ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

# ಮಾ.30ಕ್ಕೆ ಜಿಬಿಎ ಪಾಲಿಕೆಗಳ ಚೊಚ್ಚಲ ಬಜೆಟ್




**ಬೆಂಗಳೂರು, ಮಾ.18:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರಪಾಲಿಕೆಗಳ ಚೊಚ್ಚಲ ಬಜೆಟ್ ಮಾ.30ಕ್ಕೆ ಮಂಡನೆಯಾಗುವ ಸಾಧ್ಯತೆಗಳಿವೆ. ಜಿಬಿಎ ರಚನೆಯಾದ ಬಳಿಕ ಮೊದಲ ಬಾರಿಗೆ ಅದರ ವ್ಯಾಪ್ತಿಯ ಐದು ನಗರಪಾಲಿಕೆಗಳು 2026–27ನೇ ಸಾಲಿನ ಬಜೆಟ್ ಮಂಡನೆಗೆ ಸಜ್ಜಾಗಿದ್ದು ಇದೇ ತಿಂಗಳ 30ರಂದು ಐದು ಪಾಲಿಕೆಗಳ ಬಜೆಟ್ ಮಂಡನೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಿಬಿಎಂಪಿ ವಿಸರ್ಜನೆಯಾದ ಬಳಿಕ, ಈಗಾಗಲೇ ಆರನೇ ಬಾರಿಗೆ ಜನಪ್ರತಿನಿಧಿಗಳಿಲ್ಲದೇ ಅಧಿಕಾರಿಗಳಿಂದಲೇ ಬಜೆಟ್ ಮಂಡನೆಯಾಗುತ್ತಿರುವುದು ವಿಶೇಷವಾಗಿದೆ.

ಈ ಬಾರಿ ಪ್ರತಿಯೊಂದು ನಗರಪಾಲಿಕೆಗಳು ತಮ್ಮ ವ್ಯಾಪ್ತಿಯ ಆದಾಯ-ವೆಚ್ಚ ಲೆಕ್ಕಚಾರ ಮಾಡಿ, ಸರ್ಕಾರದ ಅನುದಾನದ ಆಧಾರದ ಮೇಲೆ ಆಯವ್ಯಯ ರೂಪಿಸುತ್ತಿವೆ. ಹಿಂದಿನ ಬಾರಿ ಸುಮಾರು 19 ಸಾವಿರ ಕೋಟಿ ರೂ.ಗಳ ಬಜೆಟ್ ಮಂಡಿಸಲಾಗಿತ್ತು. ಆದರೆ ಈ ಬಾರಿ ಬಿಬಿಎಂಪಿಯನ್ನು ಐದು ನಗರ ಪಾಲಿಕೆಗಳಾಗಿ ವಿಭಜನೆ ಮಾಡಿರುವ ಹಿನ್ನೆಲೆಯಲ್ಲಿ ಬಜೆಟ್ 2,300 ಕೋಟಿಯಿಂದ 3,600 ಕೋಟಿಯೊಳಗೆ ಇರಬಹುದು ಎಂದು ಅಂದಾಜಿಸಲಾಗಿದೆ.

**ಪಾಲಿಕೆವಾರು ಅಂದಾಜು**

ಉತ್ತರ ನಗರಪಾಲಿಕೆ: 2800–2900 ಕೋಟಿ ರೂ, ದಕ್ಷಿಣ ನಗರಪಾಲಿಕೆ: 2700–2800 ಕೋಟಿ, ಪೂರ್ವ ನಗರಪಾಲಿಕೆ: 3500–3600 ಕೋಟಿ, ಕೇಂದ್ರ ನಗರಪಾಲಿಕೆ: 2750–2850 ಕೋಟಿ ಹಾಗೂ ಪಶ್ಚಿಮ ನಗರಪಾಲಿಕೆ: 2300–2400 ಕೋಟಿ ರೂ. ಅಂದಾಜು ವೆಚ್ಚಗಳಲ್ಲಿ ಬಜೆಟ್ ಮಂಡನೆ ಮಾಡಿಕೊಳ್ಳುವ ಸಾಧ್ಯತೆಗಳಿವೆ.

# ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ: ಮೊದಲ ದಿನ ಸುಸೂತ್ರ



**ಬೆಂಗಳೂರು, ಮಾ.18:** ವಿದ್ಯಾರ್ಥಿ ಜೀವನ ಪ್ರಮುಖ ಘಟ್ಟವೆಂದೇ ಬಿಂಬಿಸಲಾಗಿರುವ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮೊದಲ ದಿನವಾದ ಇಂದು ರಾಜ್ಯಾದ್ಯಂತ ಸುಸೂತ್ರವಾಗಿ ನಡೆಯಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 8,65,988 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ನಕಲು ತಡೆಗೆ ತೀವ್ರ ಕಟ್ಟೆಚ್ಚರ ವಹಿಸಲಾಗಿದ್ದು ಪರೀಕ್ಷಾ ಕೇಂದ್ರ ಸುತ್ತ ವ್ಯಾಪಕ ಭದ್ರತೆ ಕೈಗೊಳ್ಳಲಾಗಿದೆ.

ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.15 ರವರೆಗೆ ಪರೀಕ್ಷೆ ನಡೆಯಿತು. 7,75,979 ವಿದ್ಯಾರ್ಥಿಗಳು ಹೊಸದಾಗಿ ಪರೀಕ್ಷೆ ಬರೆಯುತ್ತಿದ್ದಾರೆ. 62,938 ವಿದ್ಯಾರ್ಥಿಗಳು ಪುನಾರವರ್ತಿತ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. 2,870 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಪರೀಕ್ಷೆ ನಡೆಯುವ ಎಲ್ಲಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.

ಸುಳ್ಳು ಸುದ್ಧಿ ಹರಡಿಸುವ ಸಾಮಾಜಿಕ ಜಾಲತಾಣದ ಮೇಲೆ ನಿಗಾವಹಿಸಲು ಪೊಲೀಸ್ ಇಲಾಖೆಯ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ. ಇಡೀ ಪರೀಕ್ಷಾ ವ್ಯವಸ್ಥೆ ಮೇಲೆ ನಿಗಾವಹಿಸಲು ವೆಬ್‌ಕಾಸ್ಟಿಂಗ್ ವ್ಯವಸ್ಥೆ, ಪ್ರತಿ ಜಿಲ್ಲೆಯಲ್ಲಿ ಡಿಸಿಗಳು, ಎಸಿಪಿಗಳು ನಿಗಾ ವಹಿಸುವಂತೆ ವ್ಯವಸ್ಥೆ ಮಾಡಲಾಗಿದೆ.

ಪ್ರಶ್ನೆ ಪತ್ರಿಕೆ ಖಜಾನೆಯಿಂದ ಪರೀಕ್ಷೆ ಕೇಂದ್ರಗಳಿಗೆ ರವಾನಿಯಾಗುವ ವೇಳೆ ಬಿಗಿಪೊಲೀಸ್ ಭದ್ರತೆ, ಪ್ರಶ್ನೆಪತ್ರಿಕೆ ರವಾನಿಸುವ ವಿಡೀಯೋ ಚಿತ್ರೀಕರಣಕ್ಕೆ ವ್ಯವಸ್ಥೆ ಮಾಡಲಾಗಿದ್ದು, ನಿಗದಿ ಮಾಡಿದ ಸಮಯಕ್ಕಿಂತ ಮೊದಲು ಪ್ರಶ್ನೆಪತ್ರಿಕೆ ಖಜಾನೆಯಿಂದ ತೆರೆಯುವಂತಿಲ್ಲ. ಅಂತಹ ಪ್ರಕರಣ ಕಂಡು ಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.

ಪ್ರಶ್ನೆ ಪತ್ರಿಕೆ ಜವಾಬ್ದಾರಿ ವಹಿಸಿದವರು ಅಕ್ರಮದಲ್ಲಿ ಭಾಗಿಯಾಗಿದ್ದರೆ ಕಾನೂನುಕ್ರಮ ಕೈಗೊಳ್ಳಲಾಗುವುದು ಎಂದು ಪರೀಕ್ಷೆ ಮಂಡಳಿ ಎಚ್ಚರಿಕೆ ನೀಡಿದೆ. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ, ಅಧಿಕಾರಿಗಳಿಗೆ ಸಂಪೂರ್ಣ ಫೋನ್ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದಲ್ಲಿ ವಾಚ್ ಸೇರಿ ಎಲೆಕ್ಟ್ರಾನಿಕ್ ಉಪಕರಣ ನಿಷೇಧಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಭದ್ರತೆ, ಜಿಲ್ಲೆಗಳಲ್ಲಿ ಎಸ್ ಪಿ, ಡಿಸಿಗಳ ನೇತೃತ್ವದಲ್ಲಿ ಭದ್ರತೆ ಕೈಗೊಳ್ಳಲಾಗಿದೆ. ಪ್ರತಿ ಕೇಂದ್ರದಲ್ಲಿ ಸಿಟ್ಟಿಂಗ್ ಸ್ಕ್ವಾಡ್, ಫ್ಲೆಯಿಂಗ್ ಸ್ಕ್ವಾಡ್‌ಗಳನ್ನು ನಿಯೋಜಿಸಲಾಗಿದೆ.

**ಕೇಂದ್ರಕ್ಕೆ ಒತ್ತಾಯಿಸಲು ರಾಜ್ಯದ ಸಂಸದರಿಗೆ ಡಾ. ಪುರುಷೋತ್ತಮ ಬಿಳಿಮಲೆ ಮನವಿ**

# ಕನ್ನಡ ಸೇರಿ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ರೈಲ್ವೆ ನೇಮಕಾತಿ ಪರೀಕ್ಷೆ



**ಬೆಂಗಳೂರು, ಮಾ.18:** ಭಾರತೀಯ ರೈಲ್ವೆ ಇಲಾಖೆಯ ವಿವಿಧ ಹುದ್ದೆಗಳ ನೇಮಕಾತಿ ಮತ್ತು ಪದೋನ್ನತಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡ ಸೇರಿ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ನಡೆಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ರಾಜ್ಯದ ಸಂಸದರಿಗೆ ಮನವಿ ಸಲ್ಲಿಸಿದ್ದಾರೆ.

ಈ ಕುರಿತಂತೆ ಪತ್ರ ಬರೆದಿರುವ ಬಿಳಿಮಲೆ ಅವರು "ಪ್ರಸ್ತುತ ರೈಲ್ವೆ ನೇಮಕಾತಿ ಹಾಗೂ ಪದೋನ್ನತಿ ಪರೀಕ್ಷೆಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದಿರುವುದರಿಂದ ಕನ್ನಡ ಭಾಷಾಭಿಮಾನಿಗಳಲ್ಲಿ ಹಾಗೂ ಅಭ್ಯರ್ಥಿಗಳಲ್ಲಿ ತೀವ್ರ ಅಸಮಾಧಾನವನ್ನು ಉಂಟು ಮಾಡಿದೆ. ರಾಜ್ಯ ಭಾಷೆಯಲ್ಲಿ ಪರೀಕ್ಷೆ ಬರೆಯುವ ಅವಕಾಶವು ಅಭ್ಯರ್ಥಿಗಳ ಮೂಲಭೂತ ಸಾಂವಿಧಾನಿಕ ಹಕ್ಕಾಗಿದ್ದು, ಇದು ಸಮಾನ ಅವಕಾಶಗಳ ಸಿದ್ಧಾಂತಕ್ಕೆ ಅನುಗುಣವಾಗಿದೆ" ಎಂದಿದ್ದಾರೆ.

ಇತ್ತೀಚೆಗೆ ರೈಲ್ವೆ ಇಲಾಖೆಯು ಕರ್ನಾಟಕದಲ್ಲಿ ನಡೆಸುತ್ತಿದ್ದ ಮುಂಬಡ್ತಿ ಪರೀಕ್ಷೆಗಳಲ್ಲಿ ಕನ್ನಡ ಭಾಷೆಗೆ ಅವಕಾಶ ದೊರಕದೇ ಇರುವ ಕುರಿತು ತೀವ್ರ ಪ್ರತಿಭಟನೆ ಬಂದ ಕಾರಣ ರೈಲ್ವೆ ಇಲಾಖೆಯು ಪರೀಕ್ಷೆಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಿರುವುದು ಕನ್ನಡಿಗರ ತಾತ್ಕಾಲಿಕ ಗೆಲುವಾದರೂ ಸಹ ಇದನ್ನು ಶಾಶ್ವತ ಪರಿಹಾರ ಎಂದು ಭಾವಿಸಲು ಬರುವುದಿಲ್ಲ ಎಂದಿರುವ ಬಿಳಿಮಲೆ, ರಾಜ್ಯದ ಎಲ್ಲ ಸಂಸದರು ಒಗ್ಗಟ್ಟಾಗಿ ಸಂಸತ್ತಿನಲ್ಲಿ ಈ ವಿಷಯವನ್ನು ಕೇಂದ್ರ ಸರ್ಕಾರ ಹಾಗೂ ಸಂಬಂಧಿತ ಸಚಿವಾಲಯದ ಗಮನಕ್ಕೆ ತಂದು ಕ್ರಮಕ್ಕೆ ಆಗ್ರಹಿಸಬೇಕು ಎಂದಿದ್ದಾರೆ.

ರೈಲ್ವೆ ನೇಮಕಾತಿ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲಿಯೂ ನಡೆಸುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲ ಸಂಸದರು ಒತ್ತಾಯಿಸಬೇಕೆಂದಿರುವ ಬಿಳಿಮಲೆ, ಕನ್ನಡಿಗರ ಭಾಷಾ ಹಕ್ಕುಗಳ ದೃಷ್ಟಿಯಿಂದ ಈ ಕ್ರಮ ಅತ್ಯಂತ ಮಹತ್ವದ್ದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

# ಹೊಸ ಒಳಮೀಸಲಾತಿಗೆ ಬಲಗೈ ಸಮುದಾಯ ವಿರೋಧ: ಮಾ.24ರಂದು ಬೆಂಗಳೂರು ಚಲೋ ಚಳವಳಿ



**ಕಲಬುರಗಿ, ಮಾ.18–** ರಾಜ್ಯ ಸರ್ಕಾರದ ಹೊಸ ಒಳಮೀಸಲಾತಿಯನ್ನು ಹಿಂಪಡೆದು ಹಳೆಯ ರೋಸ್ಟರ್ ಬಿಂದುವಿನಂತೆ ನೇಮಕಾತಿಯನ್ನು ಕೈಗೊಳ್ಳುವಂತೆ ಒತ್ತಾಯಿಸಿ ಇದೇ ಮಾರ್ಚ್ 24ರಂದು ಬೆಂಗಳೂರಿನ ಫ್ರೀಡಮ್ ಪಾರ್ಕ್‌ನಲ್ಲಿ ಬಲಗೈ ಸಮುದಾಯದ ಸುಮಾರು 63 ಜಾತಿಗಳ ಐದು ಲಕ್ಷ ಜನರು ಸೇರಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಅಧ್ಯಕ್ಷ ತಿಪ್ಪಣ್ಣ ಒಡೆಯರಾಜ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರಿಂಕೋರ್ಟ್ ಕಳೆದ 2024ರ ಆಗಸ್ಟ್ 1ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರ ಏಕಸದಸ್ಯ ಸಮಿತಿ ರಚಿಸಿದ್ದು, ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿಯ ಪ್ರಕಾರ ಅತೀ ಸೂಕ್ಷ್ಮ ಮತ್ತು ಸೂಕ್ಷ್ಮ ಜಾತಿಯ 59 ಜಾತಿಗಳು ಗುರ್ತಿಸಿ ಎ ಪ್ರವರ್ಗಕ್ಕೆ ಮತ್ತು ಎಡ ಸಮುದಾಯದ ಸಂಬಂಧಿಸಿದ ಜಾತಿಗಳನ್ನು ಬಿ ಗುಂಪಿಗೆ ಬಲಗೈಗೆ ಸಂಬಂಧಿಸಿದ ಜಾತಿಗಳನ್ನು ಸಿ ಗುಂಪಿಗೆ ಮತ್ತು ಭೋವಿ, ಬಂಜಾರಾ, ಕೊರಚ ಮತ್ತು ಕೊರಮ ಸಮುದಾಯದ ಸಂಬಂಧಿಸಿದ ಜಾತಿಗಳಿಗೆ ಬಿ ಹಾಗೂ ಆದಿ ಕರ್ನಾಟಕ ಆದಿ ದ್ರಾವಿಡ್ ಮತ್ತು ಆದಿ ಆಂಧ್ರ, ಎಂಬ ಜಾತಿ ಪ್ರಮಾಣ ಪತ್ರವನ್ನು ಪಡೆದಿರುವವರಿಗೆ ಈ ಗುಂಪಿಗೆ ಸೇರಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಪುಟದಲ್ಲಿ ಕೂಲಂಕಷವಾಗಿ ಚರ್ಚಿಸಿ 5 ಗುಂಪುಗಳನ್ನು ಬೇರ್ಪಡಿಸಿ ಎಬಿ.ಸಿ. ಎಂದು ಮೂರು ಗುಂಪುಗಳಾಗಿ ವರ್ಗೀಕರಣ ಮಾಡಿ ಸಂಪೂಟದಲ್ಲಿ ತೀರ್ಮಾನ ತೆಗೆದುಕೊಂಡು ಚಳಿಗಾಲದ ಅಧಿವೇಶನದಲ್ಲಿ ಪ್ರವರ್ಗ ಎಬಿಸಿ 6+6+5 ರಂತೆ ವರ್ಗೀಕರಣ ಮಾಡಿ ಸಚಿವ ಸಂಪುಟದಲ್ಲಿ ಮಂಡನೆ ಮಾಡಿ ಕಾಯ್ದೆಯನ್ನು ರಾಜ್ಯಪಾಲರ ಅನುಮೋದನೆ ಪಡೆದು ಕಾನೂನು ಮಾಡಲು ಸರ್ಕಾರ ಸಿದ್ದತೆಯಲ್ಲಿರುವಾಗ ವಿಳಂಬ ನೀತಿಯನ್ನು ಅನುಸರಿಸಿರುವದನ್ನು ನಿರುದ್ಯೋಗಿ ವಿದ್ಯಾರ್ಥಿಗಳು ಬೃಹತ್ ಮಟ್ಟದಲ್ಲಿ ನೇಮಕಾತಿಯನ್ನು ಮಾಡಿಕೊಳ್ಳುವಂತೆ 2,85,000 ಹುದ್ದೆಗಳನ್ನು ಹಾಗೇ ಖಾಲಿ ಇರಿಸಿ ಸುಮಾರು ವರ್ಷಗಳು ಕಳೆದರೂ ಕೂಡಾ ನೇಮಕಾತಿ ಮಾಡಿಕೊಳ್ಳದೇ ಇರುವುದರಿಂದ ವಯೋಮಿತಿ ಮೀರಿದ ಮತ್ತು ಕಡುಬಡವ ನಿರುದ್ಯೋಗಿ ವಿದ್ಯಾರ್ಥಿಗಳು ಧಾರವಾಡದಲ್ಲಿ ಬೃಹತ್ ಪ್ರತಿಭಟನೆಯನ್ನು ಮಾಡಿದರು ಎಂದರು.

ಪ್ರಯುಕ್ತ ಕರ್ನಾಟಕ ರಾಜ್ಯ ಸರ್ಕಾರವು ಸಾವಿರಾರು ನಿರುದ್ಯೋಗಿಗಳು ಹೋರಾಟ ಮಾಡಿರುವದನ್ನು ಸರ್ಕಾರ ಎಚ್ಚರಿಸಿ 2,85,000 ಹುದ್ದೆಗಳಲ್ಲಿ ತಕ್ಷಣವೇ 56,432 ಹುದ್ದೆಗಳನ್ನು ಒಂದು ತಿಂಗಳ ಒಳಗಡೆ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು ಎಂದು ತೀರ್ಮಾನ ತೆಗೆದುಕೊಂಡಿತು. ತೀರ್ಮಾನವನ್ನು ಅರಿತ ಎರಡು ಸಮುದಾಯದ ಮುಖಂಡರುಗಳು, ಶಾಸಕರು, ಸಚಿವರು. ಹೋರಾಟಕ್ಕೆ ಇಳಿದು ಸರ್ಕಾರದ ಮತ್ತು ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರಿ ಒಳಮಿಸಲಾತಿಯ ಜಾರಿ ಮಾಡುವಂತೆ ಮತ್ತು 56,432 ಹುದ್ದೆಗಳನ್ನು ಉಚ್ಚ ನ್ಯಾಯಾಲಯದ ಮದ್ಯಾಂತರ ಆದೇಶದಂತೆ ಪ್ರತಿಶತ 56ರನ್ನು ಮೀಸಲಾತಿ ಮೀರದಂತೆ ನೀಡಿರುವ ಆದೇಶದನ್ವಯ 56,432 ಹುದ್ದೆಗಳನ್ನು ಉಚ್ಚ ನ್ಯಾಯಾಲಯದಲ್ಲಿ ಇರುವುದರಿಂದ ಮತ್ತು ನ್ಯಾಯಾಲಯದ ಮದ್ಯಾಂತರ ಆದೇಶದಂತೆ ಪ್ರತಿಶತ 5 ರಂತೆ ಮೀಸಲಾತಿಯನ್ನು ಅಳವಡಿಸಿ ನೇಮಕಾತಿ ಮಾಡಿಕೊಳ್ಳಲು ಉಚ್ಚ, ನ್ಯಾಯಾಲಯದ ಆದೇಶದನ್ವಯ ಹಳೆಯ ರೋಸ್ಟರ್ ಬಿಂದುವಿನಂತೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಮುಂದೆ ಬಂದಿದೆ ಎಂದು ಅವರು ತಿಳಿಸಿದರು.

ಅದನ್ನು ವಿರೋಧಿಸಿ ಎಡ ಸಮುದಾಯದ ಎಲ್ಲರು ತೀವ್ರವಾದ ಒತ್ತಡ ಹೇರಿ ಒಳಮಿಸಲಾತಿಯಿಂದಲೇ ಹಳೆಯ ನಿಯಮದಿಂದ ರೋಸ್ಟರ್ ಬಿಂದುವನ್ನು ತಿದ್ದುಪಡೆ ಮಾಡಿ ಮೀಸಲಾತಿ ಅಳವಡಿಸಿ ನೇಮಕಾತಿ ಮಾಡಿಕೊಳ್ಳುವಂತೆ ಸರ್ಕಾರದ ಗಮನ ಸೆಳೆದಾಗ ಬರುವ ಮಾ.27ರಂದು ವಿಶೇಷ ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಳ್ಳಲಾಗುವ ಕುರಿತು ಸರ್ಕಾರ ತಿಳಿಸಿದೆ.

ಆದ್ದರಿಂದ ಈಗಿರುವ ರೋಸ್ಟರ್ ಬಿಂದುಗಳ ಬಿ ಮತ್ತು ಸಿ ಗುಂಪುಗಳಿಗೆ ಧಾರವಾಡ ವಿಶ್ವವಿದ್ಯಾಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸಹಕಾರ ಇಲಾಖೆಯಲ್ಲಿ ಈಗಾಗಲೇ ನೇಮಕಾತಿ ಕುರಿತು ರೋಸ್ಟರ್ ಬಿಂದುವನ್ನು ಅಳವಡಿಸಿ ನೇಮಕಾತಿಯ ನೋಟಿಫಿಕೇಶನ್ ಹೊರಡಿಸಿದ್ದು ಸರಿಯಲ್ಲ. ಆ ಎಲ್ಲ ಹುದ್ದೆಗಳನ್ನು ಪ್ರವರ್ಗ ಎ ಗುಂಪಿನ ಸಮುದಾಯದವರೆ ಆಯ್ಕೆಯೇ ಆಗುತ್ತಿರುವುದರಿಂದ ರೊಚ್ಚಿಗೆದ್ದ ಸಿ ಮತ್ತು ಬಿ ಗುಂಪಿನವರು ಕರ್ನಾಟಕ ರಾಜ್ಯಾದ್ಯಾಂತ ಹೋರಾಟ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.

# ಬೆಳಗಾವಿ ಪಾಲಿಕೆಗೆ ಬಿಜೆಪಿಯ ಪ್ರೀತಿ ಕಾಮ್ಕರ್ ಮೇಯರ್, ಹನುಮಂತ ಕೊಂಗಾಲಿ ಉಪಮೇಯರ್



ಬೆಳಗಾವಿ, ಮಾ.18: ಬೆಳಗಾವಿ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಬಿಜೆಪಿಯ ಪ್ರೀತಿ ಕಾಮ್ಕರ್, ಉಪ ಮೇಯರ್ ಆಗಿ ಹನುಮಂತ ಕೊಂಗಾಲಿ ಆಯ್ಕೆಯಾದರು. ಈ ಬಾರಿ ಎರಡೂ ಸ್ಥಾನಗಳು ಕನ್ನಡಿಗರ ಪಾಲಾಗಿರುವುದು ವಿಶೇಷ.ಕಳೆದ ಮೂರು ಅವಧಿಯಲ್ಲಿ ಒಂದು ಸ್ಥಾನ ಮರಾಠರಿಗೆ, ಇನ್ನೊಂದು ಸ್ಥಾನ ಕನ್ನಡಿಗರಿಗೆ ನೀಡಲಾಗಿತ್ತು. ಮೇಯರ್ ಸ್ಥಾನ ಸಾಮಾನ್ಯ ಮಹಿಳೆ ಹಾಗೂ ಉಪಮೇಯರ್ ಸ್ಥಾನ ಸಾಮಾನ್ಯಕ್ಕೆ ಮೀಸಲಾಗಿತ್ತು.ಪಾಲಿಕೆಯ ಪರಿಷತ್ ಸಭಾಂಗಣದಲ್ಲಿ ಬುಧವಾರ ಮೇಯರ್, ಉಪ ಮೇಯರ್ ಆಯ್ಕೆ ಪ್ರಕ್ರಿಯೆ ನಿಗದಿಪಡಿಸಲಾಗಿತ್ತು.

21ನೇ ವಾರ್ಡಿನ ಬಿಜೆಪಿ ಸದಸ್ಯೆ ಪ್ರೀತಿ ಕಾಮಕರ ಹಾಗೂ ಕಾಂಗ್ರೆಸ್ ಬೆಂಬಲಿತ ಸ್ವತಂತ್ರ ಸದಸ್ಯೆ 53ನೇ ವಾರ್ಡಿನ ಖುರ್ಷಿದಾ ದಾದಾಪೀರ್ ಮುಲ್ಲಾ ನಾಮಪತ್ರ ಸಲ್ಲಿಸಿದರು.65 ಸದಸ್ಯರ ಪೈಕಿ 59 ಸದಸ್ಯರು ಹಾಜರಿದ್ದು, 6 ಮಂದಿ ಗೈರಾಗಿದ್ದರು. ಪ್ರೀತಿ ಪರವಾಗಿ 39 ಹಾಗೂ ವಿರೋಧವಾಗಿ 18 ಮತಗಳು ಬಂದವು. ಖುರ್ಷಿದಾ ಪರವಾಗಿ 29 ಹಾಗೂ ವಿರೋಧವಾಗಿ 39 ಮತಗಳು ಬಂದವು. 10 ಮತಗಳ ಅಂತರದಿಂದ ಪ್ರೀತಿ ಮೇಯರ್ ಆಗಿ ಚುನಾಯಿತರಾದರು ಎಂದು ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ. ಘೋಷಿಸಿದರು.

ನಂತರ ಉಪಮೇಯರ್ ಸ್ಥಾನಕ್ಕೆ 46ನೇ ವಾರ್ಡಿನ ಬಿಜೆಪಿ ಸದಸ್ಯ ಹಣಮಂತ ಕೊಂಗಾಲಿ ಹಾಗೂ 12ನೇ ವಾರ್ಡಿನ ಕಾಂಗ್ರೆಸ್ ಸದಸ್ಯ ಮೋದಿನಸಾಬ್ ಮತವಾಲೆ ಉಮೇದುವಾರಿಕೆ ಸಲ್ಲಿಸಿದರು. ಕೊಂಗಾಲಿ ಪರವಾಗಿ 39, ವಿರೋಧವಾಗಿ 20 ಜನ ಕೈ ಎತ್ತಿದರು. ಮೋದಿನಸಾಬ್ ಪರವಾಗಿ 20 ಹಾಗೂ ವಿರೋಧವಾಗಿ 39 ಜನ ಕೈ ಎತ್ತಿದರು. ಹಣಮಂತ 19 ಮತಗಳ ಅಂತರದಿಂದ ಉಪಮೇಯರ್ ಆಗಿ ಆಯ್ಕೆಯಾದರು. ಮೇಯರ್ ಸ್ಥಾನದ ಮತದಾನ ಸಂದರ್ಭದಲ್ಲಿ ಇಬ್ಬರು ತಟಸ್ಥವಾಗಿ ಉಳಿದರು. ಉಪಮೇಯರ್‌ಗೆ ಎಲ್ಲರೂ ಮತ ಚಲಾಯಿಸಿದರು.ಅಧಿಕೃತವಾಗಿ ಮೇಯರ್, ಉಪಮೇಯರ್ ಘೋಷಣೆ ಆಗುತ್ತಿದ್ದಂತೆ, ಬಿಜೆಪಿಯ ಎಲ್ಲ ಸದಸ್ಯರು ಟೇಬಲ್ ಕುಟ್ಟಿ ಬೆಂಬಲಿಸಿದರು. ಭಾರತ್ ಮಾತಾ ಕಿ ಜೈ, ವಂದೇ ಮಾತರಂ ಎಂದು ಘೋಷಣೆ ಕೂಗಿದರು. ಶಾಸಕ ಅಭಯ ಪಾಟೀಲ, ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ, ಮಾಜಿ ಶಾಸಕ ಅನಿಲ ಬೆನಕೆ ಸೇರಿ ಮತ್ತಿತರು ಈ ವೇಳೆ ಹಾಜರಿದ್ದರು.

ಬಳಿಕ ಮಾಧ್ಯಮಗಳ ಜೊತೆ, ನೂತನ ಮೇಯರ್ ಪ್ರೀತಿ ಕಾಮಕರ್ "ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ನೇಕಾರ ಸಮುದಾಯಕ್ಕೆ ಮೇಯರ್ ಸ್ಥಾನ ಸಿಕ್ಕಿರುವುದಕ್ಕೆ ತುಂಬಾ ಸಂತೋಷ ಮತ್ತು ಹೆಮ್ಮೆ ಆಗುತ್ತಿದೆ. ನಾನು ಬಡ ನೇಕಾರ ಕುಟುಂಬದ ಮಗಳು. ಕೊಟ್ಟ ಮಾತಿನಂತೆ ನನ್ನನ್ನು ಮೇಯರ್ ಮಾಡಿರುವ ಶಾಸಕ ಅಭಯ್ ಪಾಟೀಲರಿಗೆ ಧನ್ಯವಾದ ಸಲ್ಲಿಸುತ್ತೇನೆ. 58 ವಾರ್ಡ್ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬೆಳಗಾವಿ ನಗರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಸ್ವಚ್ಛ ಬೆಳಗಾವಿ ನನ್ನ ಗುರಿ" ಎಂದರು.

ಉಪಮೇಯರ್ ಹನುಮಂತ ಕೊಂಗಾಲಿ ಮಾತನಾಡಿ, "ಬೆಳಗಾವಿ ನಗರದ ಸ್ವಚ್ಛತೆಗೆ ಹೆಚ್ಚು ಆದ್ಯತೆ ಕೊಡುತ್ತೇವೆ. 24/7 ಕುಡಿಯುವ ನೀರಿನ ಕಾಮಗಾರಿ ಬೇಗನೇ ಪೂರ್ಣಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಜೈಪುರ, ಇಂದೋರ್ ನಗರಗಳಿಗೆ ನಾವು ಸ್ಟಡಿ ಟೂರ್ ಹೋಗಿದ್ದೆವು. ಅಲ್ಲಿನ ಯೋಜನೆಗಳನ್ನು ಬೆಳಗಾವಿಯಲ್ಲಿ ಅನುಷ್ಠಾನಕ್ಕೆ ತರಲು ಶ್ರಮಿಸಲಾಗುವುದು" ಎಂದರು.

**ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವೀಡಿಯೋದ ಪೆನ್‌ಡ್ರೈವ್ ಹಂಚಿಕೆ ಪ್ರಕರಣ**

# 39 ಆರೋಪಿಗಳ ವಿರುದ್ಧ ಎಸ್‌ಐಟಿ ಚಾರ್ಜ್‌ಶೀಟ್, 17 ಪೆನ್‌ಡ್ರೈವ್ ಖರೀದಿ ತನಿಖೆಯಿಂದ ಬಯಲು

**ಹಾಸನ, ಮಾ.18:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣದಲ್ಲಿ ಪೆನ್‌ಡ್ರೈವ್ ಹಂಚಿಕೆ ಸಂಬಂಧ ಎಸ್‌ಐಟಿ ದೋಷಾರೋಪಣ ಪಟ್ಟಿ ಸಲ್ಲಿಸಿದೆ. ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಹಾಸನ ಸಿವಿಲ್ ಕೋರ್ಟ್‌ಗೆ ಎಸ್‌ಐಟಿ 13,712 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ. ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದೆ. ಅಶ್ಲೀಲ ವಿಡಿಯೋ ಹಂಚಲು ಆರೋಪಿಗಳು 70 ಪೆನ್ ಡ್ರೈವ್ ಖರೀದಿಸಿದ್ದರು. ಹಾಸನದಲ್ಲೇ 70 ಪೆನ್‌ಡ್ರೈವ್ ಖರೀದಿ ಮಾಡಿರುವುದು ತನಿಖೆಯಿಂದ ಬಯಲಾಗಿದೆ.

ಪ್ರಕರಣದಲ್ಲಿ 52 ಮಂದಿ ಹೆಸರು ಉಲ್ಲೇಖ ಮಾಡಲಾಗಿತ್ತು. 52 ಮಂದಿಯಲ್ಲಿ 39 ಮಂದಿ ಆರೋಪ ಸಾಬೀತಾಗಿದೆ. ವಕೀಲ ಪೂರ್ಣಚಂದ್ರ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿತ್ತು.

ತಾಂತ್ರಿಕ ವರದಿ, ಎಫ್‌ಎಸ್‌ಎಲ್ ಸಾಕ್ಷಿಗಳ ವರದಿ ಆಧರಿಸಿ ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಲಾಗಿದೆ ಎಂದು ವಕೀಲ ಪೂರ್ಣಚಂದ್ರ ಈಟಿವಿ ಭಾರತಕ್ಕೆ ದೂರವಾಣಿಯ ಮೂಲಕ ತಿಳಿಸಿದ್ದಾರೆ.ಎ1 ನವೀನ್, ಎ2 ಪ್ರಜ್ವಲ್ ಕಾರು ಚಾಲಕನಾಗಿದ್ದ ಕಾರ್ತಿಕ್.ಎನ್, ಎ3 ಚೇತನ್.ಬಿ.ಸಿ., ಎ4 ಚೇತನ್.ವೈ.ಎಸ್, ಎ5 ಲಿಖಿತ್‌ಗೌಡ, ಎ6 ದೇವರಾಜೇಗೌಡ, ಎ7 ಗಿರೀಶ್.ಎಸ್, ಎ8 ಯೋಗೇಶ್. ವೈ.ಡಿ., ಎ9 ನಿಶಾಂತ್, ಎ10 ಹರೀಶ್.ಎಸ್.ಎನ್, ಎ11 ಸುಮಂತ್, ಎ12 ಕೃಷ್ಣೇಗೌಡ, ಎ13 ಕಿರಣ್. ಎಸ್.ಕೆ, ಎ14 ಶರತ್.ಎಂ.ಕೆ., ಎ15 ತೇಜಸ್.ಡಿ.ಎನ್, ಎ16 ಗಗನ್ ಕುಮಾರ್, ಎ17 ರೇವಂತ್, ಎ18 ಶಿವಪ್ರಸಾದ್, ಎ19 ನಾಗೇಂದ್ರ ಜೈನ್, ಎ20 ವಸಂತ್‌ಕುಮಾರ್, ಎ21 ಸಮೀರ್ ಅಹ್ಮದ್, ಎ22 ಬಾಲಸುಬ್ರಹ್ಮಣ್ಯ, ಎ23 ಚಿರಂತ್, ಎ24 ದೇವರಾಜ್.ಡಿ.ಹೆಚ್, ಎ25 ಜಯಸೂರ್ಯ, ಎ26 ಚಂದ್ರ ಶೇಖರ್.ಬಿ.ಕೆ., ಎ27 ಕುಮಾರ್, ಎ28 ದಿನೇಶ್.ಕೆ.ಕೆ., ಎ29 ನವೀನ್ ಕುಮಾರ್.ಎನ್.ವಿ., ಎ30 ಪ್ರಶಾಂತ್. ಬಿ.ಎಸ್., ಎ31 ಅನಿಲ್.ಹೆಚ್.ವಿ., ಎ32 ಹರ್ಷವರ್ಧನ್.ಹೆಚ್.ಎಂ.,



ಎ33 ಅಕ್ಷಯ್‌ಕುಮಾರ್, ಎ34 ಪ್ರವೀಣ್‌ಕುಮಾರ್, ಎ35 ಹರೀಶ್. ಎನ್.ಸಿ., ಎ36 ಶಶಾಂಕ್.ಹೆಚ್. ಎಂ., ಎ37 ಭರತ್, ಎ38 ಚೇತನ್ ಕುಮಾರ್, ಎ39 ಸೋಮ ಶೇಖರ್. ಕೆ.ಕೆ. ಮೇಲೆ ದೋಷಾ ರೋಪಣೆ ಪಟ್ಟಿ ಸಲ್ಲಿಕೆ ಮಾಡಲಾಗಿದೆ. ಮತ್ತೊಂದೆಡೆ, ಮನೆ ಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಜೀವ ಇರುವವರೆಗೂ ಶಿಕ್ಷೆಗೆ ಗುರಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಡಿಎನ್‌ಎ ಮತ್ತು ಡಿಜಿಟಲ್ ಸಾಕ್ಷಿಗಳ ರೆಕಾರ್ಡಿಂಗ್ ಕೋರಿ ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ವಿಶೇಷ ತನಿಖಾ ದಳಕ್ಕೆ ಹೈಕೋರ್ಟ್ ಕಳೆದ ಜನವರಿಯಲ್ಲಿ ಸೂಚಿಸಿತ್ತು.



ಚಿಕ್ಕಮಗಳೂರಿನಲ್ಲಿ ಬುಧವಾರ ಕಂಡುಬಂದ ರಂಜಾನ್ ಹಬ್ಬದ ಖರೀದಿ ಭರಾಟೆ.

# ಎಸ್ಸೆಸ್ಸೆಲ್ಸಿ: ಶಿವಮೊಗ್ಗ ಜಿಲ್ಲೆಯ 79 ಕೇಂದ್ರಗಳಲ್ಲಿ ಪರೀಕ್ಷೆ ಬರೆದ 23,262 ವಿದ್ಯಾರ್ಥಿಗಳು



**ಶಿವಮೊಗ್ಗ, ಮಾ.18:** ಜಿಲ್ಲೆಯಲ್ಲಿ ಒಟ್ಟು 79 ಪರೀಕ್ಷಾ ಕೇಂದ್ರಗಳಿದ್ದು, 23,262 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗಿಯಾಗಿದ್ದಾರೆ. ಭದ್ರಾವತಿ–15, ಹೊಸನಗರ–7, ಸಾಗರ–9, ಶಿಕಾರಿಪುರ–11, ಶಿವಮೊಗ್ಗ–20, ಸೊರಬ–10 ಮತ್ತು ತೀರ್ಥಹಳ್ಳಿ–7 ಪರೀಕ್ಷಾ ಕೇಂದ್ರಗಳಿವೆ. ಇಂದು ಬೆಳಗ್ಗೆ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಹೋಗುವ ಮುನ್ನ ತಮ್ಮ ಹಾಲ್ ಟಿಕೆಟ್ ಸಹಿತ ಪರೀಕ್ಷಾ ಕೊಠಡಿ ಹುಡುಕಿಕೊಂಡು ಹೋಗುತ್ತಿದ್ದ ದೃಶ್ಯ ಕಂಡುಬಂದಿತು. ವಿದ್ಯಾರ್ಥಿಗಳ ಜೊತೆ ಆಗಮಿಸಿದ್ದ ಪೋಷಕರು ಧೈರ್ಯ ತುಂಬಿದ್ದಾರೆ.ರೆಗ್ಯುಲರ್ ಫ್ರೆಶ್, ರೆಗ್ಯುಲರ್ ರಿಪೀಟರ್, ರೆಗ್ಯುಲರ್ ಪ್ರೈವೇಟ್, ಪ್ರೈವೇಟ್ ರಿಪೀಟರ್ ಈ 4 ವಿಧದ ವಿದ್ಯಾರ್ಥಿ0ಗಳು ಪರೀಕ್ಷೆ ಬರೆಯಲಿದ್ದಾರೆ. ಜಿಲ್ಲಾ ವ್ಯಾಪ್ತಿಯಲ್ಲಿ ಪರೀಕ್ಷಾ ಕಾರ್ಯನಿರ್ವಹಿಸುವ ಎಲ್ಲಾ ಕಾರ್ಯ ನಿರತರು ಪರೀಕ್ಷೆಗಳನ್ನು ಸಕಲ ಸಿದ್ಧತೆಗಳೊಂದಿಗೆ ಪಾರದರ್ಶಕತೆಯಿಂದ ನಡೆಸಲು ಸಭೆ ನಡೆಸಿ ಸೂಚನೆ ನೀಡಲಾಗಿದೆ.

ಪರೀಕ್ಷಾ ಅವ್ಯವಹಾರವನ್ನು ತಡೆಗಟ್ಟಲು ಜಿಲ್ಲಾ ಮಟ್ಟದಲ್ಲಿ 3 ತಂಡಗಳನ್ನು ರಚನೆ ಮಾಡಲಾಗಿದೆ. ಡಯಟ್‌ನಿಂದ ಜಾಗೃತದಳ ನೇಮಕ ಮಾಡಲಾಗಿದೆ. ಪ್ರತಿಯೊಂದು ಕೇಂದ್ರಕ್ಕೂ ಇತರೆ ಇಲಾಖೆಗಳಿಂದ ವೀಕ್ಷಕರನ್ನು ನಿಯೋಜಿಸಲಾಗಿದೆ. ಪರೀಕ್ಷೆಯ ಸುಗಮ ನಿರ್ವಹಣೆಗಾಗಿ 79 ಪರೀಕ್ಷಾ ಕೇಂದ್ರಗಳಿಗೆ ಮುಖ್ಯ ಅಧೀಕ್ಷಕರು, ನಿಗದಿಪಡಿಸಿದ ಕೇಂದ್ರಗಳಿಗೆ ಉಪ ಮುಖ್ಯ ಅಧೀಕ್ಷಕರು, ಕಸ್ಟೋಡಿಯನ್, ಮಾರ್ಗಾಧಿಕಾರಿಗಳು ಹಾಗೂ ಎಲ್ಲಾ ಕೇಂದ್ರಗಳಿಗೂ ಸ್ಥಾನಿಕ ಜಾಗೃತ ದಳದ ಅಧಿಕಾರಿಗಳನ್ನಾಗಿ ಗ್ರೂಪ್ "ಬಿ" ಅಧಿಕಾರಿಗಳನ್ನು ನಿಯೋಜಿಸಲಾಗಿದೆ.: ಜಿಲ್ಲಾ ಮಟ್ಟದಲ್ಲಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಲು ವಿಚಕ್ಷಣ ಜಾಗೃತ ದಳಗಳನ್ನು ರಚಿಸಿದ್ದು, ಪರೀಕ್ಷಾ ಕೇಂದ್ರಗಳಿಗೆ ಸಮಯಕ್ಕೆ ಸರಿಯಾಗಿ ಭೇಟಿನೀಡಿ ಅಕ್ರಮಗಳನ್ನು ತಡೆಗಟ್ಟಿ ನಿಯಮಾನುಸಾರ ಪರೀಕ್ಷೆ ನಡೆಯುತ್ತಿರುವುದನ್ನು ಗಮನಿಸಲು ಸೂಚಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಒಬ್ಬ ಮೊಬೈಲ್ ಸ್ವಾಧೀನಾಧಿಕಾರಿಯನ್ನು ನೇಮಿಸಲಾಗಿದ್ದು, ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿ ಮೊಬೈಲ್ ತೆಗೆದುಕೊಂಡು ಕೇಂದ್ರದೊಳಗೆ ಪ್ರವೇಶಿಸದಂತೆ ನಿರ್ಬಂಧಿಸಲು ಸೂಚಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಘೋಷಿಸಲಾಗಿದೆ.:

ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಮತ್ತು ಸಮೀಪದಲ್ಲಿರುವ ಜೆರಾಕ್ಸ್ ಮತ್ತು ಕಂಪ್ಯೂಟರ್/ ಸೈಬರ್ ಅಂಗಡಿಗಳನ್ನು ಮುಚ್ಚುವಂತೆ ಆದೇಶಿಸಲಾಗಿದೆ. ಪರೀಕ್ಷಾ ಕಾರ್ಯಗಳಿಗೆ ಅಗತ್ಯವಿರುವ ವಾಹನಗಳ ಸೌಕರ್ಯಗಳನ್ನು ಒದಗಿಸಲು ಆರ್.ಟಿ.ಓ. ಅವರಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಪೊಲೀಸ್ ಭದ್ರತೆಯನ್ನು ಒದಗಿಸಲು ಕ್ರಮವಹಿಸಲಾಗಿದೆ. ಪರೀಕ್ಷೆ–1ಕ್ಕೆ ಜಿಲ್ಲೆಯ ಖಜಾನೆಯಲ್ಲಿ ಪರೀಕ್ಷಾ ಗೌಪ್ಯ ವಸ್ತುಗಳ ಠೇವಣಿ ಹಾಗೂ ಪರೀಕ್ಷಾ ಕೇಂದ್ರಗಳಿಗೆ ಗೌಪ್ಯ ವಸ್ತುಗಳ ವಿತರಣೆಯನ್ನು "ಕರ್ನಾಟಕ ಸೆಕ್ಯೂರ್ಡ್ ಎಕ್ಸಾಮಿನೇಷನ್ ಸಿಸ್ಟಮ್" ಅಡಿಯಲ್ಲಿ ಸುವ್ಯವಸ್ಥಿತ ವಾಗಿ ನಿರ್ವಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷಾ ಗೌಪ್ಯ ವಸ್ತುಗಳನ್ನು ಠೇವಣಿಸಲಾದ ಖಜಾನೆಗಳಿಗೆ ಪೂರ್ಣಾವಧಿಯ ಸಶಸ್ತ್ರ ಪೊಲೀಸ್ ಪಹರೆಯನ್ನು ಒದಗಿಸಲಾಗಿದೆ. ಹಿಂದಿನ ವರ್ಷಗಳಂತೆಯೇ ಮಾರ್ಚ್/ಏಪ್ರಿಲ್ 2026ರ ಪರೀಕ್ಷೆಗೆ ಸಂಬಂಧಿಸಿದಂತೆ ತಾಲೂಕು ಖಜಾನೆಗಳಲ್ಲಿ ಪರೀಕ್ಷಾ ಗೌಪ್ಯ ವಸ್ತುಗಳನ್ನು ಠೇವಣಿಸಲಾಗಿದೆ. ಪರೀಕ್ಷೆಗಳು ಪಾರದರ್ಶಕವಾಗಿ ನಡೆಯುತ್ತಿರುವುದನ್ನು ಗಮನಿಸಲು ಜಿಲ್ಲಾ ಹಂತದಲ್ಲಿ ಪ್ರತಿ 6 ಪರೀಕ್ಷಾ ಕೇಂದ್ರಗಳಿಗೆ ಒಬ್ಬರಂತೆ 15 ಸಿಬ್ಬಂದಿಗಳ ವೆಬ್ ಕಾಸ್ಟಿಂಗ್ ತಂಡವನ್ನು ರಚನೆ ಮಾಡಲಾಗಿದೆ.

ಪರೀಕ್ಷೆ ನಡೆಯುವ ಅವಧಿಯಲ್ಲಿ ವೆಬ್ ಕಾಸ್ಟಿಂಗ್ ಕಾರ್ಯ ಸುಗಮವಾಗಿ ನಡೆಯಲು ಪರೀಕ್ಷಾ ಕೇಂದ್ರಗಳಲ್ಲಿ ಮತ್ತು ವೆಬ್ ಕಾಸ್ಟಿಂಗ್ ವೀಕ್ಷಣೆ ನಡೆಯುವ ಕೊಡಚಾದ್ರಿ ಸಭಾಂಗಣ, ಜಿಲ್ಲಾ ಪಂಚಾಯತ್ ಶಿವಮೊಗ್ಗ ಇಲ್ಲಿಗೆ ಮೆಸ್ಕಾಂ ನವರು ನಿರಂತರ ವಿದ್ಯುತ್ ಸರಬರಾಜು ಒದಗಿಸಲು ಕ್ರಮವಹಿಸಿದೆ. ಪರೀಕ್ಷಾ ಕೇಂದ್ರಗಳಿಗೆ ದೂರದ ಊರುಗಳಿಂದ ಹಾಜರಾಗುವ ವಿದ್ಯಾರ್ಥಿಗಳಿಗೆ ಶಾಲೆಯಿಂದ ಪರೀಕ್ಷಾ ಕೇಂದ್ರಗಳಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ವ್ಯವಸ್ಥೆ ಮಾಡಲಾಗಿದೆ.: ಚಿಕ್ಕಮಗಳೂರು ಜಿಲ್ಲೆಯಾದ್ಯಂತಲೂ ಪರೀಕ್ಷೆಯನ್ನು ಸುಗಮವಾಗಿ ನಡೆಸಲು ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಜಿಲ್ಲಾ ಖಜಾನೆಯಿಂದ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತವಾಗಿ ರವಾನೆ ಮಾಡಲಾಗಿದೆ. ಇದಲ್ಲದೆ, ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಅನಧಿಕೃತ ವ್ಯಕ್ತಿಗಳ ಪ್ರವೇಶಕ್ಕೆ ತಡೆ ಹಿಡಿಯಲಾಗಿದೆ. ಶಾಂತಿ ಮತ್ತು ಶಿಸ್ತು ಕಾಪಾಡಲು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.ಬೀರೂರು ಶೈಕ್ಷಣಿಕ ವಲಯದಲ್ಲಿ 6, ಚಿಕ್ಕಮಗಳೂರು 11, ಕಡೂರು 10, ಕೊಪ್ಪ 4, ಮೂಡಿಗೆರೆ 5, ನರಸಿಂಹರಾಜಪುರ 4, ಶೃಂಗೇರಿ 2, ತರೀಕೆರೆ ಶೈಕ್ಷಣಿಕ ವಲಯದಲ್ಲಿ 10 ಕೇಂದ್ರ ಸೇರಿದಂತೆ ಜಿಲ್ಲೆಯಲ್ಲಿ 52 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ.

ಹೊಸದಾಗಿ ಪರೀಕ್ಷೆ ತೆಗೆದುಕೊಂಡಿರುವ 12,829 ವಿದ್ಯಾರ್ಥಿಗಳು, ರಿಪೀಟರ್ಸ್ 728 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 13,557 ಪರೀಕ್ಷಾರ್ಥಿಗಳು ಈ ಬಾರಿ ಪರೀಕ್ಷೆ ಬರೆಯುತ್ತಿದ್ದಾರೆ. ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಸಿದ್ದು, ಪ್ರತಿ ಪರೀಕ್ಷಾ ಕೇಂದ್ರದ ಸಿಸಿಟಿವಿ ವೀಕ್ಷಣೆಗೆ ನಿಯಂತ್ರಣ ಕೊಠಡಿ ಮೂಲಕ ವೆಬ್‌ಕಾಸ್ಟಿಂಗ್ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಅಥವಾ ನಕಲು ತಡೆಯಲು ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಸೂಚನೆ ನೀಡಲಾಗಿದೆ. ಅಲ್ಲದೇ ಪರೀಕ್ಷೆ ದಿನವಿಂದು ನಿರಂತರ ವಿದ್ಯುತ್ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಅಕಾರಿಗಳು ತಿಳಿಸಿದ್ದಾರೆ.

# ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಕರ್ತವ್ಯಕ್ಕೆ 1364 ಸಿಬ್ಬಂದಿ

**ದಾವಣಗೆರೆ, ಮಾ.18:** ಜಿಲ್ಲೆಯ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಒಟ್ಟು 1,364 ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಹಾಗು ಚುನಾವಣಾಧಿಕಾರಿ ಡಾ.ಗಂಗಾಧರ ಸ್ವಾಮಿ ಜಿ.ಎಂ. ಅವರು ಮಾಹಿತಿ ನೀಡಿದರು., ಚುನಾವಣಾ ಕೆಲಸದಿಂದ ವಿಶೇಷ ಚೇತನರು, ಗರ್ಭಿಣಿ ಉಪನ್ಯಾಸಕರಿಗೆ ವಿನಾಯಿತಿ ನೀಡಲಾಗುವುದು. ಚುನಾವಣೆಯನ್ನು ಯಶಸ್ವಿಗೊಳಿಸಲು ಜಿಲ್ಲಾಡಳಿತ ಸಾಕಷ್ಟು ಸಿದ್ಧತೆ ಮಾಡಿಕೊಂಡಿದೆ. ಚುನಾವಣೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತದೆ. ಯುಗಾದಿ ಹಬ್ಬದ ದಿನದಂದೇ ಅಂದರೆ ನಾಳೆ ಪಿಆರ್‌ಒಗಳಿಗೆ ತರಬೇತಿ ಇದೆ ಎಂದರು.

ಚುನಾವಣೆಗೆ ಒಟ್ಟು 1,364 ಸಿಬ್ಬಂದಿ ಅವಶ್ಯಕತೆ ಇದ್ದು, 341 ಪಿಆರ್‌ಒ, ಎಪಿಆರ್‌ಒ 341, ಫಸ್ಟ್ ಪಿಒ 341, ಸೆಕೆಂಡ್ ಪಿಒ 341 ನಿಯೋಜಿಸಲಾಗಿದೆ. ಪಿಯುಸಿ ಕಾಲೇಜಿನ ಉಪನ್ಯಾಸಕರನ್ನೂ ನಿಯೋಜಿಸಲಾಗಿದೆ. ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತಿ ಸಿಬ್ಬಂದಿ ಸೇರಿದಂತೆ ದಾವಣಗೆರೆಯ ವಿವಿಧ ತಾಲೂಕುಗಳ ಪಿಯು ಉಪನ್ಯಾಸಕರನ್ನು ಬಳಸಿಕೊಳ್ಳಲಾ ಗುತ್ತದೆ. ತುಂಗಭದ್ರಾ ಸಭಾಂಗಣದಲ್ಲಿ ಮೂರು ಹಂತದಲ್ಲಿ ಸಿಬ್ಬಂದಿಗೆ ಚುನಾವಣಾ ತರಬೇತಿ ನೀಡಲಾಗುತ್ತದೆ. ಈ ತರಬೇತಿಗೆ ಕಡ್ಡಾಯವಾಗಿ ಪಿಯುಸಿ ಉಪನ್ಯಾಸಕರು ಭಾಗಿಯಾಗಬೇಕು ಎಂದು ತಿಳಿಸಿದರು.

ಇದೇ ವೇಳೆ, ಚಿಕ್ಕ ಪುಟ್ಟ ಕಾರಣ ನೀಡಿ ಚುನಾವಣೆ ಕೆಲಸದಿಂದ ತಪ್ಪಿಸಿಕೊಂಡರೆ ಅಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸುತ್ತೇವೆ. ಎಫ್‌ಡಿಎ, ಎಸ್‌ಡಿಎ ಸಿಬ್ಬಂದಿಯನ್ನು ಚುನಾವಣಾ ಕೆಲಸಕ್ಕೆ ತೆಗೆದುಕೊಂಡಿದ್ದೇವೆ. ನಾಳೆ ಮೊದಲ ದಿನ ತರಬೇತಿಯಲ್ಲಿ 210 ಮಂದಿ ಭಾಗಿಯಾಗಲಿದ್ದಾರೆ ಎಂದೂ ಹೇಳಿದರು.

ಇದಕ್ಕೂ ಮೊದಲು ಜಿಲ್ಲಾಧಿಕಾರಿ, ಚುನಾವಣೆ ಮುಕ್ತಾಯವಾಗುವರೆಗೂ ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ರಜೆ ರದ್ದು ಮಾಡಲಾಗಿದೆ. ಸಿಬ್ಬಂದಿ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಇರಬೇಕು. ಎಲ್ಲ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಕೇಂದ್ರಸ್ಥಾನದಿಂದ ಹೊರಹೋಗುವಂತಿಲ್ಲ. ಸುಳ್ಳುಸುದ್ದಿಗಳನ್ನು ನಂಬುವುದು ಹಾಗೂ ಬೇರೆಯವರಿಗೆ ಕಳಿಸಬಾರದು. ಸೂಕ್ಷ್ಮ, ಅತಿಸೂಕ್ಷ್ಮ ಪ್ರದೇಶಗಳಲ್ಲಿ ಸೂಕ್ತ ಬಂದೋಬಸ್ತ್ ಮಾಡಲಾಗಿದೆ ಎಂದಿದ್ದರು.ದಾವಣಗೆರೆ ದಕ್ಷಿಣ ಮತಕ್ಷೇತ್ರದಲ್ಲಿ 2,31,683 ಮತದಾರರಿದ್ದಾರೆ. ಈ ಪೈಕಿ 1,13,654 ಪುರುಷರು, 1,17,986 ಮಹಿಳೆಯರು, 43 ತೃತೀಯ ಲಿಂಗಿಗಳಿದ್ದಾರೆ. 284 ಮತಗಟ್ಟೆಗಳಿವೆ.

# ಕಲಬುರಗಿಗೆ ಆರ್ಥಿಕ ಹಿನ್ನಡೆ: ಇದೇ ಮೊದಲ ಬಾರಿಗೆ ತಲಾ ಆದಾಯ ಂಕೊನೆಯ ಸ್ಥಾನಕ್ಕೆ ಕುಸಿತ!

ಕಲಬುರಗಿ, ಮಾ. 18: ರಾಜ್ಯ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ, ಸಾಂಖ್ಯಿಕ ಇಲಾಖೆ ನಡೆಸಿರುವ 2025–26ನೇ ಸಾಲಿನ ಆರ್ಥಿಕ ಸಮೀಕ್ಷೆಯಲ್ಲಿ ಜಿಲ್ಲೆಯ ತಲಾ ಆದಾಯ ಇದೇ ಮೊದಲ ಬಾರಿಗೆ ಋಣಾತ್ಮಕ ಬೆಳವಣಿಗೆ ದಾಖಲಿಸಿದೆ! ಇದರಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಫಲಿತಾಂಶ, ಬಡತನ ರೇಖೆ ಕೆಳಗಿರುವ ಕುಟುಂಬಗಳ ಲೆಕ್ಕಾಚಾರ, ಪೌಷ್ಟಿಕಾಂಶ ಕೊರತೆಯಿಂದ ಬಳಲುತ್ತಿರುವ ಮಕ್ಕಳ ವಿಷಯ, ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಗಳ ಆಚರಣೆ ಸೇರಿದಂತೆ ಹಲವು ರಂಗಗಳಲ್ಲಿ ಕಳಪೆ ಸಾಧನೆಯಿಂದ ಗಮನಸೆಳೆಯುತ್ತಿದ್ದ ಕಲಬುರಗಿ ಜಿಲ್ಲೆಗೆ ತಲಾ ಆದಾಯಾದಲ್ಲೂ ಕೊನೆ ಎಂಬ ಹೊಸ ಪಟ್ಟ ದೊರಕಿದೆ.

2023–24ರಲ್ಲಿ ನಡೆದ ಆರ್ಥಿಕ ಸಮೀಕ್ಷೆಯಲ್ಲಿದ್ದ ಕಲಬುರಗಿ 1,45, 377 ಲಕ್ಷ ತಲಾ ಆದಾಯ 2026–27ರ ಸಮೀಕ್ಷೆಯಲ್ಲಿ 928 ರೂ ನಷ್ಟು ಜಿಲ್ಲೆಯ ತಲಾ ಆದಾಯ ತಗ್ಗಿ 1, 44, 449 ರು. ದಾಖಲಾಗಿದೆ.

# ಗಲಭೆಕೋರರಿಗೆ ಲಾಠಿ, ಗುಂಡೇಟು, ಕಲಬುರಗಿ ಪೊಲೀಸರಿಂದ ಅಣಕು ಪ್ರದರ್ಶನ



**ಕಲಬುರಗಿ, ಮಾ. 18:** ಒಂದೆಡೆ ಕಾನೂನು ಬದ್ಧ ಹೋರಾಟದ ನೆಪದಲಿ ಅಕ್ರಮ ಕೂಟ ರಚಿಸಿ, ಸಾರ್ವಜನಿಕರ ಆಸ್ತಿ ಪಾಸ್ತಿ ಮೇಲೆ ಹಾನಿ ಮಾಡುತ್ತಿದ್ದು, ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸುತ್ತಿದ್ದ ಗಲಭೆಕೋರರ ಮೇಲೆ ಲಾಠಿ, ಅಶ್ರುವಾಯ, ಜಲಪ್ರಯೋಗ ನಂತರ ಗುಂಡೇಟು ನೀಡುವ ಮೂಲಕ ಗಲಭೆಯನ್ನು ಯಶಸ್ವಿಯಾಗಿ ಪೊಲೀಸರಿಂದ ನಿರ್ವಹಣೆ.

ಇದು ನಗರದ ಡಿಎಆರ್ ಮೈದಾನದಲ್ಲಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಅವರ ಸಮ್ಮುಖದಲ್ಲಿ ನಗರ ಪೊಲೀಸರಿಂದ ಏರ್ಪಡಿಸಿದ್ದ ಗಲಭೆ ನಿಯಂತ್ರಣ ಪರೇಡ್ (ಅಣಕು ಪ್ರದರ್ಶನ)ನ ದೃಶ್ಯಗಳು. ಒಂದೆಡೇ ಸರ್ಕಾರ, ಆಡಳಿತ ವ್ಯವಸ್ಥೆ ವಿರುದ್ಧ ಧಿಕ್ಕಾರ ಕೂಗುತ್ತ ಬರುವ ಅಕ್ರಮ ಕೂಟಕ್ಕೆ ಎಚ್ಚರಿಕೆ ನೀಡಿ, ಮನವರಿಕೆ ಮಾಡಿದರೂ ಪ್ರತಿಭಟನಾಕಾರರು ಸ್ಪಂದಿಸಲಿಲ್ಲ. ತಕ್ಷಣ ಮೊದಲಿಗೆ ಮೈಕ್ ಮೂಲಕ ಹೊರಟು ಹೋಗುವಂತೆ ಸೂಚನೆ ನೀಡಿದರೂ ಹೋಗದೇ ಪ್ರತಿಭಟನೆ ಉಗ್ರ ಸ್ವರೂಪ ಪಡೆದ ತಕ್ಷಣ ಅಶ್ರುವಾಯು ಸಿಡಿಸಿ, ಹಿಮ್ಮೆಟ್ಟಲು ಪ್ರಯತ್ನಿಸಲಾಯಿತು.

ನಂತರ ಜಲಫಿರಂಗಿ ಪ್ರಯೋಗ ನಡೆಸಿ, ಬೆದರಿಸಲಾಯಿತು. ಅದಕ್ಕೂ ಜಗ್ಗದಿದ್ದಾಗ ಪ್ರತಿಭಟನೆ ತೀವ್ರ ಸ್ವರೂಪ ಪಡೆದು, ಲಾಠಿ ಪ್ರಹಾರ ನಡೆಸಲಾಯಿತು. ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದಾಗ ಗಾಳಿಯಲ್ಲಿ ಗುಂಡು ಹಾರಿಸಲಾಯಿತು.ಓರ್ವ ಪ್ರತಿಭಟನಾಕಾರನಿಗೆ ಗಾಯವಾಗಿದ್ದು, ಆತನನ್ನು ತಕ್ಷಣ ಪೊಲೀಸ್ ವಾಹನದಲ್ಲಿ ಆಸ್ಪತ್ರೆಗೆ ಸೇರಿಸುವ ಪ್ರದರ್ಶನದ ಮೂಲಕ ಆಯುದ್ಧ ಪ್ರಹಾರವೂ ಸಾರ್ವಜನಿಕರ ಹಿತದೃಷ್ಟಿಯಿಂದ ಹೊರತು, ಬಲಪ್ರಯೋಗಕ್ಕಾಗಿ ಅಲ್ಲ ಎಂಬ ಸಂದೇಶ ನೀಡಲಾಯಿತು.

ಪ್ರತಿಭಟನೆ ನೆಪದಲ್ಲಿ ಸಮಸ್ಯೆ ತಡೆಯಲು ಪೊಲೀಸರು ಸನ್ನದ್ಧರಾಗಿರಬೇಕು ಎಂಬ ಕಾರಣಕ್ಕೆ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಸಮ್ಮುಖದಲ್ಲಿ ಪರೇಡ್ ನಡೆಸಲಾಗಿದೆ ಎಂದು ಎಸಿಪಿ ಬಸವೇಶ್ವರ ಹೀರಾ ವಿಸ್ತೃತ ಮಾಹಿತಿ ನೀಡಿದರು. ಎಸಿಪಿ ಸರ್ದಾರ್ ಎಚ್.ಎಂ.ಡಿ, ಎಸಿಪಿ ಶರಣಪ್ಪ ಸುಬೇದಾರ ಮಾರ್ಗದರ್ಶನದಲ್ಲಿ ಆರ್‌ಪಿಐ ಮಹಾದೇವ ಪಾಟೀಲ್ ಮತ್ತು ಇತರೆ ಅಧಿಕಾರಿಗಳ ತಂಡವೂ ಶಿಸ್ತುಬದ್ಧವಾಗಿ ಅಣಕು ಪ್ರದರ್ಶನ ನಡೆಸಿದವು.

# ನಶಾಮುಕ್ತ ಭಾರತ ಅಭಿಯಾನ, ಯುವಶಕ್ತಿ ನಶಾಮುಕ್ತರಾಗಿ: ಗೆಹ್ಲೋತ್




**ಬಳ್ಳಾರಿ, ಮಾ.18:** ನಗರದ ಬಳ್ಳಾರಿ ಮೆಡಿಕಲ್ ಕಾಲೇಜು ಮೈದಾನದಲ್ಲಿ ಇಂದು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಬಳ್ಳಾರಿ–ವಿಜಯನಗರ ಜಿಲ್ಲೆಯ ಕಾಲೇಜುಗಳು, ದಿಶಾಭೋದ್ ಫೌಂಡೇಶನ್ ಹಾಗು ನಾರ್ಕೋಟಿಕ್ ಕಂಟ್ರೋಲ್ ಬ್ಯೂರೋದ ಸಹಯೋಗದೊಂದಿಗೆ ನಶಾಮುಕ್ತ ಭಾರತ, ನಶಾಮುಕ್ತ ಕರ್ನಾಟಕ, ನಶಾಮುಕ್ತ ಕ್ಯಾಂಪಸ್ ಮತ್ತು ಮಾನವ ಅಂಗಾಂಗ ದಾನದ ಜಾಗೃತಿ ವಾಕಥಾನ್ ಕಾರ್ಯಕ್ರಮ ಹಮ್ಮಿಕೊಂಡಿತ್ತು. ನಡೆಯಿತು.

ಬಾವುಟ ತೋರಿಸಿ, ಬಲೂನ್ ಹಾರಿಬಿಡುವ ಮೂಲಕ ವಾಕಥಾನ್‌ಗೆ ಚಾಲನೆ ನೀಡಿದ ರಾಜ್ಯಪಾಲ ಥಾವರಚಂದ್ ಗೆಹ್ಲೋತ್‌ಅವರು,ಭಾರತ ವಿಶ್ವದ ಗಮನ ಸೆಳೆಯುವ ದೇಶವಾಗಿದ್ದು ಇದರಲ್ಲಿ ಕರ್ನಾಟಕ ಉತ್ತಮ ಸಂಸ್ಕೃತಿಯ ನಾಡಾಗಿದ್ದು. ಇಲ್ಲಿ ಶಿಕ್ಷಣ, ಔದ್ಯೋಗಕದಿಂದ ಅಭಿವೃದ್ಧಿ ಹೊಂದುತ್ತಿದ್ದು. ವಿಕಸತ ಭಾರತಕ್ಕೆ ಸಹಕಾರಿಯಾಗಿದೆ. ಯುವ ಶಕ್ತಿ ನಶಮುಕ್ತರಾಗಿ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾಗಿ ಶ್ರಮಿಸಬೇಕು. ಮಾದಕ ವಸ್ತುಗಳು, ಮಾನಸಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ ಕೆಟ್ಟ ಪರಿಣಾಮ ಬೀರಲಿದೆ ಅದಕ್ಕಾಗಿ ನಶ ಮುಕ್ತ ಭಾರತ ಆಗಬೇಕು ಎಂದರು.

ಕಮ್ಮರಚೇಡು ಮಠದ ಕಲ್ಯಾಣ ಸ್ವಾಮಿ ಮಾತನಾಡಿ. ಉತ್ತಮ ಜಾಗೃತಿ ಮೂಡಿಸುವ ಕಾರಗಯ ಇದಾಗಿದೆ. ಆರೋಗ್ಯ ಭಾಗ್ಯ ಇಲ್ಲದೇ ಇದ್ದರೆ ಏನೂ ಮಾಡಲು ಆಗದು, ಉತ್ತಮ ಆಹಾರ ವಾಯು ದೊರೆಯುವುದೇ ಇರುವುದು ದುರದೃಷ್ಟಕರವಾಗಿದೆ. ವಿಜ್ಞಾನ ಬೆಳೆದಂತೆ ಅಜ್ಞಾನ, ಅಂಧಕಾರವೂ ಹೆಚ್ಚಿದೆ. ರಕ್ತ, ದೇಹದಾನ ಶ್ರೇಷ್ಟ ನಾನು ನೇತ್ರದಾನ ಮಾಡಿದ್ದೇನೆ. ದೇಹದಾನ ಮಾಡಲು ಸಿದ್ಧನಿದ್ದೇನೆ. ಆ ನಿಟ್ಟಿನಲ್ಲಿ ಯುವ ಜನತೆ ಮುಂದಾಗಬೇಕ ಎಂದರು.

ಬಳ್ಳಾರಿ ಪ್ರಾಂತದ ಕ್ರೈಸ್ತ ಧರ್ಮಗುರು ಬಿಷಪ್ ಹೆನ್ರಿ ಡಿ.ಸೋಜ ಅವರು ಮಾತನಾಡಿ, ಪ್ರೀತಿ ಗೌರವ ಇದ್ದರೆ ಮಾತ್ರ ನಶ ಮುಕ್ತ ಆಗಬಹುದು. ಅದಕ್ಕೆ ಕಾಲೇಜ್ ಕ್ಯಾಂಪಸ್ ಮಾತ್ರ ಅಲ್ಲ ಪ್ರತಿ ಕುಟುಂಬ, ನಗರ, ದೇಶ ಆಗಬೇಕು. ಕ್ರೈಸ್ತ ಪಾದ್ರಿಗಳು ಸಹ ಅಂಗಾಗ, ದೇಹ ದಾನ ಮಾಡಿದ್ದಾರೆ. ಇಂತಹ ಗುಣ ಎಲ್ಲರಲ್ಲೂ ಬರಲಿ ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ, ಪ್ರತಿಜ್ಞಾವಿಧಿ ಬೋಧನೆ ಮಾಡಿ, ದೇಶದಲ್ಲಿಯೇ ಮೊದಲನೆಯದಾಗಿ ಈ ಲೈಬ್ರರಿ, ಅನ್ ಲೈನ್ ಟ್ರಾನ್ಸಮಿಷನ್ಸ್, ಪರೀಕ್ಷಗಳು ನಡೆಸುವ ಮೂಲಕ, ರಾಜೀವಗಾಂಧಿ ವಿವಿ ಮಾದರಿಯಾಗಿದೆ. 3.5 ಲಕ್ಷ ವಿದ್ಯಾರ್ಥಿಗಳನ್ನು, 30 ಸಾವಿರ ಸಿಬ್ಬಂದಿಯನ್ನು ಹೊಂದಿದೆ. ನಮ್ಮನ್ನು ಇತರೇ ವಿವಿಗಳು ಅನುಸರಿಸುತ್ತಿವೆ.

ಮಾದಕ ವಸ್ತುಗಳ ಬಳಕೆಯಿಂದ ಮೆದುಳು ನಿಷ್ಕ್ರಿಯತೆ, ಹೃದಯಘಾತ ಹೆಚ್ಚುತ್ತಿದೆ. ಯುವ ಸಮೂಹವನ್ನು ಹಾಳಯ ಮಾಡಲು ದುಷ್ಟ ಶಕ್ತಿಗಳು ಮಾದಕ ವ್ಯಸನಿಗಳನ್ನಾಗಿ ಮಾಡಲು ಹೊರಟಿವೆ. ಅದಕ್ಕಾಗಿ ನಾವು ಮಾದಕ ವಸ್ತುಗಳ ವಿರೋಧಿಗಳಾಗಬೇಕು. ನಮ್ಮ ವಿವಿಯ ಎಲ್ಲಾ ಕಾಲೇಜುಗಳ ಮಾದಕ ವಸ್ತುಗಳ ರಹಿತ ಕ್ಯಾಂಪಸ್ ಗಳಾಗಬೇಕು.

ಭಾರತದಲ್ಲಿ ವಾರ್ಷಿಕ ಅಂದಾಜು 3 ಲಕ್ಷ ಅಂಗಗಳು ರೋಗಿಗಳಿಗೆ ಬೇಕಾಗುತ್ತವೆ. ಆದರೆ 16 ರಿಂದ 17 ಸಾವಿರ ಮಾತ್ರ ಲಬವ್ಯ ಇವೆ. ಒಬ್ಬ ಮೃತ ದಾನಿಯು ಅಂಗಾಂಗ ದಾನದ ಮೂಲಕ 8 ಜೀವಗಳನ್ನು ಉಳಿಸಬಹುದು ಮತ್ತು 75 ಇತರರ ಜೀವನವನ್ನು ಸುಧಾರಿಸ ಬಹುದು. ಕಳೆದ ನಾಲ್ಕು ತಿಂಗಳಲ್ಲಿ ಈ ಅಭಿಯಾನದ ಮೂಲಕ ರಾಜ್ಯದಲ್ಲಿ ನಮ್ಮ ವಿವಿಯ ವಿದ್ಯಾರ್ಥಿ ಮತ್ತು ಉಪನ್ಯಾಸಕರು 12 ಸಾವಿರ ಅಂಗಗಳದಾನ ಮಾಡಿದ್ದಾರೆ ಎಂದು ಹೇಳಿದರು. ಮೇಯರ್ ಪಿ.ಗಾದೆಪ್ಪ. ದಿಶಾಭೋದ್ ಫೌಂಡೇಶನ್ ನ ನಿರ್ದೇಶಕರಾದ ಚಿದಾನಂದ, ಜಾನೆಕುಂಟೆ ಬಸವರಾಜ್ (ಕುಮ್ಮಿ), ನಾರ್ಕೋಟಿಕ್ ಕಂಟ್ರೋಲ್ ಬ್ಯೂರೋದ ರತನ್ ಕೆ. ಜಿಆರ್ ಐ ನ ಬಸವರಾಜ್ ಮೇಟಿ ಮೊದಲಾದವರು ವೇದಿಕೆಯಲ್ಲಿದ್ದರು.



ಬುಧವಾರ ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ವಿಧಾನಸಭಾ ಅಧಿವೇಶನವನ್ನು ವಿದ್ಯಾರ್ಥಿಗಳು ವೀಕ್ಷಿಸಿದರು.

# ದತ್ತಿ ಉಪನ್ಯಾಸದಿಂದ ಕನ್ನಡ ಬೆಳವಣಿಗೆ: ಯಾಳ್ಪಿ ವಲಿಭಾಷ




**ಬಳ್ಳಾರಿ:ಮಾ,18;** ದತ್ತಿ ಉಪನ್ಯಾಸ ಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆ ಯನ್ನು ಪರಿಚಯಿಸುವುದ ರೊಂದಿಗೆ ಹೊಸ ವಿಚಾರಗಳನ್ನು ತಿಳಿಸಿ ಕನ್ನಡತನವನ್ನು ಬೆಳೆಸುವ ಕಾರ್ಯ ಮಾಡುತ್ತದೆ ಎಂದು ಕರ್ನಾಟಕ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾಧ್ಯಕ್ಷ ಯಾಳ್ಪಿ ವಲಿಭಾಷ ಅಭಿಪ್ರಾಯಪಟ್ಟರು.

ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಬಳ್ಳಾರಿರವರ ಸಂಯುಕ್ತಾಶ್ರಯದಲ್ಲಿ ಇಂದು ಕಾಲೇಜಿನಲ್ಲಿ ಆಯೋಜಿಸ ಲಾಗಿದ್ದ ಪ್ರೋ.ಕೆ.ಬಿ.ಹನುಮಂತರಾಯ, ಲಿಂ.ಟಿ.ಸಾವಿತ್ರಮ್ಮ ಸ್ಮಾರಕ, ಲಿಂ. ಕೆ.ಲಿಂಗನಗೌಡ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಭಾಷೆ ಇಂದು ಜಾತಿ, ಧರ್ಮ ಹಾಗೂ ಗಡಿಯನ್ನು ಮೀರಿ ಬೆಳೆದಿದೆ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ ಕನ್ನಡ ಸಾಹಿತ್ಯ ಪರಿಷತ್ತು. ತನ್ಮೂಲಕ ಕನ್ನಡ ನಾಡು, ನುಡಿ, ಸಂಸ್ಕೃತಿ, ಕಲೆ, ಸಾಹಿತ್ಯವನ್ನು ನಿರಂತರವಾಗಿ ಪೋಷಿಸುತ್ತ ವಿವಿಧ ಕಾರ್ಯಕ್ರಮ ಮೂಲಕ ಮುಂದಿನ ತಲೆಮಾರಿಗೆ ಕನ್ನಡದ ಶ್ರೇಷ್ಠತೆಯನ್ನು ಪರಿಚಿಸುವ ಕೆಲಸವನ್ನು ಮಾಡುತ್ತಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳು, ಕವಿಗೋಷ್ಠಿ ಇನ್ನಿತರ ಕಾರ್ಯಕ್ರಮಗಳು ನಡೆದು ಕನ್ನಡ ಭಾಷೆ ಇನ್ನೂ ಬೆಳವಣಿಗೆ ಕಾಣುವುದರೊಂದಿಗೆ ಕನ್ನಡ ಭಾಷೆ ತನ್ನ ಅಸ್ಮಿತೆಯನ್ನು ಕನ್ನಡಿಗರಿಗೆ ತೋರಿಸಲಿ ಎಂದರಲ್ಲದೇ,

ವಿದ್ಯಾರ್ಥಿಗಳು ಬಾಲ್ಯದಿಂದಲೇ ಓದುವ ಹವ್ಯಾಸವನ್ನು ಬೆಳೆಸಿ ಕೊಳ್ಳಬೇಕು. ಪುಸ್ತಕಗಳು, ವೃತ್ತ ಪತ್ರಿಕೆಗಳನ್ನು ಓದುವುದರಿಂದ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯ. ಯಾವುದೇ ಕಾರ್ಯಕ್ರಮ, ಸ್ಪರ್ಧೆಯಾದರೂ ಅದರಲ್ಲಿ ಭಾಗವಹಿ ಸುವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಿಷ್ಠಿರುದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ನೈತಿಕ ಮೌಲ್ಯಗಳನ್ನು ರೂಢಿಸಿ ಕೊಳ್ಳುವಲ್ಲಿ ವಚನಗಳ ಪಾತ್ರ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

# ಪುನೀತ್ ಹುಟ್ಟು ಹಬ್ಬಕ್ಕೆ ರಕ್ತದಾನ ಮಾಡಿದ ಸೋಮಶೇಖರ ರೆಡ್ಡಿ



**ಬಳ್ಳಾರಿ, ಮಾ.18.** ದಿವಂಗತ ನಟ ಪುನೀತ್ ರಾಜ ಕುಮಾರ್ ಅವರ 51 ನೇ ಹುಟ್ಟು ಹಬ್ಬದ ದಿನವನ್ನು ಸ್ಫೂರ್ತಿ ದಿನ ವನ್ನಾಗಿ ಆಚರಣೆ ಮಾಡುತ್ತಿದ್ದು. ನಿನ್ನೆ ದಿನ ನಗರದ ಜಿಲ್ಲಾ ಕ್ರೀಡಾಂಗಣದ ಬಳಿ ಇರುವ ಪುನೀತ್ ರಾಜ್ ಕುಮಾರ್ ಬಳಿಯ ಪುತ್ಥಳಿ ಬಳಿನಡೆದ ಸರಳ ಸಮಾರಂಭದಲ್ಲಿ ನಗರದ ಮಾಜಿ ಶಾಸಕ ಜಿ.ಸೋಮಶೇಖರ ರೆಡ್ಡಿ ರಕ್ತದಾನ ಮಾಡಿದರು.

ನಂತರ ಮಾತನಾಡಿದ ಅವರು ಡಾ. ರಾಜ್ ಅವರ ಕಟ್ಟಾ ಅಭಿಮಾನಿ ನಾನು, ಪುನೀತ್ ಅಂದ್ರೆ ನನಗೆ ಬಹಳ ಅಭಿಮಾನ ಎಂದರು. ಅವರು ಈ ದಿನ ಎಲ್ಲರಿಗೂ ಸ್ಫೂರ್ತಿ ಆಗಲಿ ಎಂದರು.

### ಅಶ್ಲೀಲ ಹಾಗೂ ದ್ವಂದ್ವಾರ್ಥದ ಹಾಡುಗಳಿಗೆ ಕಡಿವಾಣ ಹಾಕದ

# ಸೆನ್ಸಾರ್ ಮಂಡಳಿ, ಸರ್ಕಾರಗಳ ದಿವ್ಯ ನಿರ್ಲಕ್ಷ್ಯ: ಕೆಎಐಡಿವೈಓ ಖಂಡನೆ

**ಬಳ್ಳಾರಿ ಮಾ 18.** ಅಶ್ಲೀಲ ಹಾಗೂ ದ್ವಂದ್ವಾರ್ಥದ ಹಾಡುಗಳಿಗೆ ಕಡಿವಾಣ ಹಾಕದ ಸೆನ್ಸಾರ್ ಮಂಡಳಿ ಹಾಗೂ ಸರ್ಕಾರಗಳ ದಿವ್ಯ ನಿರ್ಲಕ್ಷ್ಯವನ್ನು ಎ ಐ ಡಿ ವೈ ಓ ಸಂಘಟನೆ ಖಂಡಿಸುತ್ತದೆ.

ಕಲೆಯ ಉದ್ದೇಶ ಅರಿತ ಕೆಲವು ಸದಭಿರುಚಿಯ ಸಿನಿಮಾಗಳು ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ಕೊಟ್ಟರೆ, ಇನ್ನೂ ಕೆಲವು ಸಿನಿಮಾಗಳು ಅಗ್ಗದ ಪ್ರಚಾರಕ್ಕಾಗಿ ಅಶ್ಲೀಲತೆ, ಹಿಂಸೆಯನ್ನು ವೈಭವೀಕರಿಸುತ್ತಿವೆ. ಆದರೆ ಇದರ ವಿರುದ್ಧ ಸದಾ ಧ್ವನಿ ಎತ್ತುವ ಹಲವಾರು ಪ್ರಜ್ಞಾವಂತ ಜನತೆ ವಿರೋಧಿಸುತ್ತಲೇ ಬಂದಿದ್ದಾರೆ.

ಅದರಂತೆ ಈಗ ಬಿಡುಗಡೆ ಯಾಗಿರುವ ಪ್ರೇಮ್ ನಿರ್ದೇಶನದ ಕೇಡಿ ಸಿನಿಮಾದ ಒಂದು ಹಾಡು ದ್ವಂದ್ವಾರ್ಥದ ಅತಿ ಕೀಳು ಮಟ್ಟಕ್ಕೆ ಇಳಿದಿದೆ ಎಂದು ಸಾಮಾನ್ಯ ಜನತೆಗೆ ಧ್ವನಿಯೆತ್ತಿದ್ದಾರೆ. ಆದರೆ ಇದಕ್ಕೆ ಮುಂಚೆ ಕಡಿವಾಣ ಹಾಕಬೇಕಾಗಿದ್ದ ಸೆನ್ಸಾರ್ ಮಂಡಳಿ ಗಳು, ಸರ್ಕಾರಗಳು ಇಡೀ ದೇಶದಾದ್ಯಂತ ವಿರೋಧ ಬಂದಮೇಲೆ ಕಣ್ತೆರೆದಿರುವುದು ಅವರ ದಿವ್ಯ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ.

ಮಹಿಳೆ ಕೇವಲ ಭೋಗದ ವಸ್ತು ಎಂಬ ರೀತಿಯಲ್ಲಿ ಚಿತ್ರಿಸುವ ಹಾವಳಿ ಹೆಚ್ಚುತ್ತಿರುವುದು ಕೆಟ್ಟ ಬೆಳವಣಿಗೆ. ಈಗಾಗಲೇ ವ್ಯಾಪಕವಾಗಿ ಹೆಚ್ಚುತ್ತಿರುವ ಅತ್ಯಾಚಾರ ದೌರ್ಜನ್ಯಗಳ ಪ್ರಕರಣಗಳಿಗೆ ಇಂಥ ಹಾಡುಗಳು ಇನ್ನಷ್ಟು ಪುಷ್ಟಿ ನೀಡಿ ಯುವ ಜನರನ್ನು ತಪ್ಪು ದಾರಿಗೆ ಒಯ್ಯುತ್ತವೆ.

ಸಮಾಜದಲ್ಲಿ ತಾಂಡವವಾಡು ತ್ತಿರುವ ನಿರುದ್ಯೋಗ ಬಡತನ ಭ್ರಷ್ಟಾಚಾರ ಅನ್ಯಾಯ ಅಸಮಾನತೆಗಳ ವಿರುದ್ಧ ಧ್ವನಿ ಎತ್ತಲು ಪ್ರೇರಣೆ ನೀಡಬೇಕಾದ ಕಲೆ ಸಾಹಿತ್ಯಗಳು ಯುವಜನರನ್ನು ಸಾಮಾಜಿಕ ಜವಾಬ್ದಾರಿಯಿಂದ ವಿಮುಖ ಗೊಳಿಸುವ ಅಶ್ಲೀಲತೆಯನ್ನು ಹರಡುವ ಇಂತಹ ಸಿನಿಮಾಗಳನ್ನು ಯುವ ಜನತೆ ಧಿಕ್ಕರಿಸಬೇಕೆಂದು AIDYO ಕರೆ ನೀಡುತ್ತದೆ.

### ಗ್ಯಾಸ್ ಸಿಲಿಂಡರ್ ಸಮಸ್ಯೆ, ಬೆಲೆ ಹೆಚ್ಚಳದ ವಿರುದ್ಧ

# ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಲ್ಲಂ ಪ್ರಶಾಂತ್ ನೇತೃತ್ವದಲ್ಲಿ, ಪ್ರತಿಭಟನೆ



**ಬಳ್ಳಾರಿ, ಮಾ.18:** ಕೊಲ್ಲಿ ಯುದ್ಧದ ಹಿನ್ನಲೆಯಲ್ಲಿ ದೇಶದಲ್ಲಿ ಗ್ಯಾಸ್ ಸಿಲಿಂಡರ್ ಸಿಗದೇ ಜನರು ಕಂಗಾಲಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಸಿಲಿಂಡರ್ ದರ ಏರಿಕೆ ಮಾಡಿರೋದು ಗಾಯದ ಮೇಲೆ ಬರೆ ಎಳೆದಂತಾಗಿದೆಂದು. ಕೇಂದ್ರದ ಬಿಜೆಪಿ ನೇತೃತ್ವದ ಎನ್ ಡಿ ಎ ಸರ್ಕಾರದ ವಿರುದ್ಧ ನಗರದಲ್ಲಿ ಕಾಂಗ್ರೆಸ್ ಇಂದು ಪ್ರತಿಭಟನೆ ನಡೆಸಿತು.

ನಗರದ ಗಡಗಿ ಚೆನ್ನಪ್ಪ ವೃತ್ತದಲ್ಲಿನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ಲಂ ಪ್ರಶಾಂತ್ ನೇತೃತ್ವದಲ್ಲಿ ಸೇರಿದ ಪಕ್ಷದ ಮುಖಂಡರು, ಕಾರ್ಯಕರ್ತರು ಸಿಲಿಂಡರ್ ದರವನ್ನು ಹೆಚ್ಚಿಸಿರುವುದನ್ನು ಖಂಡಿಸಿ ಬಿಜೆಪಿ ವಿರುದ್ಧ ಘೋಷಣೆ ಕೂಗಿದರು. ಒಲೆ ಮೇಲೆ ಮಾಡಿದ ಟೀಯನ್ನು ಜನರಿಗೆ ಹಂಚುವ ಮೂಲಕ ವ್ಯಂಗ್ಯ ಪ್ರದರ್ಶಿಸಿದರು.

ಸರ್ಕಲ್ ನಲ್ಲಿ ಕಟ್ಟಿಗೆ ಹೊಲೆ ಮೇಲೆ ಟೀ ಮಾಡಿ ಅಕ್ರೋಶ ವ್ಯಕ್ತಪಡಿಸಿದರು. ಕಮರ್ಷಿಯಲ್ ಸಿಲಿಂಡರ್ ಕೊರತೆ ನೀಗಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಕೇಂದ್ರದ ನಿಲುವಿನಿಂದ ಜನಸಾಮಾನ್ಯರು ಪರದಾಡು ವಂತಾಗಿದೆ ಎಂದು ಮುಖಂಡರು ಹೇಳಿದರು.

ಪ್ರತಿಭಟನೆಯಲ್ಲಿ ಮೇಯರ್ ಗಾದೆಪ್ಪ, ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್, ಹೆಚ್.ಸಿದ್ದೇಶ್, ಮಂಜುಳಾಇದ್ದರು.

ಗ್ಯಾಸ್ ಸಿಲಿಂಡರ್ ಸಮಸ್ಯೆ ಬೆಲೆ ಹೆಚ್ಚಳದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ: ಕೊಲ್ಲಿ ಯುದ್ಧದ ಹಿನ್ನಲೆಯಲ್ಲಿ ದೇಶದಲ್ಲಿ ಗ್ಯಾಸ್ ಸಿಲಿಂಡರ್ ಸಿಗದೇ ಜನರು ಕಂಗಾಲಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಸಿಲಿಂಡರ್ ದರ ಏರಿಕೆ ಮಾಡಿರೋದು ಗಾಯದ ಮೇಲೆ ಬರೆ ಎಳೆದಂತಾಗಿದೆಂದು. ಕೇಂದ್ರದ ಬಿಜೆಪಿ ನೇತೃತ್ವದ ಎನ್ ಡಿ ಎ ಸರ್ಕಾರದ ವಿರುದ್ಧ ನಗರದಲ್ಲಿ ಕಾಂಗ್ರೆಸ್ ಇಂದು ಪ್ರತಿಭಟನೆ ನಡೆಸಿತು.

ನಗರದ ಗಡಗಿ ಚೆನ್ನಪ್ಪ ವೃತ್ತದಲ್ಲಿ ನ್ರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ಲಂ ಪ್ರಶಾಂತ್ ನೇತೃತ್ವದಲ್ಲಿ ಸೇರಿದ ಪಕ್ಷದ ಮುಖಂಡರು, ಕಾರ್ಯಕರ್ತರು ಸಿಲಿಂಡರ್ ದರವನ್ನು ಹೆಚ್ಚಿಸಿರುವುದನ್ನು ಖಂಡಿಸಿ ಬಿಜೆಪಿ ವಿರುದ್ಧ ಘೋಷಣೆ ಕೂಗಿದರು. ಒಲೆ ಮೇಲೆ ಮಾಡಿದ ಟೀಯನ್ನು ಜನರಿಗೆ ಹಂಚುವ ಮೂಲಕ ವ್ಯಂಗ್ಯ ಪ್ರದರ್ಶಿಸಿದರು.

ಸರ್ಕಲ್‌ನಲ್ಲಿ ಕಟ್ಟಿಗೆ ಹೊಲೆ ಮೇಲೆ ಟೀ ಮಾಡಿ ಅಕ್ರೋಶ ವ್ಯಕ್ತಪಡಿಸಿದರು. ಕಮರ್ಷಿಯಲ್ ಸಿಲಿಂಡರ್ ಕೊರತೆ ನೀಗಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಕೇಂದ್ರದ ನಿಲುವಿನಿಂದಜನಸಾಮಾನ್ಯರು ಪರದಾಡು ವಂತಾಗಿದೆ ಎಂದು ಮುಖಂಡರು ಹೇಳಿದರು.

# ರಸ್ತೆ ಕಾಮಗಾರಿ ಸ್ಥಳಕ್ಕೆ ಭೇಟಿನೀಡಿದ ಶಾಸಕರ ಸಹೋದರ ವೆಂಕಟೇಶ



**ಬಳ್ಳಾರಿ ಮಾ 18:** ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ ನೀಡುತ್ತಿರುವ ಜನಪ್ರಿಯ ನಾಯಕ ಹಾಗೂ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಶಾಸಕ ನಾಗೇಂದ್ರರವರ ಸಹೋದರ ಬಿ. ವೆಂಕಟೇಶ ಪ್ರಸಾದ್ ಅವರು ಮುಂಡರಗಿ ಗ್ರಾಮದಿಂದ ಮೀಂಚೇರಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಕಾಮಗಾರಿಯನ್ನು ಅಧಿಕಾರಿಗಳೊಂದಿಗೆ ಭೇಟಿ ನೀಡಿ ವೀಕ್ಷಣೆ ನಡೆಸಿದರು.

ಈ ಸಂದರ್ಭದಲ್ಲಿ ರಸ್ತೆ ಕಾಮಗಾರಿಯ ಪ್ರಗತಿ, ಗುಣಮಟ್ಟ ಹಾಗೂ ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವ ಕುರಿತು ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದರು. ಗ್ರಾಮಸ್ಥರಿಗೆ ಸುಗಮ ಸಂಚಾರ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ನಡೆಯಬಾರದು ಎಂದು ಅವರು ಖಡಕ್ ಎಚ್ಚರಿಕೆ ನೀಡಿದರು.

ರಸ್ತೆ ಅಭಿವೃದ್ಧಿಯಿಂದ ಸ್ಥಳೀಯ ಜನರಿಗೆ ಅನುಕೂಲವಾಗುವುದಲ್ಲದೆ, ಕೃಷಿ ಹಾಗೂ ವ್ಯಾಪಾರ ಚಟುವಟಿಕೆ ಗಳಿಗೆ ಸಹ ಸಹಾಯವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಪಕ್ಷದ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪ ಸ್ಥಿತರಿದ್ದು, ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ ಮನವಿ ಮಾಡಿದರು.

# ಗ್ರಾಮಗಳ ಅಭಿವೃದ್ಧಿಗೆ ನಿರಂತರ ಶ್ರಮಿಸುವೆ: ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ



**ಬೀದರ್, ಮಾ. 18:** ಗ್ರಾಮದ ಜನರು ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮ ಗಳನ್ನು ನಡೆಸಲು ಒಂದು ಸೂಕ್ತ ಸ್ಥಳದ ಅಗತ್ಯವಿತ್ತು. ಅದನ್ನು ಮನಗಂಡು ಇಲ್ಲಿ ಸಮುದಾಯ ಭವನ ನಿರ್ಮಾಣ ಮಾಡುವ ಕೆಲಸಕ್ಕೆ ಇಂದು ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಗ್ರಾಮಸ್ಥರ ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಿಗೆ ಈ ಸಮುದಾಯ ಭವನವು ಬಹಳ ಉಪಯುಕ್ತವಾಗಲಿದ್ದು, ಗ್ರಾಮದ ಅಭಿವೃದ್ಧಿಗೆ ಇದು ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ ಈ ಸಂದರ್ಭದಲ್ಲಿ ಗ್ರಾಮಸ್ಥರು ಕುರಿ ಮರಿ ಉಡುಗೊರೆಯಾಗಿ ನೀಡಿ, ಕಂಬಳಿಯಿಂದ ಸನ್ಮಾನಿಸಿ ಗೌರವಿಸಿ ದುದು ನನಗೆ ಅಪಾರ ಸಂತೋಷ ತಂದಿತು. ಈ ಭವನವು ಗ್ರಾಮಸ್ಥರ ಎಲ್ಲ ಕಾರ್ಯಕ್ರಮಗಳಿಗೆ ಉಪಯುಕ್ತ ವಾಗಿದ್ದು, ಗ್ರಾಮದಒಗ್ಗಟ್ಟನ್ನು ಮತ್ತಷ್ಟು ಬಲಪಡಿಸುತ್ತದೆ.

ಕಾಮಗಾರಿಯನ್ನು ಶೀಘ್ರವಾಗಿ ಹಾಗೂ ಉತ್ತಮ ಗುಣ ಮಟ್ಟದಲ್ಲಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದೇನೆ. ಈ ಸಮುದಾಯ ಭವನ ಗ್ರಾಮಾಭಿವೃದ್ಧಿಗೆ ಸಹಕಾರಿ ಯಾಗಲಿ ಮತ್ತು ಎಲ್ಲರಿಗೂ ಉಪಯೋಗವಾಗಲಿ ಎಂದು ಶ್ರೀ ಬೀರಲಿಂಗೇಶ್ವರ ದೇವರಲ್ಲಿ ಪ್ರಾರ್ಥಿ ಸುತ್ತೇನೆ. ಈ ಭವನವು ಗ್ರಾಮಸ್ಥರ ಎಲ್ಲ ಕಾರ್ಯಕ್ರಮಗಳಿಗೆ ಉಪಯುಕ್ತ ವಾಗಿದ್ದು, ಗ್ರಾಮದ ಒಗ್ಗಟ್ಟನ್ನು ಮತ್ತಷ್ಟು ಬಲಪಡಿಸುತ್ತದೆ. ನಮ್ಮ ಬೀದರ್ ದಕ್ಷಿಣ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ.

ರಸ್ತೆ, ಕುಡಿಯುವ ನೀರು, ವಿದ್ಯುತ್, ಆರೋಗ್ಯ ಹಾಗೂ ಶಿಕ್ಷಣ ದಂತಹ ಅಗತ್ಯ ಸೌಲಭ್ಯಗಳ ಜೊತೆಗೆ ಗ್ರಾಮಸ್ಥರ ಸಾಮಾಜಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಿಗೆ ಅನುಕೂಲವಾಗುವಂತೆ ಸಮುದಾಯ ಭವನಗಳ ನಿರ್ಮಾಣಕ್ಕೂ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ.

ಸಮುದಾಯ ಭವನಗಳು ಗ್ರಾಮಸ್ಥರ ಸಭೆಗಳು, ಧಾರ್ಮಿಕ ಕಾರ್ಯಕ್ರಮಗಳು, ಸಾಮಾಜಿಕ ಸಮಾರಂಭಗಳು ಹಾಗೂ ವಿವಿಧ ಜನಪರ ಚಟುವಟಿಕೆಗಳಿಗೆ ಒಂದು ಸಾಮಾನ್ಯ ವೇದಿಕೆಯಾಗಿ ಕಾಯ ನಿರ್ವಹಿಸುತ್ತವೆ. ಇದರಿಂದ ಗ್ರಾಮದಲ್ಲಿ ಒಗ್ಗಟ್ಟು, ಸಹಕಾರ ಮತ್ತು ಸಮಗ್ರ ಅಭಿವೃದ್ಧಿಗೆ ಉತ್ತೇಜನ ಸಿಗುತ್ತದೆ. ಗ್ರಾಮಗಳ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತೇನೆ ಎಂದರು.

# ಬಳ್ಳಾರಿ ಬಿಜೆಪಿ ಕೌಲ್‌ಬಜಾರ್ ಮಂಡಲ: ಖಜಾಂಚಿಯಾಗಿ ಅಭಿಲಾಶ್ ನಾಯ್ಡು, ಪ್ರಧಾನ ಕಾರ್ಯದರ್ಶಿ ಅವಿನಾಶ್ ನಾಯ್ಡು




**ಬಳ್ಳಾರಿ ಮಾ 18.** ಭಾರತೀಯ ಜನತಾ ಪಕ್ಷದ ಬಳ್ಳಾರಿ ಜಿಲ್ಲಾ ಕೌಲ್ ಬಜಾರ್ ಮಂಡಲದಲ್ಲಿ ನಡೆದ ಹೊಸ ನೇಮಕಾತಿಗಳು ಪಕ್ಷದ ಸಂಘಟನೆಗೆ ಹೊಸ ಚೈತನ್ಯ ತುಂಬುವಂತಾಗಿದ್ದು, ವಿಶೇಷವಾಗಿ ಖಜಾಂಚಿಯಾಗಿ ಆಯ್ಕೆಯಾದ ಜಿ. ಅಭಿಲಾಶ್ ನಾಯ್ಡು ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಜಿ. ಅವಿನಾಶ್ ನಾಯ್ಡು ಅವರ ನೇಮಕಕ್ಕೆ ಕಾರ್ಯಕರ್ತರು ವೈಭವಿಕವಾಗಿ ಸ್ವಾಗತ ಕೋರಿದ್ದಾರೆ.

ಮಂಡಲ ಅಧ್ಯಕ್ಷ ಎ. ನಾಗರಾಜ ರೆಡ್ಡಿ ಅವರು ಹೊರಡಿಸಿದ ಆದೇಶದಂತೆ ಮಂಡಲ ಮತ್ತು 7 ಮೋರ್ಚಾಗಳಿಗೆ ವಿವಿಧ ಹುದ್ದೆಗಳಿಗೆ ಕಾರ್ಯಕರ್ತರನ್ನು ನೇಮಕ ಮಾಡಲಾಗಿದ್ದು, ಈ ನೇಮಕಾತಿಗಳ ಮೂಲಕ ತಳಮಟ್ಟ ದಿಂದ ಸಂಘಟನೆಯನ್ನು ಬಲಪಡಿ ಸುವ ಮಹತ್ವದ ಹೆಜ್ಜೆ ಇಡಲಾಗಿದೆ.

ಪಕ್ಷದ ಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸುವ ಉದ್ದೇಶದಿಂದ ಕೈಗೊಂಡ ಈ ಕ್ರಮದಲ್ಲಿ ಮಹಿಳಾ ಮೋರ್ಚಾ ಅಧ್ಯಕ್ಷೆಯಾಗಿ ಲತಾ, ಎಸ್.ಸಿ ಮೋರ್ಚಾ ಅಧ್ಯಕ್ಷರಾಗಿ ಸುಂಕಣ್ಣ, ಎಸ್.ಟಿ ಮೋರ್ಚಾ ಅಧ್ಯಕ್ಷರಾಗಿ ರಾಜಶೇಖರ್, ಒಬಿಸಿ ಮೋರ್ಚಾ ಅಧ್ಯಕ್ಷರಾಗಿ ಆರ್. ಶೇಖಣ್ಣ, ರೈತ ಮೋರ್ಚಾ ಅಧ್ಯಕ್ಷರಾಗಿ ವೆಂಕಟೇಶ್, ಯುವ ಮೋರ್ಚಾ ಅಧ್ಯಕ್ಷರಾಗಿ ಬಟ್ಟಿ ಗಾದಿಲಿಂಗ ಹಾಗೂ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷರಾಗಿ ಮೊಹಮ್ಮದ್ ಗೌಸ್ ಅವರನ್ನು ನೇಮಕ ಮಾಡಲಾಗಿದೆ.

ಇದರ ಜೊತೆಗೆ ಮಂಡಲದ ಪ್ರಮುಖ ಹುದ್ದೆಗಳಿಗೂ ನೇಮಕಾತಿ ನಡೆಯಿದ್ದು, ಎ. ನಾಗರಾಜ ರೆಡ್ಡಿ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ. ಉಪಾಧ್ಯಕ್ಷರಾಗಿ ಕೊಂಡಿ ಮಲ್ಲಿ ಕಾರ್ಜುನ, ವೆಂಕಟೇಶ್ ಗುರುರಾಜ್, ರಾಮಚಂದ್ರ, ಹನುಮಂತ ರಾವ್ ಹಾಗೂ ಮೊಹಮ್ಮದ್ ಖದಿರ್ ಅವರನ್ನು ನೇಮಕ ಮಾಡಲಾಗಿದೆ. ಎಂ.ಪಿ. ರಾಜೇಶ್ ಹಾಗೂ ಜಿ. ಅವಿನಾಶ್ ನಾಯ್ಡು ಪ್ರಧಾನ ಕಾರ್ಯದರ್ಶಿ ಮೂರ್ತಿ, ವಿ. ಶ್ರೀಧರ್, ಯೇಸು, ನೀಲಕಂಠ ಆಚಾರ್ಯ, ಮಲೇಶ್ ಹಾಗೂ ಅನ್ನಕ್ಲರ ಕಾರ್ಯದರ್ಶಿಗಳಾಗಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

# ಕುಡಿಯವ ನೀರಿನ ಸಮಸ್ಯೆ ಇತ್ಯರ್ಥಕ್ಕೆ, ಕಂಟ್ರೋಲ್ ರೂಮ್ ಪ್ರಾರಂಭ: ಡಿಸಿ ನಿತೀಶ್ ಕೆ.



**ರಾಯಚೂರು, ಮಾ. 19:** ಜಿಲ್ಲೆಯಲ್ಲಿ ಈಗಾಗಲೇ ಆರಂಭ ವಾಗಿರುವ ಬೇಸಿಗೆ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ತುರ್ತಾಗಿ ಕುಡಿಯವ ನೀರಿನ ಸಮಸ್ಯೆಯ ಕುರಿತು ಸಾರ್ವಜನಿಕರು ಮಾಹಿತಿ ನೀಡಲು ಜಿಲ್ಲಾಧಿಕಾರಿಗಳ ಕಾರ್ಯಾ ಲಯ, ಜಿಲ್ಲಾ ಪಂಚಾಯತ್, ಜಿಲ್ಲೆಯ ಎಲ್ಲಾ ತಾಲೂಕು ತಹಶೀ ಲ್ದಾರ್ ಕಚೇರಿಗಳಲ್ಲಿ ಹಾಗೂ ತಾಲೂಕು ಪಂಚಾಯತ್ ಕಚೇರಿಗಳಲ್ಲಿ ಕಂಟ್ರೋಲ್ ರೂಮ್ ಪ್ರಾರಂಭಿಸಿದ್ದು, ಸಾರ್ವಜನಿಕರು ಈ ಸೌಲಭ್ಯವನ್ನು ಬಳಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಗಳಾದ ನಿತೀಶ್ ಕೆ. ಅವರು ಕೋರಲಾಗಿದೆ.


ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ: 08532–226383 ಅಥವಾ 1077 (ಜಿಲ್ಲಾಧಿಕಾರಿಗಳ ಕಾರ್ಯಾಲಯ ರಾಯಚೂರು), ಜಿಲ್ಲಾ ಪಂಚಾಯತ್ ರಾಯಚೂರು: 8971940129, ತಾಲೂಕು ಪಂಚಾಯತ್ ರಾಯ ಚೂರು: 9483203052, ತಾಲೂಕು ಪಂಚಾಯತ್ ಮಾನವಿ 99722 36690, 7022326090, 81053 68046, ತಾಲೂಕು ಪಂಚಾಯತ್ ಸಿಂಧನೂರು: 96113 66894, ತಾಲೂಕು ಪಂಚಾಯತ್ ಲಿಂಗಸೂಗೂರು: 9900577921, 9945226423, 9008727961, ತಾಲೂಕು ಪಂಚಾಯತ್ ದೇವದುರ್ಗ: 08531–260029, 9972353743, ತಾಲೂಕು ಪಂಚಾಯತ್ ಸಿರವಾರ್: 7022278013, 8748838861, 9632544321, ತಾಲೂಕು ಪಂಚಾಯತ್ ಮಸ್ಕಿ: 08537–295522, 08537–270122, ತಹಶೀಲ್ದಾರ ಕಾರ್ಯಾಲಯ ರಾಯಚೂರು: 08532–200772, ತಹಶೀಲ್ದಾರ ಕಾರ್ಯಾಲಯ ಮಾನವಿ: 08538–220239, ತಹಶೀಲ್ದಾರ ಕಾರ್ಯಾಲಯ ಸಿಂಧನೂರು: 9035640154, ತಹಶೀಲ್ದಾರ ಕಾರ್ಯಾಲಯ ಲಿಂಗಸೂಗೂರು: 08537–275247, ತಹಶೀಲ್ದಾರ ಕಾರ್ಯಾಲಯ ದೇವದುರ್ಗ: 08531–200117, ತಹಶೀಲ್ದಾರ ಕಾರ್ಯಾಲಯ ಸಿರವಾರ್: 08538–200082, ತಹಶೀಲ್ದಾರ ಕಾರ್ಯಾಲಯ ಮಸ್ಕಿ: 08537–295504 ಈ ಸಹಾಯವಾಣಿಗಳಿಗೆ ಕರೆ ಮಾಡಿ ಕುಡಿಯುವ ನೀರಿನ ಸಮಸ್ಯೆ ಕುರಿತು ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹದಗೆಟ್ಟ ಪಾರ್ಕಿಂಗ್ ವ್ಯವಸ್ಥೆ: ಸಾರ್ವಜನಿಕರ ಪರದಾಟ

**ರಾಯಚೂರು, ಮಾ. 18:** ನಗರದಲ್ಲಿ ಪಾರ್ಕಿಂಗ್ ಸಮಸ್ಯೆ ಗಂಭೀರವಾಗಿದೆ. ನಗರದ ವಿವಿಧ ರಸ್ತೆ ಬದಿ ಬಿಟ್ಟರೆ ಬೇರೆ ಕಡೆ ವಾಹನಗಳ ನಿಲುಗಡೆಗೆ ತಾಣಗಳಿಲ್ಲ. ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲ್ಲಿಸಿ ಸಂಚಾರ ದಟ್ಟಣೆ ಸೃಷ್ಟಿಸುವುದು ಕೂಡ ತಪ್ಪಿಲ್ಲ. ತರಕಾರಿ ಮಾರುಕಟ್ಟೆ, ಬಸ್ ನಿಲ್ದಾಣ, ಪ್ರಮುಖ ವೃತ್ತಗಳಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಪಾದಚಾರಿಗಳು ಹಾಗೂ ವಾಹನ ಸವಾರರಿಗೆ ಕಿರಿಕಿರಿಯಾಗಿದೆ.

ಮೂಲಸೌಕರ್ಯಗಳಿಲ್ಲದೇ ಸೊರಗಿರುವ ಜಿಲ್ಲಾ ಕೇಂದ್ರಕ್ಕೆ ಪಾರ್ಕಿಂಗ್ ಸಮಸ್ಯೆ ದೊಡ್ಡ ಮಟ್ಟದಲ್ಲೇ ಕಾಡುತ್ತಿದೆ. ನಗರ ಬೆಳೆದಂತೆ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಮಾರುಕಟ್ಟೆ ಮತ್ತು ಆಯಕಟ್ಟಿನ ಸ್ಥಳಗಳಲ್ಲಿ ಪಾರ್ಕಿಂಗ್ ನಿರ್ವಹಣೆ ನಡೆಯುತ್ತಿಲ್ಲ.

## ಕುವೈತ್ ಯುವರಾಜನ ಜೊತೆ ಪ್ರಧಾನಿ ಮೋದಿ ಮಾತುಕತೆ, ಪ್ರಾದೇಶಿಕ ಸ್ಥಿರತೆ, ಕರಾವಳಿ ಭದ್ರತೆಗೆ ಒತ್ತು



**ನವದೆಹಲಿ, ಮಾ.18:** ಪ್ರಧಾನಿ ನರೇಂದ್ರ ಮೋದಿ ಬುಧವಾರ ಶೇಖ್ ಸಬಾಹ್ ಅಲ್-ಖಾಲೆದ್ ಅಲ್-ಹಮದ್ ಅಲ್-ಮುಬಾರಕ್ ಅಲ್-ಸಬಾಹ್ ಅವರೊಂದಿಗೆ ಮಾತನಾಡಿ, ಪಶ್ಚಿಮ ಏಷ್ಯಾದಲ್ಲಿನ ವಿಕಸನಗೊಳ್ಳುತ್ತಿರುವ ಪರಿಸ್ಥಿತಿ ಮತ್ತು ಪ್ರಾದೇಶಿಕ ಭದ್ರತೆಗೆ ಅದರ ವಿಷಯಗಳ ಕುರಿತು ಚರ್ಚಿಸಿದರು. ಕುವೈತ್ ಕ್ರೌನ್ ಪ್ರಿನ್ಸ್ ಎಚ್.ಎಚ್. ಶೇಖ್ ಸಬಾಹ್ ಅಲ್-ಖಾಲೆದ್ ಅಲ್-ಹಮದ್ ಅಲ್-ಮುಬಾರಕ್ ಅಲ್-ಸಬಾಹ್ ಅವರೊಂದಿಗೆ ಮಾತನಾಡಿ, ಮುಂಬರುವ ಈದ್ ಹಬ್ಬದ ಶುಭಾಶಯಗಳನ್ನು ತಿಳಿಸಿದರು ಎಂದು ಮೋದಿ ಹೇಳಿದರು. ಪಶ್ಚಿಮ ಏಷ್ಯಾದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಎರಡೂ ಕಡೆಯವರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು ಮತ್ತು ಪರಿಸ್ಥಿತಿಯ ಬಗ್ಗೆ ಹಂಚಿಕೊಂಡ ಕಳವಳಗಳನ್ನು ವ್ಯಕ್ತಪಡಿಸಿದರು ಎಂದು ಅವರು ಹೇಳಿದರು. ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯ ಬಗ್ಗೆ ಭಾರತದ ದೃಢ ನಿಲುವನ್ನು ಪ್ರಧಾನಿ ಪುನರುಚ್ಚರಿಸಿದರು, ಕುವೈತ್ನ ಸಾರ್ವಭೌಮತ್ವದ ಮೇಲಿನ ದಾಳಿಯನ್ನು ಭಾರತ ಖಂಡಿಸುತ್ತದೆ ಎಂದು ಹೇಳಿದರು. ಹಾರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತ ಮತ್ತು ಮುಕ್ತ ಸಂಚಾರವನ್ನು ಖಚಿತಪಡಿಸಿಕೊಳ್ಳುವುದು ಪ್ರಮುಖ ಆದ್ಯತೆಯಾಗಿದೆ ಎಂದು ಅವರು ಈ ಪ್ರದೇಶದಲ್ಲಿ ಸಮುದ್ರ ಭದ್ರತೆಯ ಮಹತ್ವವನ್ನು ಒತ್ತಿ ಹೇಳಿದರು.

ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ನಿರಂತರ ರಾಜತಾಂತ್ರಿಕ ನಿಶ್ಚಿತಾರ್ಥವು ಅತ್ಯಗತ್ಯ ಎಂದು ನಾವು ಒಪ್ಪಿಕೊಂಡಿದ್ದೇವೆ" ಎಂದು ಮೋದಿ ಹೇಳಿದರು, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ನಡುವೆ ನಿರಂತರ ಸಂವಾದದ ಅಗತ್ಯವನ್ನು ಎತ್ತಿ ತೋರಿಸಿದರು. ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಹೆಚ್ಚಿನ ಸಂಖ್ಯೆಯ ಭಾರತೀಯ ಪ್ರಜೆಗಳಿಗೆ ಆತಿಥ್ಯ ವಹಿಸುವ ದೇಶವಾದ ಕುವೈತ್ನಲ್ಲಿರುವ ಭಾರತೀಯ ವಲಸಿಗ ಕಲ್ಯಾಣದ ಬಗ್ಗೆಯೂ ಸಂಭಾಷಣೆ ಚರ್ಚಿಸಲಾಯಿತು.

ಅವರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಾತ್ರಿಪಡಿಸುವಲ್ಲಿ ಕುವೈತ್ನ ನಿರಂತರ ಬೆಂಬಲಕ್ಕಾಗಿ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತ ಮತ್ತು ಕುವೈತ್ ವ್ಯಾಪಾರ, ಇಂಧನ ಸಹಕಾರ ಮತ್ತು ಜನರಿಂದ ಜನರಿಗೆ ಸಂಪರ್ಕದಲ್ಲಿ ಬೇರೂರಿರುವ ದೀರ್ಘಕಾಲದ ಸಂಬಂಧಗಳನ್ನು ಹಂಚಿಕೊಂಡಿವೆ. ಉಭಯ ನಾಯಕರ ನಡುವಿನ ಇತ್ತೀಚಿನ ಸಂವಾದವು ಪ್ರಾದೇಶಿಕ ಸೂಕ್ಷ್ಮತೆಗಳನ್ನು ಹೆಚ್ಚಿಸುವ ಸಮಯದಲ್ಲಿ ಬಂದಿದೆ, ಇದು ಎರಡೂ ರಾಷ್ಟ್ರಗಳು ಸ್ಥಿರತೆ, ಸಹಕಾರ ಮತ್ತು ಹಂಚಿಕೆಯ ಆರ್ಥಿಕ ಮತ್ತು ಕಾರ್ಯತಂತ್ರ ಹಿತಾಸಕ್ತಿಗಳ ರಕ್ಷಣೆಯ ಮೇಲೆ ನೀಡುವ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ.

## ಮಾತು ಕೇಳದ ಮಿತ್ರ ರಾಷ್ಟ್ರಗಳು ಸಂಪೂರ್ಣ ಮೂರ್ಖರು: ಟ್ರಂಪ್

**ನವದೆಹಲಿ, ಮಾ.18:** ಹಾರ್ಮುಜ್ ಜಲಸಂಧಿಗೆ ಯುದ್ಧನೌಕೆಗಳನ್ನು ಕಳುಹಿಸಲು ನಿರಾಕರಿಸಿ ದ್ದಕ್ಕಾಗಿ ನ್ಯಾಟೋ ಮಿತ್ರರಾಷ್ಟ್ರ ಗಳ ವಿರುದ್ಧ ತಮ್ಮ ಟೀಕೆ ಯನ್ನು ಮುಂದುವರೆಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, "ಆ ಎಲ್ಲಾ ಸಂಪೂರ್ಣ ಮೂರ್ಖರು" ಇರಾನ್ ಅನ್ನು 'ಭಯೋತ್ಪಾದನೆಯ ನಂಬರ್ ಒನ್ ರಾಷ್ಟ್ರ ಪ್ರಾಯೋಜಕ' ಎಂದು ಪರಿಗಣಿಸಲಾಗಿದೆ ಮತ್ತು ಅಮೆರಿಕ ಅವರನ್ನು ವ್ಯವಹಾರದಿಂದ ತ್ವರಿತವಾಗಿ ಹೊರಹಾಕುತ್ತಿದೆ ಎಂಬುದನ್ನು ನೆನಪಿನಲ್ಲಿಡಬೇಕು ಎಂದು ಹೇಳಿದರು. ಅಮೆರಿಕವು ಅದನ್ನು (ಜಲಸಂಧಿಯನ್ನು) ಬಳಸುವ ದೇಶಗಳಿಗೆ ಅವಕಾಶ ನೀಡಿದರೆ, "ಜಲಸಂಧಿ" ಎಂದು ಕರೆಯಲ್ಪಡುವದಕ್ಕೆ ಜವಾಬ್ದಾರರಾಗಿರಿ ಎಂದು ಅವರು ಹೇಳಿದರು.

ಹಾರ್ಮುಜ್ ಜಲಸಂಧಿಗೆ ಯುದ್ಧನೌಕೆಗಳನ್ನು ಕಳುಹಿಸಲು ತನ್ನ ನ್ಯಾಟೋ ಮಿತ್ರರಾಷ್ಟ್ರ ಗಳು ಮತ್ತು ಚೀನಾಕ್ಕೆ ಮಂಗಳವಾರ ಮನವಿ ಮಾಡಿದ ನಂತರ ಮತ್ತು ಅವರು ನಿರಾಕರಿಸಿದ ನಂತರ, ಟ್ರಂಪ್ ಮಿಲಿಟರಿ ಯಶಸ್ಸಿನಿಂದಾಗಿ' ಅಮೆರಿಕಕ್ಕೆ ಇನ್ನು ಮುಂದೆ ನ್ಯಾಟೋ ದೇಶಗಳ ಸಹಾಯದ ಅಗತ್ಯವಿಲ್ಲ ಅಥವಾ ಬಯಸುವುದಿಲ್ಲ ಎಂದು ಹೇಳಿದರು.

ನಾವು ಎಂದಿಗೂ ಮಾಡಲಿಲ್ಲ. ಅದೇ ರೀತಿ, ಜಪಾನ್, ಆಸ್ಟ್ರೇಲಿಯಾ ಅಥವಾ ದಕ್ಷಿಣ ಕೊರಿಯಾ.

ವಾಸ್ತವದಲ್ಲಿ, ವಿಶ್ವದ ಅತ್ಯಂತ ಶಕ್ತಿಶಾಲಿ ರಾಷ್ಟ್ರವಾದ ಅಮೆರಿಕದ ಅಧ್ಯಕ್ಷರಾಗಿ ಮಾತನಾಡುತ್ತಾ, ನಮಗೆ ಯಾರ ಸಹಾಯವೂ ಅಗತ್ಯವಿಲ್ಲ" ಎಂದು ಟ್ರಂಪ್ ಹೇಳಿದ್ದರು.

## ಇರಾನ್ ಯುದ್ಧ ಹೆಚ್ಚು ಕಾಲ ಉಳಿಯಲ್ಲ ಯಾವುದೇ ಕಾಲಮಿತಿ ನೀಡಲು ನಿರಾಕರಿಸಿದ ಟ್ರಂಪ್



**ವಾಷಿಂಗ್ಟನ್, ಮಾ.18:** ಇರಾನ್ ಜೊತೆಗಿನ ಯುದ್ಧ "ಹೆಚ್ಚು ಕಾಲ" ಉಳಿಯುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ, ಆದರೆ ಸ್ಪಷ್ಟ ಕಾಲಮಿತಿಯನ್ನು ನೀಡಿಲ್ಲ, ವಿಶೇಷವಾಗಿ ಟೆಹ್ರಾನ್ನ ತೀವ್ರ ಪ್ರತಿರೋಧದ ಹಿನ್ನೆಲೆಯಲ್ಲಿ ವಾಷಿಂಗ್ಟನ್ನ ಅಂತ್ಯದ ಬಗ್ಗೆ ದೀರ್ಘಕಾಲದ ಅನಿಶ್ಚಿತತೆಗಳನ್ನು ಬಹಿರಂಗಪಡಿಸಿದ್ದಾರೆ. ಶ್ವೇತಭವನದಲ್ಲಿ ಮಾತನಾಡಿದ ಟ್ರಂಪ್, ಸಂಘರ್ಷವನ್ನು ಸಂಕ್ಷಿಪ್ತ "ವಿಹಾರ" ಎಂದು ಬಣ್ಣಿಸಿದರು, ಇದು "ಒಂದೆರಡು ವಾರಗಳಲ್ಲಿ" ಕೊನೆಗೊಳ್ಳಬಹುದು ಎಂದು ಸೂಚಿಸಿದರು, ಆದರೂ ಅವರು ಈಗಾಗಲೇ ಕಳೆದ ಸಮಯವನ್ನು ಉಲ್ಲೇಖಿಸುತ್ತಿದ್ದಾರೆಯೇ ಅಥವಾ ಮುಂದೆ ಏನಿದೆ ಎಂಬುದು ಸ್ಪಷ್ಟವಾಗಿಲ್ಲ. ಯುಎಸ್ "ಇನ್ನೂ ಹೊರಡಲು ಸಿದ್ಧವಾಗಿಲ್ಲ" ಆದರೆ "ತುಂಬಾ ಹತ್ತಿರದ ಭವಿಷ್ಯದಲ್ಲಿ" ಹಿಂದೆ ಸರಿಯುತ್ತದೆ ಎಂದು ಅವರು ಹೇಳಿದರು. ಯುದ್ಧಾನಂತರದ ಯೋಜನೆಗಳ ಮೇಲೆ ಒತ್ತಡ ಹೇರಿದ ಟ್ರಂಪ್, ಸಂಘರ್ಷದ ನಂತರ ಇರಾನ್ "ಚೆನ್ನಾಗಿ ನಡೆಸುತ್ತಿದೆ" ಎಂದು ಖಚಿತಪಡಿಸಿಕೊಳ್ಳಲು ವಾಷಿಂಗ್ಟನ್ ಪ್ರಯತ್ನಿಸುತ್ತದೆ ಎಂದು ಹೇಳುವ ಮೂಲಕ ವಿಶಾಲ ರೂಪರೇಷೆಗಳನ್ನು ಮಾತ್ರ ನೀಡಿದರು.

ನ್ಯಾಟೋ ಬಗ್ಗೆ ತಮ್ಮ ಟೀಕೆಗಳನ್ನು ಪುನರುಚ್ಚರಿಸಿದ ಟ್ರಂಪ್, ಹಾರ್ಮುಜ್ ಜಲಸಂಧಿಯನ್ನು ಭದ್ರಪಡಿಸಿಕೊಳ್ಳಲು ಯುಎಸ್ ನೇತೃತ್ವದ ಪ್ರಯತ್ನವನ್ನು ಬೆಂಬಲಿಸಲು ನಿರಾಕರಿಸಿದ್ದಕ್ಕಾಗಿ ಮಿತ್ರರಾಷ್ಟ್ರಗಳನ್ನು ಮತ್ತೊಮ್ಮೆ ಖಂಡಿಸಿದರು, ಯುರೋಪಿಯನ್ ಹಿಂಜರಿಕೆಯನ್ನು "ಬಹಳ ಮೂರ್ಖತನದ ತಪ್ಪು" ಎಂದು ಕರೆದರು. ಬ್ರಿಟನ್ ಮತ್ತು ಫ್ರಾನ್ಸ್ ಅನ್ನು ಪ್ರತ್ಯೇಕವಾಗಿ ಉಲ್ಲೇಖಿಸುತ್ತಾ, ಅಮೆರಿಕ ಅಧ್ಯಕ್ಷರು ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್ "ಬೆಂಬಲ ನೀಡಿಲ್ಲ, ಮತ್ತು ಅದು ದೊಡ್ಡ ತಪ್ಪು ಎಂದು ನಾನು ಭಾವಿಸುತ್ತೇನೆ" ಎಂದು ಹೇಳಿದರು, ಆದರೆ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ಗೆ ಸಂಬಂಧಿಸಿದಂತೆ, ಅವರು "ಅವರು ಶೀಘ್ರದಲ್ಲೇ ಅಧಿಕಾರದಿಂದ ಹೊರಗುಳಿಯುತ್ತಾರೆ" ಎಂದು ಮಾತ್ರ ಹೇಳಿದರು. ಒಕ್ಕೂಟದ ಹಿಂದಿನ ಸಲಹೆಗಳ ಹೊರತಾಗಿಯೂ, ಪ್ಯಾರಿಸ್ ಮತ್ತು ಲಂಡನ್ ಎರಡೂ ಸಹಾಯ ಮಾಡಲು ಸಿದ್ಧವಾಗಿವೆ ಎಂದು ಸೋಮವಾರ ಅಮೆರಿಕದ ನಾಯಕ ಸೂಚಿಸಿದ್ದಾರೆ, ಜೊತೆಗೆ ಅವರು ಹೆಸರಿಸದ ಆದರೆ ಈಗಾಗಲೇ ಹಡಗಿನಲ್ಲಿವೆ ಎಂದು ಹೇಳಿದ ಇತರ ದೇಶಗಳು, ಟೆಹ್ರಾನ್ ಜೊತೆಗಿನ ಉದ್ವಿಗ್ನತೆ ಕಡಿಮೆಯಾದ ನಂತರವೇ ನೌಕಾ ಬೆಂಗಾವಲು ಕಾರ್ಯಾಚರಣೆಗಳನ್ನು ಪರಿಗಣಿಸಬಹುದು ಎಂದು ಫ್ರಾನ್ಸ್ ಹೇಳಿದೆ. ಯುದ್ಧ ಕಾರ್ಯಾಚರಣೆಗಳಿಗೆ ಸೇರುವುದನ್ನು ಯುಕೆ ಸಂಪೂರ್ಣವಾಗಿ ತಳ್ಳಿಹಾಕಿದೆ, ವಾಷಿಂಗ್ಟನ್ನ ಇತರ ಏಷ್ಯನ್ ಮತ್ತು ಯುರೋಪಿಯನ್ ಮಿತ್ರರಾಷ್ಟ್ರಗಳು ಜಾಗರೂಕರಾಗಿವೆ.

ಇದಕ್ಕೆ ವ್ಯತಿರಿಕ್ತವಾಗಿ, ಸೌದಿ ಅರೇಬಿಯಾ, ಯುಎಇ, ಕತಾರ್ ಮತ್ತು ಬಹ್ರೇನ್ ಸೇರಿದಂತೆ ಗಲ್ಫ್ ಮಿತ್ರರಾಷ್ಟ್ರಗಳ ರಕ್ಷಣಾತ್ಮಕ ಪ್ರಯತ್ನಗಳಿಗಾಗಿ ಟ್ರಂಪ್ ಹೊಗಳಿದರು, ಆದರೂ ಯಾರೂ ನೌಕಾ ಕಾರ್ಯಾಚರಣೆಗೆ ಸಾರ್ವಜನಿಕವಾಗಿ ಬದ್ಧವಾಗಿಲ್ಲ.

## ದಕ್ಷಿಣ ಟರ್ಕಿಗೆ ನ್ಯಾಟೋ ಹಡಗುಗಳ ನಿಯೋಜನೆ: ಮಧ್ಯಪ್ರಾಚ್ಯ ಕದನ ವಿರಾಮಕ್ಕೆ ಚೀನಾ ಒತ್ತಾಯ



**ಬೀಜಿಂಗ್, ಮಾ.18:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಕೊನೆಗೊಳಿಸಲು ಮತ್ತು ಕದನ ವಿರಾಮಕ್ಕೆ ಒತ್ತಾಯಿಸಲು ತನ್ನ ಮಧ್ಯಸ್ಥಿಕೆ ಪ್ರಯತ್ನಗಳನ್ನು ಮುಂದುವರಿಸುವುದಾಗಿ ಚೀನಾ ಬುಧವಾರ ಹೇಳಿದೆ, ಏಕೆಂದರೆ ಹೊಸ ಮಿಲಿಟರಿ ಬೆಳವಣಿಗೆಗಳು ಮತ್ತು ಈ ಪ್ರದೇಶದಲ್ಲಿ ಪರಮಾಣು ಸುರಕ್ಷತೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳೊಂದಿಗೆ ಉದ್ವಿಗ್ನತೆಗಳು ಹೆಚ್ಚಾಗುತ್ತಿವೆ. ಚೀನಾದ ವಿದೇಶಾಂಗ ಸಚಿವಾಲಯದ ಹೇಳಿಕೆಯ ಪ್ರಕಾರ, ವಿದೇಶಾಂಗ ಸಚಿವ ವಾಂಗ್ ಯಿ ಯುದ್ಧ ಎಂದಿಗೂ ಸಂಭವಿಸಬಾರದಿತ್ತು ಮತ್ತು ಅದರ ಮುಂದುವರಿಕೆಗೆ ಯಾವುದೇ ಸಮರ್ಥನೆ ಇಲ್ಲ ಎಂದು ಹೇಳಿದರು.

**ಉಪಗ್ರಹ ಚಿತ್ರಣ ಹಂಚಿಕೆಯನ್ನು ಕ್ರೆಮ್ಲಿನ್ ತಳ್ಳಿಹಾಕಿದೆ:**

ಏತನ್ಮಧ್ಯೆ, ರಷ್ಯಾ ಇರಾನ್ನೊಂದಿಗೆ ಉಪಗ್ರಹ ಚಿತ್ರಣ ಮತ್ತು ಸುಧಾರಿತ ಡ್ರೋನ್ ತಂತ್ರಜ್ಞಾನವನ್ನು ಹಂಚಿಕೊಳ್ಳುತ್ತಿದೆ ಎಂದು ಆರೋಪಿಸಿ ದಿ ವಾಲ್ ಸ್ಟ್ರೀಟ್ ಜರ್ನಲ್ನ ವರದಿಯನ್ನು ಕ್ರೆಮ್ಲಿನ್ ತಳ್ಳಿಹಾಕಿದೆ, ಇದನ್ನು "ನಕಲಿ ಸುದ್ದಿ" ಎಂದು ಕರೆದಿದೆ. ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಹೇಳಿಕೆಗಳ ಬಗ್ಗೆ ಕೇಳಿದಾಗ ವರದಿ ನಿಖರವಾಗಿಲ್ಲ ಎಂದು ಹೇಳಿದರು. ಈ ವಿಷಯದ ಬಗ್ಗೆ ತಿಳಿದಿರುವ ಮೂಲಗಳನ್ನು ಉಲ್ಲೇಖಿಸಿ, ರಷ್ಯಾ ಇರಾನ್ನೊಂದಿಗೆ ಗುಪ್ತಚರ ಹಂಚಿಕೆ ಮತ್ತು ಮಿಲಿಟರಿ ಸಹಕಾರವನ್ನು ವಿಸ್ತರಿಸಿದೆ ಎಂದು ಪತ್ರಿಕೆ ವರದಿ ಮಾಡಿತ್ತು, ಇದರಲ್ಲಿ ಟೆಹ್ರಾನ್ ಈ ಪ್ರದೇಶದಲ್ಲಿ ಯುಎಸ್ ಪಡೆಗಳನ್ನು ಗುರಿಯಾಗಿಸಲು ಸಹಾಯ ಮಾಡಲು ಉಪಗ್ರಹ ಚಿತ್ರಣ ಮತ್ತು ಡ್ರೋನ್ ತಂತ್ರಜ್ಞಾನವನ್ನು ಒದಗಿಸುವುದು ಸೇರಿದೆ ಎಂದು ಪತ್ರಿಕೆ ವರದಿ ಮಾಡಿದೆ.

**ನ್ಯಾಟೋ ಪೇಟ್ರಿಯಾಟ್ ವಾಯು ರಕ್ಷಣಾ ವ್ಯವಸ್ಥೆಯನ್ನು ನಿಯೋಜಿಸುತ್ತದೆ:**


ಬೆಳೆಯುತ್ತಿರುವ ಭದ್ರತಾ ಕಳವಳಗಳ ನಡುವೆ, ದಕ್ಷಿಣ ಟರ್ಕಿಗೆ ಹೆಚ್ಚುವರಿ ಯುಎಸ್ ಪೇಟ್ರಿಯಾಟ್ ವಾಯುರಕ್ಷಣಾ ವ್ಯವಸ್ಥೆಯನ್ನು ನಿಯೋಜಿಸುವುದಾಗಿ ನ್ಯಾಟೋ ಹೇಳಿದೆ. ಯುಎಸ್ ಮತ್ತು ಮಿತ್ರಪಕ್ಷಗಳ ಸಿಬ್ಬಂದಿ ನೆಲೆಸಿರುವ ಇನ್ಸಿರ್ಲಿಕ್ ವಾಯುನೆಲೆಯ ನೆಲೆಯಾಗಿರುವ ಅದಾನಾ ಪ್ರಾಂತ್ಯದಲ್ಲಿ ಈ ವ್ಯವಸ್ಥೆಯನ್ನು ನಿಯೋಜಿಸಲಾಗುವುದು ಎಂದು ಟರ್ಕಿಶ್ ರಕ್ಷಣಾ ಸಚಿವಾಲಯ ತಿಳಿಸಿದೆ.

ಇರಾನ್ ಯುದ್ಧಕ್ಕೆ ಸಂಬಂಧಿಸಿದ ಕ್ಷಿಪಣಿ ಬೆದರಿಕೆಗಳ ವಿರುದ್ಧ ರಕ್ಷಣೆಯನ್ನು ಬಲಪಡಿಸುವ ಪ್ರಯತ್ನಗಳ ಭಾಗವಾಗಿ ಈ ನಿಯೋಜನೆ ಇದೆ. "ರಾಷ್ಟ್ರೀಯ ಮಟ್ಟದ ಕ್ರಮಗಳ ಜೊತೆಗೆ, ಅಸ್ತಿತ್ವದಲ್ಲಿರುವ ಸ್ಪ್ಯಾನಿಷ್ ಪೇಟ್ರಿಯಾಟ್ ವ್ಯವಸ್ಥೆಯ ಜೊತೆಗೆ, ಅದಾನಾದಲ್ಲಿ ಮತ್ತೊಂದು ಪೇಟ್ರಿಯಾಟ್ ವ್ಯವಸ್ಥೆಯನ್ನು ನಿಯೋಜಿಸಲಾಗುತ್ತಿದೆ" ಎಂದು ಸಚಿವಾಲಯ ಹೇಳಿದೆ. ವಾಯು ರಕ್ಷಣೆಯನ್ನು ಮತ್ತಷ್ಟು ಹೆಚ್ಚಿಸಲು ನ್ಯಾಟೋ ಕಳೆದ ವಾರ ಆಗ್ನೇಯ ಪ್ರಾಂತ್ಯದ ಮಲಾತ್ಯದಲ್ಲಿ ನ್ಯಾಟೋ ರಾಡಾರ್ ನೆಲೆಯ ಬಳಿ ಪೇಟ್ರಿಯಾಟ್ ವ್ಯವಸ್ಥೆಯನ್ನು ನಿಯೋಜಿಸಿದೆ ಎಂದು ಟರ್ಕಿ ಹೇಳಿದೆ. ನ್ಯಾಟೋದ ಎರಡನೇ ಅತಿದೊಡ್ಡ ಸೈನ್ಯವನ್ನು ಹೊಂದಿರುವ ಮತ್ತು ಇರಾನ್ಜೊತೆ ಗಡಿಯನ್ನು ಹಂಚಿಕೊಂಡಿರುವ ಅಂಕಾರಾ, ಸಂಘರ್ಷ ಪ್ರಾರಂಭವಾದಾಗಿನಿಂದ



ಮೊರಾಕೊವನ್ನು ಆಫ್ರಿಕಾ ಕಪ್ ಆಫ್ ನೇಷನ್ಸ್ ಚಾಂಪಿಯನ್ ಎಂದು ಘೋಷಿಸಲಾಯಿತು ಮತ್ತು ಫೈನಲ್ ಫಲಿತಾಂಶದ ವಿರುದ್ಧದ ಮೇಲ್ಮನವಿಯನ್ನು ಆಫ್ರಿಕನ್ ಫುಟ್ಬಾಲ್ ಒಕ್ಕೂಟ ಮಂಗಳವಾರ ಎತ್ತಿಹಿಡಿದ ನಂತರ ಸೆನೆಗಲ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು, ಮೊರಾಕೊ 3-0 ಅಂತರದಿಂದ ಜಯ ಸಾಧಿಸಿತು.

## ಬಾಂಗ್ಲಾದೇಶ: ನೀಲಸಾಗರ್ ಎಕ್ಸ್‌ಪ್ರೆಸ್‌ನ ಒಂಬತ್ತು ಬೋಗಿಗಳು ಹಳಿತಪ್ಪಿ, ಕನಿಷ್ಠ 40 ಜನರಿಗೆ ಗಾಯ



**ರಾಜ್ಶಾಹಿ, ಮಾ.18:** ಬುಧವಾರ ರಾಜ್ಶಾಹಿ ಜಿಲ್ಲೆಯಲ್ಲಿ ನೀಲಸಾಗರ್ ಎಕ್ಸ್‌ಪ್ರೆಸ್‌ನ ಒಂಬತ್ತು ಬೋಗಿಗಳು ಹಳಿತಪ್ಪಿದಾಗ ಕನಿಷ್ಠ 40 ಜನರು ಗಾಯಗೊಂಡರು ಮತ್ತು ಉತ್ತರ ಬಾಂಗ್ಲಾದೇಶದ ಪ್ರಮುಖ ಮಾರ್ಗಗಳಲ್ಲಿ ರೈಲು ಸೇವೆಗಳು ಅಸ್ತವ್ಯಸ್ತಗೊಂಡವು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅದಮ್ದಿಘಿ ಉಪಜಿಲಾದ ಬೊಗುರಾದ ಸಂತಹಾರ್ ಮತ್ತು ಜಾಯ್ಪುರ್ಹತ್‌ನ ಅಕ್ಕೆಲ್‌ಪುರ ನಡುವಿನ ತಿಲಕ್‌ಪುರ ನಿಲ್ದಾಣದ ಬಳಿ ಸಂಭವಿಸಿದ ಅಪಘಾತದಲ್ಲಿ 40 ರಿಂದ 45 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ, ಕೆಲವು ವರದಿಗಳ ಪ್ರಕಾರ ಈ ಸಂಖ್ಯೆ 100 ಮೀರಬಹುದು ಎಂದು ಸ್ಥಳೀಯ ಮಾಧ್ಯಮಗಳು ಸೂಚಿಸಿವೆ. ಢಾಕಾಗೆ ತೆರಳುತ್ತಿದ್ದ ರೈಲು ಚಿಲಹತಿ ಕಡೆಗೆ ಪ್ರಯಾಣಿಸುತ್ತಿತ್ತು, ಹಲವಾರು ಬೋಗಿಗಳೊಂದಿಗೆ ಹಳಿ ತಪ್ಪಿತು, ಇದನ್ನು ಪ್ರತ್ಯಕ್ಷದರ್ಶಿಗಳು ತೀವ್ರ ಅಪಘಾತ ಎಂದು ಬಣ್ಣಿಸಿದ್ದಾರೆ. ಪ್ರತ್ಯಕ್ಷದರ್ಶಿಗಳ ವರದಿಗಳ ಪ್ರಕಾರ, ಘಟನೆ ನಡೆಯುತ್ತಿದ್ದಂತೆ ಪ್ರಯಾಣಿಕರು ಭಾವಣಿಯಿಂದ ಸೇರಿದಂತೆ ರೈಲಿನಿಂದ ಹಾರಿದರು.

## ಅಮೆರಿಕ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ದಳದ ನಿರ್ದೇಶಕ ಕೆಂಟ್ ರಾಜೀನಾಮೆ



**ವಾಷಿಂಗ್ಟನ್, ಮಾ.18:** ಅಮೆರಿಕದ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ (ಎನ್ಸಿಟಿಸಿ) ನಿರ್ದೇಶಕ ಜೋ ಕೆಂಟ್ ಅವರು ಇರಾನ್ ಜೊತೆಗಿನ ಯುದ್ಧಕ್ಕೆ ವಿರೋಧ ವ್ಯಕ್ತಪಡಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇರಾನ್‌ನಿಂದ ಅಮೆರಿಕಕ್ಕೆ ಯಾವುದೇ ತಕ್ಷಣದ ಅಪಾಯವಿರಲಿಲ್ಲ. ಇಸ್ರೇಲ್‌ನ ಒತ್ತಡದಿಂದಾಗಿ ಟ್ರಂಪ್ ಈ ಯುದ್ಧವನ್ನು ಪ್ರಾರಂಭಿಸಿದ್ದಾರೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತನ್ನ ಆತ್ಮ ಸಾಕ್ಷಿಗೆ ವಿರುದ್ಧವಾಗಿ ಈ ಯುದ್ಧವನ್ನು ಬೆಂಬಲಿಸಲು ಸಾಧ್ಯವಿಲ್ಲ ಎಂದು ತಿಳಿಸಿರುವ ಜೋ ಕೆಂಟ್, ಮಂಗಳವಾರ ತಮ್ಮ ರಾಜೀನಾಮೆ ಪತ್ರವನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸಲ್ಲಿಸಿದ್ದಾರೆ. ಅಮೆರಿಕದ ಪ್ರಮುಖ ಗುಪ್ತಚರ ಸಂಸ್ಥೆಯ ಮುಖ್ಯಸ್ಥರೊಬ್ಬರು ಯುದ್ಧದ ನೀತಿಯನ್ನು ವಿರೋಧಿಸಿ ಅಧಿಕಾರದಿಂದ ಕೆಳಗಿಳಿದಿರುವುದು ಈಗ ಜಾಗತಿಕ ಚರ್ಚೆಯ ವಿಷಯವಾಗಿದೆ. ಇದು ಡೊನಾಲ್ಡ್ ಟ್ರಂಪ್‌ಗೆ ತೀವ್ರ ಮುಖಭಂಗ ಉಂಟು ಮಾಡಿದೆ ಎಂದು ಕೆಲ ವರದಿಗಳು ಹೇಳಿವೆ.

ಜೋ ಕೆಂಟ್ ತಮ್ಮ ರಾಜೀನಾಮೆ ಪತ್ರದ ಪ್ರತಿಯನ್ನು ಮಂಗಳವಾರ ಸಾಮಾಜಿಕ ಮಾಧ್ಯಮ ವೇದಿಕೆಯಾದ ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ. ಟ್ರಂಪ್ ಅವರನ್ನು ಉದ್ದೇಶಿಸಿ ಬರೆದ ಈ ಪತ್ರದಲ್ಲಿ, ಇರಾನ್ ವಿರುದ್ಧದ ಯುದ್ಧದ ಬಗ್ಗೆ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಯುದ್ಧವು ನೈತಿಕವಾಗಿ ಮತ್ತು ಕಾರ್ಯತಂತ್ರದ ದೃಷ್ಟಿಯಿಂದ ತಪ್ಪು ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಇರಾನ್ ಜೊತೆಗಿನ ಯುದ್ಧ ನನ್ನ ಆತ್ಮಸಾಕ್ಷಿ ಒಪ್ಪುವುದಿಲ್ಲ. ಇರಾನ್ನಿಂದ ನಮಗೆ ತಕ್ಷಣಕ್ಕೆ ಯಾವುದೇ ಬೆದರಿಕೆ ಇರಲಿಲ್ಲ. ಇಸ್ರೇಲ್ನ ಒತ್ತಡಕ್ಕೆ ಮಣಿದು ಈ ಯುದ್ಧ ಪ್ರಾರಂಭಿಸಲಾಗಿದೆ ಎಂದಿದ್ದಾರೆ.

ಜೋ ಕೆಂಟ್ (45 ವರ್ಷ) ಅವರು ಈ ಹಿಂದೆ ರಾಜಕೀಯ ಅಭ್ಯರ್ಥಿಯಾಗಿದ್ದವರು ಮತ್ತು ತೀವ್ರ ಬಲಪಂಥೀಯ ಗುಂಪುಗಳೊಂದಿಗೆ ಸಂಪರ್ಕ ಹೊಂದಿದ್ದಕ್ಕಾಗಿ ಟೀಕೆಗಳನ್ನು ಎದುರಿಸಿದವರು. ಸೇನೆಯಲ್ಲಿ ಗ್ರೀನ್ ಬೆರೆಟ್ ಆಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರುವ ಅವರು, 2022 ಮತ್ತು 2024ರಲ್ಲಿ ವಾಷಿಂಗ್ಟನ್ ರಾಜ್ಯದಿಂದ ಕಾಂಗ್ರೆಸ್ಗೆ ಸ್ಪರ್ಧಿಸಿ ಸೋತಿದ್ದರು. ಅವರ ಬಲಪಂಥೀಯ ಒಲವು ಮತ್ತು ಕೆಲವು ವಿವಾದಾತ್ಮಕ ಗುಂಪುಗಳೊಂದಿಗಿನ ಸಂಬಂಧವು ಅವರ ರಾಜಕೀಯ ಜೀವನದಲ್ಲಿ ಸದಾ ಚರ್ಚೆಯ ವಿಷಯವಾಗಿತ್ತು.

ಅಮೆರಿಕ ಸೇನೆಯ ವಿಶೇಷ ಪಡೆಗಳ ಮಾಜಿ ಸೈನಿಕರಾಗಿರುವ ಕೆಂಟ್, ಇರಾಕ್ ಯುದ್ಧ ಸೇರಿದಂತೆ ಒಟ್ಟು 11 ಬಾರಿ ಸಕ್ರಿಯ ಯುದ್ಧ ಭೂಮಿಗಳಲ್ಲಿ ಕೆಲಸ ಮಾಡಿದ್ದಾರೆ. ಸುಮಾರು 20 ವರ್ಷಗಳ ಕಾಲ ಸೈನ್ಯದಲ್ಲಿದ್ದ ಅವರು ಚೀಫ್ ವಾರಂಟ್ ಆಫೀಸರ್ ಆಗಿ ನಿವೃತ್ತರಾದರು. ಇರಾಕ್ ಮಾತ್ರವಲ್ಲದೆ ಯೆಮನ್ ಮತ್ತು ಉತ್ತರ ಆಫ್ರಿಕಾದಲ್ಲೂ ಅವರು ಕಾರ್ಯಾಚರಣೆ ನಡೆಸಿದ್ದಾರೆ. ಸೈನ್ಯದಿಂದ ನಿವೃತ್ತರಾದ ನಂತರ, ಅವರು ಸಿಐಎನಲ್ಲಿ ಪ್ಯಾರಾಮಿಲಿಟರಿ ಅಧಿಕಾರಿಯಾಗಿ ಕೆಲಸ ಮಾಡಿದ್ದರು.

ಕೆಂಟ್ ಅವರ ಮೊದಲ ಪತ್ನಿ ಶಾನನ್ ಕೆಂಟ್ ಅಮೆರಿಕ ನೌಕಾಪಡೆಯ ಕ್ರಿಪ್ಟೋಲಾಜಿಕ್ ಟೆಕ್ನಿಷಿಯನ್ ಆಗಿದ್ದರು. ಅವರು 2019ರಲ್ಲಿ ಸಿರಿಯಾದ ಮನ್ಬಿಜ್‌ನಲ್ಲಿ ನಡೆದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ ಸಾವನ್ನಪ್ಪಿದರು. ಶಾನನ್ ಅವರು ಇಬ್ಬರು ಮಕ್ಕಳನ್ನು ಬಿಟ್ಟು ಅಗಲಿದರು. ಈ ಘಟನೆಯು ಜೋ ಕೆಂಟ್ ಅವರ ಜೀವನದ ಮೇಲೆ ಆಳವಾದ ಪ್ರಭಾವ ಬೀರಿದ್ದು, ಅವರು ಇರಾನ್ ವಿರುದ್ಧದ ಯುದ್ಧವನ್ನು ವಿರೋಧಿಸಿ ರಾಜೀನಾಮೆ ನೀಡಲು ಒಂದು ಮುಖ್ಯ ಕಾರಣ ಎನ್ನಲಾಗುತ್ತಿದೆ.

## ದುಬಾಯಿ-ಯುಎಇ ; ಸಂಕಷ್ಟದ ವೇಳೆ ಪ್ರವಾಸಿಗರಿಗೆ ಆಪದ್ಬಾಂಧವನಾದ 'ಕನ್ನಡಿಗಾಸ್ ಹೆಲ್ಪ್ ಲೈನ್'

### ನಮ್ಮಲ್ಲಿನ ಕೋಮು ಸೌಹಾರ್ದತೆ ತಾಯ್ನಾಡಿಗೂ ಹರಡಲಿ : ಡಾ। ರೊನಾಲ್ಡ್ ಕೊಲಾಸೋ



**ಮುಂಬಯಿ, ಮಾ.18:** 'ಕನ್ನಡಿಗಾಸ್ ಹೆಲ್ಪ್ ಲೈನ್'ನ ಸೇವೆ, ಸಾಂಘಿಕತೆ ಮತ್ತು ಐಕ್ಯತೆಯ ಮನೋಭಾವ ಕೇವಲ ಸಂಕಷ್ಟದ ಸಮಯಕ್ಕೆ ಮಾತ್ರ ಸೀಮಿತವಾಗಿರದೆ, ನಿರಂತರವಾಗಿ ಹಾಗೂ ಉತ್ತಮ ಮಾದರಿಯಾಗಿ ಮುಂದುವರೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು. ಅಲ್ಲದೇ ರಾಷ್ಟ್ರೀಯ ಹಾಗೂ ರಾಜ್ಯೋತ್ಸವ ಸಂಭ್ರಮವನ್ನೂ ಈ ನಾಡಿನಲ್ಲಿ ಎಲ್ಲರೂ ಜೊತೆಯಾಗಿಯೇ ಆಚರಿಸೋಣ ಎಂದು ಅನಿವಾಸಿ ಭಾರತೀಯ ಪ್ರತಿಷ್ಠಿತ ಉದ್ಯಮಿ ಡಾ। ರೊನಾಲ್ಡ್ ಕೊಲಾಸೋ ಕರೆಯಿತ್ತರು.

ಇತ್ತೀಚೆಗೆ ತಮ್ಮ ದುಬಾಯಿಯಲ್ಲಿನ ನಿವಾಸದಲ್ಲಿ ಆಯೋಜಿಸಿದ್ದ 'ಇಫ್ತಾರ್ ಸೌಹಾರ್ದ ಕೂಟ'ದಲ್ಲಿ ಕುಟುಂಬ ಸಮೇತರಾಗಿ ಬಂದ ಎಲ್ಲಾ ಹೆಲ್ಪ್‌ಲೈನ್ ತಂಡದ ಸದಸ್ಯರಿಗೆ ಅವರ ನಿಸ್ವಾರ್ಥ ಸೇವೆಗೆ ಅಭಿವಂದಿಸಿ ಮಾತನಾಡಿದ ಡಾ। ಕೊಲಾಸೋ, ಈ ಸೇವೆಯು ಸೌಹಾರ್ದತೆಯ ಸಂದೇಶ ಸಾರಿದ ಮಾನವೀಯತಾ ಧರ್ಮಕ್ಕೆ ಪೂರಕವಾದುದು. ನಾವು ಪ್ರಾಂತ್ಯ, ಜಿಲ್ಲೆ, ಭಾಷೆ, ವರ್ಗ, ಹುದ್ದೆ, ಜಾತಿ, ಧರ್ಮ ಅವನ್ನೆಲ್ಲಾ ಮೀರಿ 'ಕನ್ನಡಿಗಾಸ್ ಹೆಲ್ಪ್ ಲೈನ್'ತಂಡ ಒಗ್ಗೂಡಿ ಸಲ್ಲಿಸಿದ ಸೇವೆಯಿಂದ ಉತ್ತಮ ಕೋಮು ಸೌಹಾರ್ದತೆಯ ಸಂದೇಶವಾಗಿದ್ದು ಇದು ನಮ್ಮೆಲ್ಲರ ತಾಯ್ನಾಡಿಗೂ ಪಸರಿಸಲಿ, ಅಲ್ಲಿಯೂ ಸಾಮರಸ್ಯ, ಸಮಾನತೆಯ ಬಾಳು ಬೆಳಗಿ, ಆರ್ಥಿಕ ಹಾಗೂ ಸರ್ವತೋಮುಖ ಅಭಿವೃದ್ಧಿಗೂ ಇದು ಪೂರಕವಾಗಲಿ ಎಂದು ರೊನಾಲ್ಡ್ ಕೊಲಾಸೋ ಆಶಿಸಿದರು.

ಪ್ರತಿಷ್ಠಿತ ಅನಿವಾಸಿ ಉದ್ಯಮಿ ಡಾ। ರೊನಾಲ್ಡ್ ಕೊಲಾಸೋ ನೇತೃತ್ವದಲ್ಲಿ ಹಿದಾಯತ್ ಅಡ್ಡೂರು ಅವರ ಸಂಯೋಜನೆಯಲ್ಲಿ ಯುಎಇ ಅಲ್ಲಿರುವ ಕನ್ನಡಿಗರ 30ಕ್ಕೂ ಹೆಚ್ಚಿನ ಸಂಘಟನೆಗಳನ್ನು ಒಟ್ಟುಗೂಡಿಸಿ ಕೊಂಡು 'ಕನ್ನಡಿಗಾಸ್ ಹೆಲ್ಪ್ ಲೈನ್' ತಂಡವು ಸಂಕಷ್ಟಕ್ಕೆ ಸಿಲುಕಿರುವ ಪ್ರವಾಸಿ ಕನ್ನಡಿಗರನ್ನು, ಅನಾರೋಗ್ಯಕ್ಕೀಡಾದ, ಹಾಗೂ ಊಟ, ವಸತಿ ಇಲ್ಲದವರನ್ನು ಭೇಟಿ ಮಾಡಿ, ನೆರವಿನ ಹಸ್ತವನ್ನು ನೀಡುವ ಮೂಲಕ ಇಲ್ಲಿನ ಅನಿವಾಸಿ ಭಾರತೀಯರಿಂದ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಕೆಹೆಚ್‌ಎಲ್‌ನ ಹಗಲಿರುಳ ಕಾರ್ಯನಿರ್ವಹಣೆಗೆ ಅನಿವಾಸಿಗರು ಮೆಚ್ಚುಗೆ ವ್ಯಕ್ತಪಡಿಸಿದರು.

**ಹಗಲಿರುಳು 'ಕನ್ನಡಿಗಾಸ್ ಹೆಲ್ಪ್ ಲೈನ್' ಸೇವೆ ಸಲ್ಲಿಸಿದೆ: ಹಿದಾಯತ್ ಅಡ್ಡೂರು**

ಸೇವೆಯ ಬಗ್ಗೆ ಮಾಧ್ಯಮದ ಜೊತೆ 'ಕನ್ನಡಿಗಾಸ್ ಹೆಲ್ಪ್ ಲೈನ್' ಸಂಯೋಜಕ ಹಿದಾಯತ್ ಅಡ್ಡೂರು, ಯುಎಇಯಲ್ಲಿ ತಾಯ್ನಾಡಿಗೆ ತೆರಳಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕಿದ್ದ 630ಕ್ಕೂ ಹೆಚ್ಚು ಜನರಿಗೆ ವಿಮಾನ ಪ್ರಯಾಣದ ವ್ಯವಸ್ಥೆಯನ್ನು ಕಲ್ಪಿಸಿ, ಸುರಕ್ಷಿತವಾಗಿ ತಾಯ್ನಾಡು ಸೇರುವಂತೆ ಮಾಡಲಾಗಿದೆ ಎಂದಿದ್ದಾರೆ.

ಸಂಕಷ್ಟದ ವೇಳೆ ತುರ್ತುಸೇವೆ ಅವಶ್ಯಕತೆ ಇರುವ ವೃದ್ಧರು, ಗರ್ಭಿಣಿಯರು, ಅನಾರೋಗ್ಯದಿಂದಿರುವವರು, ಇಂತಹ ಇಲ್ಲಿರುವ ಜನರನ್ನು ತಾಯ್ನಾಡಿಗೆ ಕಳುಹಿಸಲು 180 ಆಸನಗಳಿರುವ ವಿಶೇಷ ವಿಮಾನ ವ್ಯವಸ್ಥೆ ಮಾಡಲು ಸಂಪೂರ್ಣ ಮೊತ್ತದ ಹಣವನ್ನು ನೀಡುವುದಾಗಿ ಕೂಡ, ಡಾ। ರೊನಾಲ್ಡ್ ಕೊಲಾಸೋ 'ಕನ್ನಡಿಗಾಸ್ ಹೆಲ್ಪ್ ಲೈನ್'ಗೆ ಭರವಸೆಯನ್ನಿತ್ತರು. ಜೊತೆಗೆ ಇಲ್ಲಿ ಸಿಲುಕಿದ್ದ ಪ್ರವಾಸಿ ಕನ್ನಡಿಗರೊಬ್ಬರಿಗೆ ವೈದ್ಯಕೀಯ ಶಸ್ತ್ರಚಿಕಿತ್ಸೆಗೆ ಹಾಗೂ ಅಗತ್ಯವಿರುವವರಿಗೆ ಊಟ ಉಪಚಾರಕ್ಕೆ ಬೇಕಾದ ಹಣದ ಸಹಾಯವನ್ನು ನೀಡುವುದಾಗಿಯೂ ನಮಗೆ ಭರವಸೆ ನೀಡಿದ್ದರು. ಭಾರತೀಯ ರಾಯಭಾರ ಕಚೇರಿಯಿಂದ ' ನಮ್ಮ ಬಳಿ ಬಂದ 22 ಮಂದಿ ಅನಾರೋಗ್ಯಪೀಡಿತರಿಗೆ ಔಷಧಿಯನ್ನು ಕೊಲಾಸೋ ಅವರು ನೀಡಿದ ಹಣದಿಂದಲೇ ನೀಡಲಾಗಿದೆ. ಕೊಲಾಸೋ ಅವರು ನಮಗೆ ಬೇಕಾದ ಎಲ್ಲಾ ರೀತಿಯ ಹಣಕಾಸಿನ ನೆರವನ್ನು ನೀಡಿ ನಮಗೆ ಬೆನ್ನೆಲುಬಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ಇದೇ ವೇಳೆ ದುಬಾಯಿನಲ್ಲಿ ವಕ್ವಾಡಿ ಪ್ರವೀಣ್‌ಕುಮಾರ್ ಶೆಟ್ಟಿ ಹಾಗೂ ಇಸಾಕ್ ಹಾಜಿ ಅವರ ಹೋಟೆಲ್‌ಗಳಲ್ಲಿ, ಅಜ್ಮಾನ್‌ನಲ್ಲಿ ಧೀರಜ್ ಜೈನ್ ಅವರ ಫಾರ್ಮ್ ಹೌಸ್‌ನಲ್ಲಿ 235ಕ್ಕಿಂತಲೂ ಹೆಚ್ಚು ಜನರಿಗೆ ಉಚಿತವಾಗಿ ವಸತಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಜೊತೆಗೆ 71 ಜನರಿಗೆ ದುಬೈಯ ರಾಶಿದ್ ಆಸ್ಪತ್ರೆಯ ನುರಿತ ವೈದ್ಯರಿಂದ ವೈದ್ಯಕೀಯ ತಪಾಸಣೆ, 32 ಮಂದಿಗೆ ಔಷಧಿ ಒದಗಿಸುವ ಮೂಲಕ ವೈದ್ಯಕೀಯ ಸಹಾಯ ಮಾಡಲಾಗಿದೆ.

ಯುದ್ಧದ ಆರಂಭದ ವೇಳೆ ಸಂಕಷ್ಟದಲ್ಲಿದ್ದ ಜನರಿಗೆ ಸುಮಾರು 1180 ಊಟಗಳನ್ನು ವಿತರಿಸಲಾಗಿದೆ. ಜೊತೆಗೆ 70 ಆಹಾರೋತ್ಪನ್ನಗಳ ಕಿಟ್‌ಗಳನ್ನು ನೀಡಲಾಗಿದೆ. ತೊಂದರೆಗೀಡಾದ ಜನರನ್ನು ದುಬಾಯಿ, ಶಾರ್ಜಾ, ರಾಸ್ ಅಲ್ ಖೈಮಾ ಮತ್ತು ಅಬುಧಾಬಿ ವಿಮಾನ ನಿಲ್ದಾಣಗಳಿಗೆ ತೆರಳಲು ಖಾಸಗಿ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ಹಿದಾಯತ್ ಅಡ್ಡೂರು ತಿಳಿಸಿದರು.

'ಕನ್ನಡಿಗಾಸ್ ಹೆಲ್ಪ್ ಲೈನ್' ಜೊತೆ ಕೆಎನ್‌ಆರ್‌ಐ ಫೋರಂ ಯುಎಇ, ಬ್ಯಾರೀಸ್ ಚೇಂಬರ್ ಆಫ್ ಕಾಮರ್ಸ್ ಏಂಡ್ ಇಂಡಸ್ಟ್ರಿ (ಬಿಸಿಸಿಐ) ಯುಎಇ, ಕರ್ನಾಟಕ ಸಂಘ ದುಬಾಯಿ, ಕನ್ನಡಿಗರ ಕೂಟ ದುಬಾಯಿ, ಅಬುಧಾಬಿ ಕರ್ನಾಟಕ ಸಂಘ, ದುಬಾಯಿ ಅನಿವಾಸಿ ಕನ್ನಡಿಗರು, ಹೆಮ್ಮೆಯ ದುಬಾಯಿ ಕನ್ನಡ ಸಂಘ, ಒಕ್ಕಲಿಗರ ಸಂಘ ದುಬಾಯಿ, ಕನ್ನಡ ಪಾಠ ಶಾಲೆ ದುಬಾಯಿ, ಶಾರ್ಜಾ ಕರ್ನಾಟಕ ಸಂಘ, ದುಬಾಯಿ ಕೊಂಕಣ್ಸ್, ಬಿಸಿಎಫ್, ಕೆಸಿಎಫ್, ಮಂಕಿ ಕಮ್ಯೂನಿಟಿ, ಎಸ್‌ಕೆಎಸ್‌ಎಸ್ ವಿಖಾಯ ಯುಎಇ, ನೂರುಲ್ ಹುದಾ ಯುಎಇ ಕಮಿಟಿ, ದುಬಾಯಿ ಬ್ಯಾರೀಸ್, ಬದ್ರಿಯಾ ಫ್ರೆಂಡ್ಸ್, ಹಿದಾಯ ಫೌಂಡೇಶನ್, ಸಂಶುಲ್ ಉಲಮಾ ತೋಡಾರ್, ರಾಸ್ ಅಲ್ ಖೈಮಃ ಏಂಡ್ ಫುಜೈರಾಹ್ ಕರ್ನಾಟಕ ಸಂಘ, ಏಮ್ ಇಂಡಿಯಾ ಫೌಂಡೇಶನ್, ದಾರುಲ್ ನೂರ್, ಗಲ್ಫ್ ಕರ್ನಾಟಕ ಕುಟುಂಬ ಮತ್ತು ಗಲ್ಫ್ ಗೆಳತಿಯರು, ಮ್ಯಾಂಗ್ಲೂರ್ ಕೊಂಕಣ್ಸ್ ದುಬಾಯಿ, ಅಲ್ ಖಮರ್ ಟ್ರಸ್ಟ್ ಮೂಳೂರು, ಒಕ್ಕಲಿಗರ ಸಂಘ ಯುಎಇ, ರಾಕ್ ಕರ್ನಾಟಕ ಸಂಘ ಯುಎಇ ಸೇರಿದಂತೆ ಹಲವಾರು ಕನ್ನಡಪರ ಸಂಘಟನೆಗಳು ಕೈಜೋಡಿಸಿವೆ ಎಂದು ಹಿದಾಯತ್ ತಿಳಿಸಿದರು.

ಅಮೇರಿಕ-ಇಸ್ರೇಲ್ ಹಾಗೂ ಇರಾನ್ ಮಧ್ಯೆ ನಡೆಯುತ್ತಿರುವ ಯುದ್ಧದಿಂದ ಯುಎಇಯಲ್ಲಿ ಸಂಕಷ್ಟಕ್ಕೀಡಾಗಿದ್ದ ಪ್ರವಾಸಿ ಕನ್ನಡಿಗರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕಳುಹಿಸುವ ಜೊತೆಗೆ ವಿಸಿಟ್ ವೀಸಾ ಮೂಲಕ ಉದ್ಯೋಗವನ್ನು ಹರಸಿಬಂದ ಜನರಿಗೆ ವಸತಿ, ಊಟದ ವ್ಯವಸ್ಥೆ ಮಾಡುವ ಮೂಲಕ 'ಕನ್ನಡಿಗಾಸ್ ಹೆಲ್ಪ್ ಲೈನ್' ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದೆ. ಯುಎಇಯಲ್ಲಿ ಕೊರೋನಾ ಹಾಗೂ ಪ್ರವಾಹದ ವೇಳೆ ಸಂಕಷ್ಟದಕ್ಕಿದ್ದ ಕನ್ನಡಿಗರಿಗೆ ಸಹಾಯಹಸ್ತ ನೀಡುವ ಉದ್ದೇಶದಿಂದ ಹುಟ್ಟಿಕೊಂಡ 'ಕನ್ನಡಿಗಾಸ್ ಹೆಲ್ಪ್ ಲೈನ್' ಈ ಬಾರಿಯ ಯುದ್ಧದಿಂದ ಸಂಕಷ್ಟಕ್ಕೀಡಾದ ಕನ್ನಡಿಗರನ್ನು ರಕ್ಷಿಸುವ ಜೊತೆಗೆ



ಸುರಕ್ಷಿತವಾಗಿ ತಾಯ್ನಾಡಿಗೆ ಕಳುಹಿಸಲು ಮತ್ತೆ ತನ್ನ ಕಾರ್ಯಸೇವಾ ಚಟುವಟಿಕೆಯನ್ನು ಪುನರಾರಂಭಿಸಿರುವುದು ಸ್ತುತ್ಯಾರ್ಹ ಎಂದು ಕೆಎನ್‌ಆರ್‌ಐ ಫೋರಂ ಯುಎಇ ಅಧ್ಯಕ್ಷ ಪ್ರವೀಣ್‌ಕುಮಾರ್ ಶೆಟ್ಟಿ ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡಿಗಾಸ್ ಹೆಲ್ಪ್ ಲೈನ್ ನ ಸೇವಾ ಕಾರ್ಯಕ್ರಮಗಳಲ್ಲಿ ಆಧಾರ ಸ್ತಂಭಗಳಾಗಿ ಜೊತೆ ನಿಂತ ರೊನಾಲ್ಡ್ ಕೊಲಾಸೊ, ವಕ್ವಾಡಿ ಪ್ರವೀಣ್ ಶೆಟ್ಟಿ, ಇಸಾಕ್ ಹಾಜಿ, ಧೀರಜ್ ಜೈನ್, ಮಾಧವ್ ಕಿರಣ್ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಸರ್ವೋತ್ತಮ ಶೆಟ್ಟಿ ಅಬುಧಾಬಿ, ಶಶಿಧರ್ ನಾಗರಾಜಪ್ಪ, ಜೇಮ್ಸ್ ಮೆಂಡೋನ್ಸಾ, ಆಶ್ರಫ್ ಶ್ಹಾ, ಮಂಟೂರು, ಅರುಣ್ ಕುಮಾರ್, ದಯಾ ಕಿರೋಡಿಯನ್, ಮಲ್ಲಿಕಾರ್ಜುನ ಗೌಡ, ಕಿರಣ್ ಗೌಡ, ಸಮದ್ ಬಿರಾಲಿ, ಇಮ್ರಾನ್ ಎರ್ಮಾಳ್, ಮೂರ್ಝಾ, ಸಲೀಮ್ ಮೂಡಬಿದ್ರಿ, ರಫೀಕ್, ಯತೀಶ್ ಗೌಡ, ಕೆ.ಗವಸ್ಕರ್ ಸೇರಿದಂತೆ ಗಣ್ಯರನೇಕರು ಉಪಸ್ಥಿತರಿದ್ದು ಸೇವೆಯನ್ನು ಶ್ಲಾಘಿಸಿದರು.